ಬೋಧನೆ ಪ್ರಚೋದನೆ

ಲಂಕೇಶ್

28 ಸೆಪ್ಟೆಂಬರ್ 2016 ಪುಟ 20 ರೂ. 15/-



ಗಣಪತಿಗೆ ನಿಲ್ಲದ ನರಬಲಿ



ಕಾವೇರಿಗೆ ಕೊಳ್ಳಿ ಇಟ್ಟ ಚಾನೆಲ್‌ಗಳು

ಮಂಡ್ಯ

ಕಾವೇರಿ ಹೋರಾಟಕ್ಕೆ ಕೈಕೊಟ್ಟ ಶಾಸಕರು

ತುಮಕೂರು:

ಸೊಗಡು-ಬಸವರಾಜು ನಡುವೆ 'ಹಿಂದ' ಕೊಳ್ಳಿ

ಉತ್ತರ ಕನ್ನಡ

ಬಿಜೆಪಿಯತ್ತ ನಿರ್ಗತಿಕ ಪುಢಾರಿಗಳ ಚಿತ್ತ!

ಕೊಡಗು

ದನದ ವ್ಯಾಪಾರಿ ಮೇಲೆ ಚೆಡ್ಡಿಗಳ ಗುಂಡೇಟು



ಬಡವರು ಮತ್ತು ಬಡತನದ ಕುರಿತ

1.

ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಗೆ ಸಂಬಂಧಿಸಿದಂತೆ ಕಾಯ್ದೆ ಮತ್ತು ನೀತಿಯನ್ನು ರೂಪಿಸಲಾಯಿತು. ಬೇರೆ ಬೇರೆ ವರ್ಷಗಳಲ್ಲಿ ಇದು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಜಾರಿಯಾಯಿತು. ಕರ್ನಾಟಕದಲ್ಲೂ ಜಾರಿಯಾಗಿ ಈ ಕಲ್ಯಾಣ ಮಂಡಳಿಗೆ ಸೆಸ್ ಮೂಲಕ 2000 ಕೋಟಿ ರೂ.ಗಳಿಗೂ ಹೆಚ್ಚು ಹಣ ಸಂಗ್ರಹವಾಗಿದೆ. ಅಧಿಕಾರಿಗಳು ಇದನ್ನು ಸೂಕ್ತವಾಗಿ ಜಾರಿ ಮಾಡುತ್ತಿಲ್ಲ. ಹಾಗಾಗಿ ಇದರಲ್ಲಿ ಹೆಚ್ಚಿನ ಹಣ ಸದುಪಯೋಗವಾಗದೇ ಹಾಗೆಯೇ ಉಳಿದುಕೊಂಡಿದೆ. ಆದರೆ, ಇದು ವಸ್ತುಸ್ಥಿತಿಯ ಒಂದು ಮುಖ ಅಷ್ಟೇ. ಇನ್ನೊಂದು ಮುಖ ಏನೆಂದರೆ, ಕಟ್ಟಡ ಕಾರ್ಮಿಕರೂ ಈ ಮಂಡಳಿಗೆ ನೋಂದಾವಣಿ ಮಾಡಲು ವಿಶೇಷ ಆಸಕ್ತಿ ತೋರುತ್ತಿಲ್ಲ. ಕಾರ್ಮಿಕರ ಕಲ್ಯಾಣ ಮಂಡಳಿಗಳಲ್ಲಿ ಮಹಾರಾಷ್ಟ್ರದ ಹಮಾಲಿ ಕಾರ್ಮಿಕರ ಮಂಡಳಿ ಬಿಟ್ಟರೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯೇ ಹೆಚ್ಚು ಸೌಲಭ್ಯಗಳನ್ನು ಕಾರ್ಮಿಕರಿಗೆ ನೀಡುತ್ತಿದೆ. ಆದರೂ ಇದರ ಸೌಲಭ್ಯ ಪಡೆದುಕೊಳ್ಳಲು ಸದರಿ ಕಾರ್ಮಿಕರೇ ಮುಂದಾಗುತ್ತಿಲ್ಲ.

ಮನೆ ಕಟ್ಟಿಸಲು ತೊಡಗುವ ಮಧ್ಯಮ ವರ್ಗದ ಯಾರಿಗೇ ಆದರೂ ಎರಡು ತೊಂದರೆಗಳು ಬರುತ್ತವೆ. ಅವರು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಹಣ ಖರ್ಚಾಗುತ್ತಾ ಹೋಗಿ, ಕೊನೆಕೊನೆಯಲ್ಲಿ ಹೆಚ್ಚೆಚ್ಚು ಸಾಲ ಮಾಡುತ್ತಾ, 'ಯಾಕಾದರೂ ಮನೆ ಕಟ್ಟಿಸಲು ಕೈಹಾಕಿದೆವೋ' ಎಂಬ ಸ್ಥಿತಿ ಬರುತ್ತದೆ. ಎರಡನೆಯದಾಗಿ, ಅವರು ನಿಗದಿಮಾಡಿಕೊಂಡಿರುವ ಕಟ್ಟಡ ನಿರ್ಮಾಣ ಕಾರ್ಮಿಕರು ಪದೇಪದೇ ಕೈಕೊಡುತ್ತಾ, ಇವರ ಸಹವಾಸ ಸಾಕಪ್ಪಾ ಎಂದು ಬೈದುಕೊಳ್ಳುತ್ತಾ, ಆದರೆ ನೇರವಾಗಿ ಅವರಿಗೇ ಬೈಯ್ಯಲು ಆಗದೇ ಒದ್ದಾಡುತ್ತಾ ಇರುತ್ತಾರೆ.

ಹಾಗಾದರೆ, ಕಟ್ಟಡ ಕಾರ್ಮಿಕರು ಸಂಕಷ್ಟದಲ್ಲಿ ಇಲ್ಲವಾ? ಸಾಮಾನ್ಯವಾಗಿ ಮೇಲೆ ಹೇಳಲಾದ ಮಧ್ಯಮವರ್ಗದವರು ಈ ಕಾರ್ಮಿಕರ ಕೂಲಿಯನ್ನು ಹೊಂದಿಸಲೂ ಕಷ್ಟಪಡುತ್ತಾರೆ. ಅವರ ಪ್ರಕಾರ ಕನಿಷ್ಠ 300 ರೂ.ಗಳಿಂದ 600 ರೂ.ಗಳವರೆಗೆ ಕಟ್ಟಡ ಕಾರ್ಮಿಕರ ನಿತ್ಯದ ಸಂಪಾದನೆ ಇದೆ. ಕಳೆದ 15–20 ವರ್ಷಗಳಲ್ಲಿ ಈ ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗ ಕೊಟ್ಟಿರುವುದು ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರವಾಗಿದೆ. ಹಾಗಾದರೆ, ಬಡವರು/ಬಡತನ ಕಡಿಮೆಯಾಗಿದೆಯೇ?

2.

ಕಳೆದ ಆಗಸ್ಟ್ 20ರಂದು ಬೆಂಗಳೂರಿನಲ್ಲಿ ಭೂಮಿ ಮತ್ತು ವಸತಿ ವಂಚಿತರ ದೊಡ್ಡ ಹೋರಾಟವೊಂದು ನಡೆಯಿತು. ಆ ಹೋರಾಟದ ಕರಪತ್ರ, ಪೋಸ್ಟರ್ ಇತ್ಯಾದಿಗಳ ಸ್ವರೂಪದ ಕುರಿತು ಚರ್ಚೆ ನಡೆಯುವಾಗ 'ಬೆಂಗಳೂರಿಗೆ ಬಡವರು' ಎಂಬ ಶೀರ್ಷಿಕೆ ಕೊಡಬೇಕು ಎಂಬ ಪ್ರಸ್ತಾಪ ಬಂದಿತು. ಆಗ, ಸಭೆಯಲ್ಲಿದ್ದ ಕೆಲವರು ಅದನ್ನು ಬದಲಿಸಬೇಕೆಂದು ಕೇಳಿದರು. 'ಜನರು ತಮ್ಮನ್ನು ಬಡವರು ಎಂದು ಗುರುತಿಸಿಕೊಳ್ಳಲು ಬಯಸುತ್ತಿಲ್ಲ' ಎಂಬುದು ಅವರ ಅಭಿಪ್ರಾಯವಾಗಿತ್ತು. ಹೀಗಾಗಿ 'ಬಡವರು ಮತ್ತು ರೈತರಿಂದ ವಿಧಾನಸೌಧ ಚಲೋ' ಎಂದು ಶೀರ್ಷಿಕೆಯನ್ನು ಬದಲಿಸಬೇಕಾಯಿತು.

ತಮ್ಮನ್ನು ಬಡವರು ಎಂದು ಗುರುತಿಸಿಕೊಳ್ಳಬಯಸದ ಜನರು ಇದ್ದಾರೆ ಎಂಬುದು ವಾಸ್ತವ. ಬಿಪಿಎಲ್ ಕಾರ್ಡ್ ಬೇಕಾದಾಗ ಅಥವಾ ಕೆಲವು ಸರ್ಕಾರೀ ಸೌಲಭ್ಯಗಳು ಬೇಕೆಂದಾಗ ತಮ್ಮನ್ನು ಬಡವರು ಎಂದು ಬಿಂಬಿಸಿಕೊಳ್ಳುವವರಲ್ಲಿ ದೊಡ್ಡ ಸಂಖ್ಯೆಯ ಜನರು 'ಇವರು ಬಡವರು' ಎಂದು ಬೇರೆಯವರು ಹೇಳಿದಾಗ ಮುಜುಗರ ಅನುಭವಿಸುತ್ತಾರೆ. ತಾವು ಬಡವರಲ್ಲ ಎಂಬ ಭಾವನೆಯೂ ಅವರಲ್ಲಿದೆ ಮತ್ತು ಆ ರೀತಿ ಸಾರ್ವಜನಿಕವಾಗಿ ಅವರನ್ನು ವಿಭಾಗೀಕರಿಸುವುದೂ ಅವರಿಗೆ ಬೇಕಿಲ್ಲ.

3.

ಸೆಪ್ಟೆಂಬರ್ 11ರಂದು ಉಡುಪಿಯಲ್ಲಿ ರಥಬೀದಿ ಗೆಳೆಯರು ಆಯೋಜಿಸಿದ್ದ 'ಬಹುಮುಖಿ ಭಾರತ'ವೆಂಬ ಕಾರ್ಯಕ್ರಮದಲ್ಲಿ ಈ ಅಂಕಣಕಾರನೂ ಒಂದು ಗೋಷ್ಠಿಯಲ್ಲಿ ಮಾತಾಡುವುದಿತ್ತು. ಆ ಗೋಷ್ಠಿಯ ಶೀರ್ಷಿಕೆ 'ಭಾರತದ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಬಡವರ ಸ್ಥಿತಿಗತಿ' ಎಂದಾಗಿತ್ತು. ಈ ರೀತಿ ವಿವಿಧ ಸಮುದಾಯಗಳನ್ನು ಗುರುತಿಸುವಾಗ ಬಡವರು ಎಂದು ಬರೆಯುವ ವಾಡಿಕೆ ಸಾಮಾನ್ಯವಾಗಿ ಇಲ್ಲ. ಬದಲಿಗೆ ರೈತರು ಮತ್ತು ಕಾರ್ಮಿಕರು ಎಂದು ಹೇಳುವ ವಾಡಿಕೆ ಇದೆ. ರೈತರು ಮತ್ತು ಕಾರ್ಮಿಕರು ಎಂದು ಗುರುತಿಸುವುದನ್ನು ಮಾರ್ಕ್ಸ್‌ವಾದಿಗಳು ಬಳಕೆಗೆ ತಂದಿರಲೂಬಹುದು. ಏಕೆಂದರೆ ಇದೇ ವರ್ಗಗಳು ಸಂಪತ್ತನ್ನು ಸೃಷ್ಟಿಸುವ ದುಡಿಯುವ ಜನವಿಭಾಗಗಳಾಗಿವೆ ಎಂಬುದು ಅದಕ್ಕೆ ಕಾರಣ. ಆದರೆ, ಉಡುಪಿಯ ಕಾರ್ಯಕ್ರಮದಲ್ಲಿ ಅದೇಕೋ, ಶೋಷಿತ ಸಮುದಾಯಗಳ ಅಥವಾ ಜನಸಾಮಾನ್ಯರ ಪಟ್ಟಿಯಲ್ಲಿ ರೈತರು ಮತ್ತು ಕಾರ್ಮಿಕರ ಬದಲಿಗೆ



ಬಡವರು ಎಂದು ಹೇಳಲಾಗಿತ್ತು. ಹಾಗೆ ನೋಡಿದರೆ, ಸ್ಥಳೀಯ ಬಡವರ ಸಂಖ್ಯೆ ಉಡುಪಿ ಜಿಲ್ಲೆಯಲ್ಲಿ ಸಾಪೇಕ್ಷವಾಗಿ ಕಡಿಮೆ. ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ರಾಜ್ಯದಲ್ಲಿಯೇ ಉಡುಪಿ ಜಿಲ್ಲೆಯು ಮುಂಚೂಣಿಯಲ್ಲಿದೆ. ಈ ಜಿಲ್ಲೆಯಲ್ಲಂತೂ ಬಡವರೆಂದು ಗುರುತಿಸಿಕೊಳ್ಳುವುದು, ಕೆಲವು ದಿನನಿತ್ಯದ ವ್ಯವಹಾರಗಳಲ್ಲಿ ಚೌಕಾಸಿ ಮಾಡುವುದು, ಹೋಟೆಲಿನಲ್ಲಿ ಬೈಟೂ ಕಾಫಿ ಕೇಳುವುದನ್ನೂ ಅಪಮಾನವೆಂಬಂತೆ ಜನರು ಭಾವಿಸುತ್ತಾರೆ. ಆ ದೃಷ್ಟಿಯಿಂದಲೂ ಬಡವರು ಎನ್ನುವ ಪದಬಳಕೆ ಇಲ್ಲಿ ಸ್ವಲ್ಪ ಗಮನ ಸೆಳೆಯಿತು.

ಈಗ ಇನ್ನೂ ಕೆಲವು ವಿದ್ಯಮಾನಗಳನ್ನು ಗಮನಿಸೋಣ.

4.

ಇದೇ ಉಡುಪಿಯಲ್ಲಿ, ಕಾರ್ಯಕ್ರಮ ಮುಗಿದ ಸಂಜೆ ಒಂದು ಹೋಟೆಲಿನಲ್ಲಿ ಕೋಮು ಸೌಹಾರ್ದ ವೇದಿಕೆಯ ಕಾರ್ಯದರ್ಶಿ ಕೆ.ಎಲ್.ಅಶೋಕ್ ಅವರೊಡನೆ ಕಾಫಿ ಕುಡಿಯಲು ಹೋದಾಗ ಒಂದು ಆಶ್ಚರ್ಯಕರ ಘಟನೆ ನಡೆಯಿತು. ಪೂರ್ತಿ ಲೋಟ ಕಾಫಿ ಕುಡಿಯುವ ಅಭ್ಯಾಸವಿಲ್ಲದ್ದರಿಂದ, ಅಶೋಕ್ ಅವರು ಒಂದೇ ಕಾಫಿ ತರಲು ಆರ್ಡರ್ ಮಾಡಿದರು. ಬಹುಶಃ ಒಂದು ಲೋಟ ಕಾಫಿ ತಂದಾಗ, ಅದರಲ್ಲಿ ಅರ್ಧವನ್ನು ನೀರಿನ ಲೋಟಕ್ಕೆ ಹಾಕಿಕೊಂಡು ಕುಡಿಯಬಹುದು ಎಂಬ ಆಲೋಚನೆಯೇ ಎಂದು ಅವರನ್ನು ಕೇಳಿದೆ. 'ಇಲ್ಲಾ ಇನ್ನೊಂದು ಗ್ಲಾಸನ್ನು ಕೇಳಿದರಾಯಿತು, ಈಗ ಉಡುಪಿಯಲ್ಲಿ ಪರಿಸ್ಥಿತಿ ಬದಲಾಗುತ್ತಿದೆ' ಎಂದರು. 'ಉತ್ತರ ಕರ್ನಾಟಕದಿಂದ ಬಂದು ಇಲ್ಲಿ ನೆಲೆಸುತ್ತಿರುವ ಬಡ ಕೂಲಿ ಕಾರ್ಮಿಕರು ಉಡುಪಿಯ ಜನರಿಗೆ ಕೆಲವು ಹೊಸ ಅಭ್ಯಾಸಗಳನ್ನು ಮಾಡಿಸುತ್ತಿದ್ದಾರೆ' ಎಂದು ಅವರು ಹೇಳುತ್ತಿದ್ದಂತೆ, ಹೋಟೆಲಿನ ಸರ್ವರ್ ಒಂದು ಕಾಫಿ ತುಂಬಿದ ಲೋಟದೊಂದಿಗೆ, ಇನ್ನೊಂದು ಲೋಟವನ್ನು ತಾನೇ ತಂದಿಟ್ಟರು!

'ಈ ಕಾರ್ಮಿಕರು ಇಲ್ಲದೇ ಇಂದು ಉಡುಪಿಯ ಒಟ್ಟು ಆರ್ಥಿಕತೆಯನ್ನು ಅಥವಾ ಜನಜೀವನವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಇಲ್ಲಿನ ಜನರಿಗೂ ಇಂತಹ ಕೆಲವು ಅಭ್ಯಾಸಗಳಿಗೆ ಒಗ್ಗಿಕೊಳ್ಳಬೇಕಾಗಿ ಬಂದಿದೆ' ಎಂದರು ಅಶೋಕ್. ಉಡುಪಿಯಂತಹ ಒಂದು ಊರಿನಲ್ಲಿ ವರ್ಷಪೂರ್ತಿ ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಪ್ರವಾಸಿಗರು ಮಾಡಿಸಲಿಕ್ಕಾಗದ ಅಭ್ಯಾಸವನ್ನು ಈ ಕೂಲಿ ಕಾರ್ಮಿಕರು ಮಾಡಿಸಿದ್ದಾರೆ!! ಹಾಗಂತ ಇವರ ಸ್ಥಾನ ಇಲ್ಲಿ ಅತ್ಯುತ್ತಮವಾಗೇನೂ ಇಲ್ಲ. ಇಲ್ಲಿನ ಸ್ಥಳೀಯ ಜನರು ಮಾಡದ ದೈಹಿಕ ಶ್ರಮದ ಕೆಲಸಗಳನ್ನು ಮಾಡುವ, ಆಗಾಗ ಕುಡಿದು ದಾರಿಯಲ್ಲಿ ಅಲ್ಲಲ್ಲಿ ಒರಗಿಕೊಳ್ಳುವ ಇವರನ್ನು 'ಬಿಜಾಪುರ ಕೂಲಿಗಳು' ಎಂದು ಕರೆಯಲಾಗುತ್ತಿದೆ ಮತ್ತು ಅವರೆಲ್ಲರನ್ನೂ ಏಕವಚನದಲ್ಲಿ ಮಾತನಾಡಿಸುವುದು ಸ್ಥಳೀಯರಿಗೆ ಸಲೀಸಂತೆ.

5.

ಮೇಲೆ ಹೇಳಲಾದ ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿಯ ಹೋರಾಟದ ದಿನ ನಿರೀಕ್ಷೆಗಿಂತ ಸ್ವಲ್ಪ ಕಡಿಮೆ ಜನ ಬಂದಿದ್ದರಿಂದ, ಊಟದ ಪೊಟ್ಟಣಗಳು ಉಳಿದುಕೊಂಡು ಬಿಟ್ಟವು. ಅವನ್ನು ಯಾರಾದರೂ ಉಪಯೋಗ ಮಾಡಿಕೊಂಡರೆ ಒಳ್ಳೆಯದೆಂದು, ಫ್ರೀಡಂ ಪಾರ್ಕ್‌ನ ಒಂದು ಬದಿಯಲ್ಲೇ (ಅಥವಾ ಫ್ರೀಡಂ ಪಾರ್ಕ್‌ನ ಖಾಲಿ ಜಾಗದ ಬಹುಭಾಗವನ್ನು ಆಕ್ರಮಿಸಿಕೊಂಡಿರುವ) ಕಟ್ಟಡ ನಿರ್ಮಾಣ ಸೈಟ್‌ನ ಕಡೆ ತಿರುಗಿದೆವು. ಪತ್ರಿಕೆಯ ವರದಿಗಾರ ಮತ್ತು ಸ್ವರಾಜ್ ಅಭಿಯಾನದ ಅಧ್ಯಕ್ಷರಾದ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರು, ಆ ಸೈಟ್‌ನ ಈ ಬದಿಯಲ್ಲಿ ಬೀಗ ಹಾಕಲಾಗಿದ್ದ ತಗಡಿನ ಬಾಗಿಲಿನ ಮಧ್ಯೆ ಇಣುಕಿ ನೋಡಿದರು. ಆ ಕಡೆ ತೆಲುಗು ಮಾತನಾಡುತ್ತಿದ್ದ, ತಗಡಿನ ಶೆಡ್ಡುಗಳಲ್ಲಿ ವಾಸವಾಗಿದ್ದ ಕುಟುಂಬಗಳು ಕಂಡವು. ತೆಲುಗಿನಲ್ಲಿ ಅವರನ್ನು ಜೋರಾಗಿ ಕರೆದು, ಈ ರೀತಿ ಒಂದಷ್ಟು ಪೊಟ್ಟಣಗಳು ಉಳಿದುಕೊಂಡಿವೆಯೆಂದೂ, ನೀವು ಬಳಸುವುದಾದಲ್ಲಿ, ಗೇಟಿನ ಬಾಗಿಲು ತೆಗೆದಲ್ಲಿ ಅವನ್ನು ತಂದುಕೊಡುವುದಾಗಿಯೂ ಹೇಳಿದರು.

ಇನ್ನೊಂದು ಬದಿಯಲ್ಲಿದ್ದ ಗೇಟಿನ ಹತ್ತಿರ ಸೆಕ್ಯುರಿಟಿ ಇರುತ್ತಾನೆಂದೂ, ಆತ ಒಪ್ಪಿದರೆ ಬಂದು ಬಾಗಿಲು ತೆಗೆಯಬಹುದು, ನಮ್ಮ ಹತ್ತಿರ ಕೀ ಇಲ್ಲವೆಂದು ಆ ಕಟ್ಟಡ ಕಾರ್ಮಿಕರು ಹೇಳಿದರು. ಸರಿ ಎಂದು, ಆ ಇನ್ನೊಂದು ಭಾಗದ ಗೇಟನ್ನು ತಳ್ಳಿಕೊಂಡು ನಾವು ಒಳಹೋದರೆ, ಸೆಕ್ಯುರಿಟಿಯೆಂಬ ಸೆಕ್ಯುರಿಟಿ ವ್ಯಕ್ತಿ ಕಾಣಿಸಿದ. ಹಿಂದಿ ಮಾತನಾಡುತ್ತಿದ್ದ, ಬಹುಶಃ ಒರಿಸ್ಸಾ, ಬಿಹಾರದ ಭಾಗದಿಂದ ಬಂದಿರಬಹುದಾದ ವ್ಯಕ್ತಿ ನಮ್ಮನ್ನು ನೋಡಿ ಗಾಬರಿಯಾದ. ಬಾಗಿಲು ತೆಗೆದುಕೊಂಡು ಏಕೆ ಬಂದಿರಿ ಎಂದು ದಬಾಯಿಸಿ ಕೇಳುವಷ್ಟು ಧೈರ್ಯ ಆತನಿಗಿರಲಿಲ್ಲ; ಆದರೆ, ಹೀಗೆ ಬರುವಂತಿಲ್ಲ ಎಂಬುದನ್ನು ತನ್ನ ಆತಂಕದ ಮುಖಭಾವದಿಂದ ಸೂಚಿಸಿದ. ಆತನಿಗೆ ಹೇಳಬೇಕಾದ್ದನ್ನು ಹೇಳಿದೆವು. ತಾನು ಸೂಪರ್‌ವೈಸರ್‌ಅನ್ನು ಕೇಳಿ ಹೇಳುತ್ತೇನೆ ಎಂದು ಆತ ಹೇಳುತ್ತಿರುವಷ್ಟರಲ್ಲಿ, ತೆಲುಗು ಮಾತನಾಡುತ್ತಿದ್ದ ಮತ್ತು ಅಪಾರವಾದ ಧೈರ್ಯ ಮತ್ತು ಆತ್ಮವಿಶ್ವಾಸವಿದ್ದ ಇಬ್ಬರು ಅಲ್ಲಿಗೆ ಬಂದರು. ನಮ್ಮ ಮಾತು ಕೇಳಿದ ಆ 'ಸೂಪರ್‌ವೈಸರ್'ಗಳು 'ಆಯ್ತು ಹೋಗಿ, ಕಳಿಸುತ್ತೇವೆ' ಎಂದು ಹೇಳಿದರು. ಅವರು ಹೇಳಿದ ರೀತಿಯಲ್ಲಿ ಬಾಗಿಲು ತೆಗೆಸುವ ಇರಾದೆ ಇದ್ದಂತೆ ತೋರಲಿಲ್ಲ. ಬಹುಶಃ ಆಂಧ್ರ ಮೂಲದ ಕಂಟ್ರಾಕ್ಟರ್ ಒಬ್ಬನ ಅಡಿಯಲ್ಲಿ ಕೆಲಸ ಮಾಡುತ್ತಿರುವ, ಸಾಕಷ್ಟು ಫ್ಯೂಡಲ್ ಗತ್ತನ್ನು ತೋರುತ್ತಿದ್ದ ವ್ಯಕ್ತಿಗಳು ಅವರಾಗಿದ್ದರು.

ಹಿಂತಿರುಗಿ ಮೊದಲ ಗೇಟ್‌ನ ಬಳಿ ಬರುವಷ್ಟರಲ್ಲಿ ಆ ಗೇಟ್‌ನ ಅಡಿ ಇದ್ದ ಅತ್ಯಂತ ಚಿಕ್ಕ ಜಾಗದಿಂದ ಬಹುಶಃ 5–6 ವಯಸ್ಸು ಇರಬಹುದಾದ 5 ಚಿಕ್ಕ ಮಕ್ಕಳು, ತೂರಿ ಬಂದಿದ್ದರು. ನಮ್ಮಂಥವರು ಆಯಾಸದಿಂದ ಹೊತ್ತು ತರಬಹುದಾದ ಆ ಊಟದ ಪೊಟ್ಟಣಗಳ ಚೀಲವನ್ನು ಅವರು ಹುರುಪಿನಿಂದ ಹೊರಲು ಶಕ್ತರಾಗಿದ್ದರು. ಕೊನೆಗೆ ಅವರಿಂದ ಬಲವಂತವಾಗಿ ತೆಗೆದುಕೊಂಡು, ನಾವೇ ತೆಗೆದುಕೊಂಡು ಹೋಗಿ ಅಲ್ಲಿಟ್ಟೆವು. ಬಾಗಿಲನ್ನು ತೆಗೆಯದೇ, ಕೆಳಗಿನ ಚಿಕ್ಕ ಜಾಗದಿಂದಲೇ ಈ ಮಕ್ಕಳು ಆ ಚೀಲಗಳನ್ನು ತೂರಿಸಿದವು. ಒಳಗೆ ಈ ಚೀಲಗಳನ್ನು ಖುಷಿಯಿಂದಲೇ ತೆಗೆದುಕೊಂಡ ಮಹಿಳೆಯರು ನಮ್ಮತ್ತಲೂ ಕೃತಜ್ಞತೆಯ ನೋಟ ಬೀರಿದರು. ತಾವೇ ಗೇಟು ತಳ್ಳಿಕೊಂಡು ಬ... ಇಬ್ಬರು ಸ್ಥಳೀಯರನ್ನು ನೋಡಿ ಗಾಬರಿ ಪ... ಸಣಕಲ ಸೆಕ್ಯೂರಿಟಿಯೊಬ್ಬ, ಈ ಇಡೀ ಕಟ್ಟ... ಕಾರ್ಮಿಕ ಸಮುದಾಯವನ್ನು ಹೆದರಿಸಿಡಲು...

'ಬಡವರೆಂದು ಗುರುತಿಸಿಕೊಳ್ಳಲು ಬಯ... ಆದರೆ ಮಧ್ಯಾಹ್ನದ ಹಸಿವನ್ನು ತಡೆಯಲು ಸಾಧ್ಯವಾಗದೇ ಎರಡು ಗಂಟೆಗಳ ಕೆಳಗೆ ಪ್ರತಿಭಟನಾಕಾರರು ಊಟದ ಪೊಟ್ಟಣಗಳಿಗ... ಯುದ್ಧವನ್ನೇ ಸಾರಿದ್ದರು. ಆ ಸಂದರ್ಭದಲ್ಲಿ... ರೋಸಿಹೋದ ಕಾರ್ಯಕರ್ತರ್‍ಯಾರಾದರೂ ಕಟುವಾಗಿ ಮಾತಾಡಿದರೆ, 'ನಿಮ್ಮ ಊಟವೇ... ಎಂದು ಹೇಳುವಷ್ಟು ಸ್ವಾಭಿಮಾನವೂ ಅವರ... ಬಹುಶಃ ಆ ಕಾರಣದಿಂದಾಗಿಯೇ ಅವರು ... ಮತ್ತು ವಸತಿ ಹಕ್ಕಿಗಾಗಿ ಹೋರಾಟಕ್ಕೆ ಬಂದ... ಆದರೆ, ತಗಡಿನ ಕೋಟೆಯೊಳಗಿನ ಆ ಕಾ... ಅವರಿಗೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂ... ಕಾರ್ಡು ಸಿಕ್ಕಿರಬಹುದೇ? ಕನಿಷ್ಠ-ಅದರ ಬ... ಅವರು ಕೇಳಿದ್ದಾರಾ? ಈ ಕಾರ್ಮಿಕರು ಮ... ಕಟ್ಟುವ ಮಧ್ಯಮವರ್ಗದವರು ನೀಡಬಹುದ... ಕೂಲಿಯನ್ನು ನಿರಾಕರಿಸಿ, ಕೆಲಸದಿಂದ ತಪ್ಪಿ... ಶಕ್ಯರೇ?

6.

ಈ ಟಿಪ್ಪಣಿಗಳ ಮೂಲಕ ಭಾರತದಲ್ಲಿ ಬಡವರಿಲ್ಲವೆಂದು ಹೇಳುವ ಉದ್ದೇಶವಿಲ್ಲ. ಬಡವರೆಂದು ಜನರು ತೋರಿಸಿಕೊಳ್ಳಲು ಬಯಸುವುದಿಲ್ಲವೆಂದು ಹೇಳುವ ಉದ್ದೇಶ... ಆದರೆ, ನಾವು ಬಡವರನ್ನು ವರ್ಗೀಕರಿಸುವ... ಅನುಸರಿಸುವ ಮಾನದಂಡಗಳು ಅಷ್ಟು ಸರಿ... ಫ್ರೀಡಂ ಪಾರ್ಕಿನ ಹೋರಾಟದ ಜಾಗದಲ್ಲೇ... ಮಾಡುತ್ತಿರುವವರು ಒಂದು ರೀತಿಯ ನಿರ್ಗ... ಇಂತಹವರ ಸಂಖ್ಯೆಯೂ ಕೋಟ್ಯಾಂತರ ಇರುವ ದೇಶವಿದು. ಸ್ವಾಭಿಮಾನದ ಕಾರಣ... ನೋಯುತ್ತಿರುವವರು ಇನ್ನಷ್ಟು ಕೋಟಿಗಳ ಸಂಖ್ಯೆಯಲ್ಲಿದ್ದಾರೆ. ಸ್ವಾಭಿಮಾನ ಇರುವ ಕಾ... ತಾವೇ ಪ್ರಾಣ ತೆಗೆದುಕೊಂಡವರು ಈಗಾಗ... ಕೆಲವು ಲಕ್ಷಗಳ ಸಂಖ್ಯೆಯಾಗಿ ಹೋಗಿದ್ದಾರ... ಇವೆಲ್ಲವೂ ಬಹಳ ಸರಳೀಕೃತ ಮಾನದಂಡ... ವ್ಯಾಖ್ಯಾನಗಳ ಮೂಲಕ ವಿಭಾಗೀಕರಿಸಬಹು... ವಿವರಿಸಬಹುದಾದ ಸಂಗತಿಗಳಲ್ಲ. ಬಡತನ... ಕುರಿತ ಒಂದು ಅತ್ಯುತ್ತಮ ವಿಶ್ಲೇಷಣೆಯನ್ನು ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ... ವಿಶ್ವವಿದ್ಯಾಲಯದ ವಿದ್ವಾಂಸರಾದ ಡಾ.ಚಂ... ಪೂಜಾರಿಯವರು ತಮ್ಮ 'ರಾಜಕೀಯದ ಬ... ಕೃತಿಯಲ್ಲಿ ಮಾಡಿದ್ದಾರೆ. ಆ ಪುಸ್ತಕವು ಎಷ್ಟು... ಚರ್ಚೆಯಾಗಬೇಕಿತ್ತೋ, ಅಷ್ಟು ಚರ್ಚೆಯಾ...


7.

ಇಂತಿಪ್ಪ ನಮ್ಮ ದೇಶದೊಳಗೆ ಮೋದಿ ... ಒಂದು ಹೊಸ ಸಾಹಸಕ್ಕೆ ಕೈಹಾಕಿದೆ. ಅದು ... ಬಡತನದ ಮಾನದಂಡಗಳ ಮರು–ವ್ಯಾಖ್ಯಾ... ನೀತಿ ಆಯೋಗವೆಂಬ ಅನೀತಿ ಆಯೋಗ... ಬತ್ತಳಿಕೆಯಿಂದ ಹೊರತೆಗೆಯುತ್ತಿರುವ ದೇಶ... ಕಾರ್ಪೊರೇಟ್‌ಗಳ ಪಾಲು ಮಾಡುವ ಬಾ... ಇದೂ ಒಂದಾಗಿರುವ ಸಾಧ್ಯತೆಯಿದೆ. ನೀರಿ... ಬಳಕೆಯ ಕುರಿತು ಅವರು ಈಗ ಹೊರಬಿ... ಕೆಲವು ವರದಿ/ಮಸೂದೆ/ಕರಡುಗಳಲ್ಲಿ ಅಂ... ಅಪಾಯಕಾರಿ ಅಂಶಗಳಿವೆಯೆಂದು ಈಗಾ... ಜನಪರ ಚಿಂತಕರು ಹೇಳುತ್ತಿದ್ದಾರೆ. ಇದೇ ಆಯೋಗದ ಉಪಾಧ್ಯಕ್ಷ ಅರವಿಂದ್ ಪನಗ... ನೇತೃತ್ವದ ಕಾರ್ಯಪಡೆಯು ಬಿಪಿಎಲ್ (ಬ... ರೇಖೆಯ ಕೆಳಗಿರುವ) ಜನರನ್ನು ಗುರುತಿಸ... ಹೊಸದೊಂದು ಕಾರ್ಯಪಡೆ ರಚಿಸಲು ಸ... ಮಾಡಿದೆ. ಇದು ದೇಶದ ಬಡವರ ಸಂಖ್ಯೆ... ಮತ್ತು ಅದರ ವಿಭಾಗೀಕರಣ ಹಾಗೂ ಬಡ... ನಿರ್ಮೂಲನೆಯ ಕಾರ್ಯಕ್ರಮಗಳನ್ನು ಸಂ... ಕಾರ್ಪೋರೇಟ್ ಹಿತಾಸಕ್ತಿಗನುಗುಣವಾಗಿ ... ವ್ಯಾಖ್ಯಾನ ಮಾಡಲಿದೆ.

ಬಡವರಲ್ಲಿನ ತೀರಾ ಕೆಳಗಿನ ವಿಭಾಗ ... ಅರಿಯುವ ಸಾಧ್ಯತೆಯೇ ಇಲ್ಲ. ಅದರಲ್ಲಿನ ಮಧ್ಯಮ ವಿಭಾಗ ತನ್ನ ಕೆಲವು ಅಗತ್ಯಗಳಿಗ... ಹೋರಾಟ ಮಾಡುತ್ತದೆ. ಅದರಲ್ಲಿನ ಮೇಲ... ತನ್ನನ್ನು ಬಡವರ ವಿಭಾಗದಲ್ಲಿ ಗುರುತಿಸಿಕೊ... ಇಷ್ಟಪಡುವುದಿಲ್ಲ. ಇದನ್ನು ಸೂಕ್ತವಾಗಿ ನಿ... ಡಾ.ಚಂದ್ರ ಪೂಜಾರಿಯಂಥವರು ಪುಸ್ತಕ ... ಅದನ್ನು ನಾವ್ಯಾರೂ ಓದುವುದಿಲ್ಲ.

ಬಡವರ ಪಾಡು ಯಾರಿಗೂ ಬೇಡ.

ಕಾವೇರಿ: ರಾಜಕೀಯ ಕುತಂತ್ರ ಮತ್ತು
ಟಿಆರ್‌ಪಿ ರಗಳೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


ಳೆದ ಐದು ದಿನಗಳಿಂದ ಕರ್ನಾಟಕದಲ್ಲಿ ನಡೆದ ಕಾವೇರಿ ಗಲಾಟೆಗೆ ಮೂಲ ರಣ ಪೆದ್ದು ಟಿವಿ ಚಾನೆಲ್‌ಗಳು ಮತ್ತು ಉಚ್ಚ ಯಾಲಯವು ನೀಡಿದ ತರ್ಕಹೀನ ಹಾಗೂ ವೇದನಾಶೂನ್ಯ ತೀರ್ಮಾನ. ಇಲ್ಲಿ ಬೆಂಗಳೂರು ಉರಿಯುತ್ತಿದ್ದರೆ ಅತ್ತ ಕೇಂದ್ರ ಸರ್ಕಾರ ತನಗೂ ಕ್ಕೂ ಸಂಬಂಧವೇ ಇಲ್ಲದಂತೆ ಮೌನ ವಹಿಸಿತ್ತು. ಗೆಯೇ ರಾಜ್ಯದ ಹಿತಾಸಕ್ತಿಗಾಗಿ ತಮ್ಮ ಪಕ್ಷ ತ್ತು ಸಿದ್ಧಾಂತಗಳನ್ನು ಪಕ್ಕಕ್ಕಿಟ್ಟು ಒಂದಾಗಬೇಕಿದ್ದ ರೋಧ ಪಕ್ಷಗಳು ಉರಿಯುತ್ತಿದ್ದ ಬೆಂಕಿಯಲ್ಲಿ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿದ್ದವು. ದಾಹರಣೆಗೆ, ಇಂಗ್ಲಿಷ್ ಟಿವಿ ಚಾನೆಲ್ ದು ಬಿಜೆಪಿ ನಾಯಕ ಯಡಿಯೂರಪ್ಪನನ್ನು ದರ್ಶಿಸಿದಾಗ ಆತ ಮೊದಲು "ಸಿದ್ದರಾಮಯ್ಯ ರ್ವಪಕ್ಷ ಸಭೆಯಲ್ಲಿ ತಮಿಳುನಾಡಿಗೆ ನೀರು ಸುವುದಿಲ್ಲ ಎಂದಿದ್ದರು. ಆದರೆ ಆಮೇಲೆ ಅವರು ಪ್ರೀಂಕೋರ್ಟ್ ಆದೇಶದಂತೆ ನೀರು ಹರಿಸುತ್ತೇವೆ ದರು" ಎಂದು ಹೇಳಿದರು. ಆಗ ಆ ಟಿವಿ ನೆಲ್‌ನ ಆ್ಯಂಕರ್ "ನಿಮ್ಮ ಪ್ರಕಾರ ಕರ್ನಾಟಕ ರ್ಕಾರ ತಮಿಳುನಾಡಿಗೆ ನೀರು ಹರಿಸಬೇಕೋ ಡವೋ?" ಎಂದು ಮತ್ತೆಮತ್ತೆ ಕೇಳಿದಾಗ ಯಡ್ಡಿ ಇಲ್ಲದೆ "ಹರಿಸಬೇಕು" ಎಂದರು. ಹಾಗಾದರೆ ಡ್ಡಿ ಸಾಹೇಬರು ಯಾಕೆ ಸರ್ವಪಕ್ಷ ಸಭೆಯಲ್ಲಿ ರು ಹರಿಸದಂತೆ ಒತ್ತಡ ತಂದರು? ಇದು ರೆಲ್ಲರ ನೀಚ ರಾಜಕಾರಣ.

ಇನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಗಾರಪ್ಪನವರನ್ನು ಹೊಗಳಿದ್ದೋ ಹೊಗಳಿದ್ದು. 91ರಲ್ಲಿ ಬಂಗಾರಪ್ಪ ರಾಜ್ಯದ ಹಿತಾಸಕ್ತಿಯ ಗುಣವಾಗಿ ಸುಗ್ರೀವಾಜ್ಞೆ ಹೊರಡಿಸಿದ್ದರು. ಟ್ಟ ತಾಕತ್ತು ಕಾಂಗ್ರೆಸ್ ಸರ್ಕಾರಕ್ಕಿಲ್ಲ" ಎಂದೆಲ್ಲ ಮಿಲೆಬ್ಬಿಸಿದರು. ಆದರೆ ವಾಸ್ತವವಾಗಿ ಆಮೇಲೆ ಗಾರಪ್ಪನವರ ಸರ್ಕಾರ ತನ್ನ ನಡೆಯ ಬಗ್ಗೆ ಷರತ್ ಕ್ಷಮಾಪಣೆ ಯಾಚಿಸಿ ನೀರನ್ನು ಲೇಬೇಕಾಯಿತು ಎಂಬುದನ್ನು ಅವರ ಭಕ್ತರು ರೆತಿದ್ದರು. ಹಾಗೆಯೇ 2003ರಲ್ಲಿ ಎಸ್. .ಕೃಷ್ಣರ ಸರ್ಕಾರ ಟ್ರಿಬ್ಯುನಲ್ ತೀರ್ಮಾನ ರಿಸುವ ಪ್ರಯತ್ನ ಮಾಡಿ ಬೆಂಗಳೂರಿನಿಂದ ಡ್ಯತನಕ ಪಾದಯಾತ್ರೆ ಮಾಡಿದ್ದೂ ಆಯಿತು. ಮೇಲೇನಾಯಿತು? ಅವರ ಸರ್ಕಾರ ಕೂಡ ಪ್ಪಿಗೆ ಯಾಚಿಸಿ ನೀರನ್ನು ಹರಿಸಿತು.

ಕಾವೇರಿ ವಿಷಯದಲ್ಲಿ ಅಪ್ಪಟ 'ರಾಜ್ಯಭಕ್ತ'ರಂತೆ ರ್ಸಿದ ಚೆಡ್ಡಿಗಳೂ ಜಗದೀಶ್ ಶೆಟ್ಟರ್ ರು ಮುಖ್ಯಮಂತ್ರಿಯಾಗಿದ್ದಾಗ 'ರಾಜ್ಯದ ಸಕ್ತಿ'ಯ ವಿರುದ್ಧವಾಗಿ ತಮಿಳುನಾಡಿಗೆ ರು ಹರಿಸಿದ್ದನ್ನು ಮರೆತಿದ್ದರು. ಯಾಕೆಂದರೆ ರ್ ಮುಖ್ಯಮಂತ್ರಿಯಾಗಿದ್ದಾಗ ಈಗಿರುವ ಸ್ಥಿತಿಗಿಂತಲೂ ಕೆಟ್ಟ ಸ್ಥಿತಿ ಇದ್ದಾಗಲೂ ಕೋರ್ಟ್ ಶದಂತೆ ನೀರನ್ನು ಹರಿಸಲೇಬೇಕಾಗಿತ್ತು. ರೂ ಇವರೆಲ್ಲ ಈ ಬಾರಿ ಸಿದ್ದು ಸರ್ಕಾರ ಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಬೇಕು ದು ಒತ್ತಡ ತಂದದ್ದು ಯಾಕೆ? ಹಾಗೊಮ್ಮೆ ಲಂಘಿಸಿದ್ದರೆ ರಾಜ್ಯಕ್ಕೆ ಆಗುವ ಅನಾಹುತದ ವು ಅವರಿಗೆ ಇಲ್ಲ ಎಂದು ಹೇಳಲಾಗುವುದಿಲ್ಲ.

ಒಟ್ಟಾರೆ ವಿರೋಧ ಪಕ್ಷಗಳು ಮತ್ತು ತಲೆಕೆಟ್ಟ ಚಾನೆಲ್‌ಗಳಿಂದಾಗಿ ಅನವಶ್ಯಕವಾಗಿ ಕನ್ನಡಿಗರು ಳು ವಿರೋಧಿಗಳೆಂದೂ, ಕಾನೂನನ್ನು ಲಂಘಿಸುವವರು ಎಂದೂ ರಾಷ್ಟ್ರದ ಮುಂದೆ ತರಾದರು. ಇದು ಇವರೆಲ್ಲರೂ ಸೇರಿ ಕಾವೇರಿ ರಾಟಕ್ಕೆ ಮಾಡಿದ ಅನ್ಯಾಯ ಮಾತ್ರವಲ್ಲ, ಈ ದ ಜನರಿಗೆ ಮಾಡಿದ ಅಪಮಾನ ಕೂಡ ು.

ಇದೆಲ್ಲದರ ಮಧ್ಯೆ ಬೆಂಗಳೂರಿನಲ್ಲಿ ಳುನಾಡಿನ ವಾಹನಗಳಿಗೆ ಬೆಂಕಿ ಹಚ್ಚಿದವರು ರು? ಇಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಇಲ್ಲ ಎಂಬಂತೆ ಬಿಂಬಿಸಿದವರು ಯಾರು? ಲ್ಲಿ ಕಾಂಗ್ರೆಸ್‌ನಲ್ಲೇ ಇರುವ ಸಿದ್ದು ೋಧಿಗಳು ಮತ್ತು ವಿರೋಧ ಪಕ್ಷಗಳ ಪಾತ್ರ ಇದೆ ಎಂಬುದನ್ನು ಯಾರು ಬೇಕಾದರೂ ಹಿಸಬಹುದು. ಯಾಕೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಾಂತಿ ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎಂದು ಕಾಂಗ್ರೆಸ್ ಹೈಕಮಾಂಡಿಗೆ ಮನವರಿಕೆ ಮಾಡಿದರೆ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ತಮಗೆ ಆ ಹುದ್ದೆ



ದೊರಕಬಹುದು ಎಂಬುದು ಹಲವು ಕಾಂಗ್ರೆಸ್ ನೇತಾರರ ಲೆಕ್ಕಾಚಾರ ಒಂದೆಡೆಯಾದರೆ ಚೆಡ್ಡಿಗಳದ್ದು ಇನ್ನೊಂದು ಲೆಕ್ಕಾಚಾರ. ಹೇಗೆ ಉತ್ತರಾಖಂಡದಲ್ಲಿ ಚೆಡ್ಡಿ ರಾಜ್ಯಪಾಲರನ್ನು ಉಪಯೋಗಿಸಿಕೊಂಡು ಅಲ್ಲಿನ ಮುಖ್ಯಮಂತ್ರಿ ಹರೀಶ್ ರಾವತ್ ಅವರ ಸರ್ಕಾರವನ್ನು ಉರುಳಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿತ್ತೋ ಹಾಗೆಯೇ ಈಗಿನ ಆರೆಸ್ಸೆಸ್ ರಾಜ್ಯಪಾಲ ವಾಜುಬಾಯಿ ವಾಲಾನನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವ ಕುತಂತ್ರ ಬಿಜೆಪಿಯದ್ದಾಗಿರಲಿಕ್ಕೂ ಸಾಕು. ಯಾಕೆಂದರೆ ಕಾಂಗ್ರೆಸ್‌ಗಾಗಲಿ, ಬಿಜೆಪಿಗಾಗಲಿ ಸಿದ್ದು ಎಂಬ ಹಿಂದುಳಿದ ವರ್ಗದ ವ್ಯಕ್ತಿ ತನ್ನ ಅವಧಿಯನ್ನು ಪೂರ್ಣಗೊಳಿಸುವುದು ಬೇಡ. ಇದು ಬರೀ ಸಿದ್ದುಗೆ ಸಂಬಂಧಿಸಿದ್ದಲ್ಲ. ಸುಮ್ಮನೆ ನೋಡಿ: ದೇವರಾಜ್ ಅರಸ್ ಅವರನ್ನು ಇಂದಿರಾ ಗಾಂಧಿ 1980ರಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತೆಸೆದ ನಂತರ ಯಾವ ಹಿಂದುಳಿದ ವರ್ಗದ ವ್ಯಕ್ತಿಯೂ ಮುಖ್ಯಮಂತ್ರಿಯಾಗಿ ತನ್ನ ಅಧಿಕಾರಾವಧಿಯನ್ನು ಸಂಪೂರ್ಣವಾಗಿ ಕಳೆದಿಲ್ಲ. ಬಂಗಾರಪ್ಪ ಇದಕ್ಕೆ ಸಾಕ್ಷಿ. ಇನ್ನು ಸಿದ್ದು ಐದು ವರ್ಷ ಪೂರೈಸಲು ಮೇಲುಜಾತಿಯ ರಾಜಕಾರಣಿಗಳು ಮತ್ತು ಅವರ ಪಕ್ಷಗಳು ಬಿಟ್ಟಾವೆಯೇ?

ಇನ್ನು ಟಿಆರ್‌ಪಿ ಯುದ್ಧಕ್ಕೆ ಬಿದ್ದಿರುವ ಟಿವಿ ಚಾನಲ್‌ಗಳ ಅವಿವೇಕ ದಿನದಿಂದ ದಿನಕ್ಕೆ ಉಲ್ಬಣಿಸುತ್ತಿದೆ. ಬಿಜೆಪಿ ಸರ್ಕಾರ ಇದ್ದಾಗ ಅವುಗಳಿಗೆ ಸುಲಭವಾಗಿ ಸಾಮಗ್ರಿ ಸಿಗುತ್ತಿದ್ದವು. ಬಳ್ಳಾರಿಯ ಗಣಿಕಳ್ಳರ ಆಟಾಟೋಪ, ನರ್ಸ್ ರೇಣುಕಾಚಾರಿಯ ಅಕ್ರಮ ಸಂಬಂಧ, ಚೆಡ್ಡಿ ಮತ್ತು ಬಿಜೆಪಿಗಳ ನಡುವಿನ ರೆಸಾರ್ಟ್ ಪೈಪೋಟಿ, ರಘುಪತಿ ಭಟ್ಟನ ಪತ್ನಿಯ ದುರಂತ, ವಿಧಾನಸಭೆಯಲ್ಲಿ ಸೆಕ್ಸ್ ಕ್ಲಿಪಿಂಗ್ ವೀಕ್ಷಣೆ, ಯಡ್ಡಿಯ ರಾಜೀನಾಮೆ ಮತ್ತು ಆನಂತರದ ಜೈಲುವಾಸ, ಲೋಕಾಯುಕ್ತರ ವಿಚಾರಣೆ, ಕಟ್ಟಾ–ರೆಡ್ಡಿ–ಹಾಲಪ್ಪ– ಇತ್ಯಾದಿಗಳು ಜೈಲುಪಾಲಾಗಿದ್ದು ... ಒಂದಾ ಎರಡಾ? ಆದರೆ ಕಾಂಗ್ರೆಸ್ ಸರ್ಕಾರ ಬಂದಿದ್ದೇ ತಡ, ಟಿವಿ ಚಾನಲ್‌ಗಳು ಥಂಡಾ ಹೊಡೆಯಲಾರಂಭಿಸಿದವು. ಕಳೆದ ಮೂರು ವರ್ಷ ಅವುಗಳಿಗೆ ಸಿಕ್ಕಿರುವುದಾದರೂ ಎಂತಹ 'ಹಗರಣ'ಗಳು? ಸಿದ್ದು ತೊಡುತ್ತಿದ್ದ ವಾಚ್, ಅವರ ಕಾರ್ ಮೇಲೆ ಕೂತ ಕಾಗೆ, ಇತ್ಯಾದಿ!!

ಇಂತಹ ಪರಿಸ್ಥಿತಿಯಲ್ಲಿ ಆ ಅಬ್ಬೆಪಾರಿಗಳು ತಮ್ಮ ಚಾನೆಲ್‌ಗಳನ್ನು 24 ಗಂಟೆ ನಡೆಸುವುದಾದರೂ ಹೇಗೆ? ಅದಕ್ಕೆ ಚಾನೆಲ್‌ಗಳು ತೀರ್ಥಹಳ್ಳಿಯ ನಂದಿತಾಳ ಮೇಲಾದ ಕಪೋಲಕಲ್ಪಿತ 'ಅತ್ಯಾಚಾರ' ಪ್ರಕರಣವನ್ನು ಅಲ್ಪಸಂಖ್ಯಾತರ ತಲೆಗೆ ಕಟ್ಟುವ ಕೆಲಸವನ್ನು ಮಾಡಿದವು. ನಟ ಶಿವರಾಜ್ ಕುಮಾರ್ ಅವರ ಪುತ್ರಿಯ ಮದುವೆಯನ್ನು 'ದೊಡ್ಡಮನೆ ಮದುವೆ' ಅಂತ ಮೂರು ದಿನಗಳ ಕಾಲ ಗಿಂಜಿದವು. ಐಎಎಸ್ ಅಧಿಕಾರಿ ಡಿ.ಕೆ. ರವಿಯದ್ದು ಆತ್ಮಹತ್ಯೆ ಅಲ್ಲ, ಕೊಲೆ ಎಂದು ಬೊಬ್ಬೆ ಹಾಕಿದವು. 'ಹುಚ್ಚ' ವೆಂಕಟ್ ಎಂಬ ಅಮಾಯಕನನ್ನು ತಮ್ಮ ಸ್ಟುಡಿಯೋಗಳಲ್ಲಿ ಕುಳ್ಳಿರಿಸಿಕೊಂಡು ಈ ರಾಜ್ಯದ ಆರು ಕೋಟಿ ಜನ ಆತನ ಅಭಿಮಾನಿಗಳು ಎಂಬಂತೆ ಚಿತ್ರಿಸಿದವು. ಅಷ್ಟೇ ಅಲ್ಲ, ಆತನ ಬಾಯಿಂದ ಅಂಬೇಡ್ಕರ್ ಅವರ ವಿರುದ್ಧ ಮಾತುಗಳನ್ನು ಹೊರಡಿಸಿ ಪಾಪ ಆತನ ಮುಖಕ್ಕೆ ಯಾರೋ ಮಸಿ ಬಳಿಯುವಂತೆ ಮಾಡಿದರು. ಯಾರಿಗೋ ಸಹಾಯ ಮಾಡಲು ಹೋಗಿ ಅವಘಡದಲ್ಲಿ ಸಿಕ್ಕಿಹಾಕಿಕೊಂಡ ನಿಷ್ಪಾಪಿ ಡಿವೈಎಸ್‌ಪಿ ಕಲ್ಲಪ್ಪ ಹಂಡಿಭಾಗ್‌ನನ್ನು 'ಕಳ್ಳ' ಎಂದು ಕರೆದು ಆತನನ್ನು ಆತ್ಮಹತ್ಯೆಗೆ ದೂಡುವ ಮೂಲಕ ಟಿವಿ ಚಾನೆಲ್‌ಗಳು ಕೊಲೆ ಪಾತಕಿಗಳೂ ಆದವು.


ಡಿವೈಎಸ್‌ಪಿ ಗಣಪತಿಯ ಸಾವನ್ನೂ ತಮ್ಮ ಟಿಆರ್‌ಪಿ ಯುದ್ಧಕ್ಕೆ ಸಾಮಗ್ರಿಯಾಗಿ ಬಳಸಿಕೊಂಡವು. ನಟಿ ರಮ್ಯಾ 'ಪಾಕಿಸ್ತಾನದ ಜನರೂ ನಮ್ಮಂತೆ ಇದ್ದಾರೆ' ಎಂದಿದ್ದನ್ನೇ 'ರಮ್ಯಾ ಪಾಕ್ ಪ್ರೇಮಿ' ಎಂದು ತಿರುಚಿ ಅದನ್ನು ಐದು ದಿನಗಳ ಕಾಲ ಜಗ್ಗಾಡಿದವು. ಇಂತಹ ಕುತಂತ್ರಿ ಟಿವಿ ಚಾನೆಲ್‌ಗಳಿಗೆ ಕಾವೇರಿಯಂತಹ ವಿವಾದ ಸಿಕ್ಕರೆ ಅವು ಸುಮ್ಮನೆ ಕೂರುವುದಾದರೂ ಹೇಗೆ?

ಕಾವೇರಿ ಸಮಸ್ಯೆ ಇಂದು ನಿನ್ನೆಯದಲ್ಲ. ಇದು ಬ್ರಿಟಿಷರ ಕಾಲದಿಂದಲೂ ಸಾಗಿ ಬಂದಿರುವ ಸಮಸ್ಯೆ. ಮಳೆ ಸರಿಯಾಗಿ ಸುರಿದಾಗ ಇಲ್ಲದ ಸಮಸ್ಯೆ ಪ್ರತಿ ಬಾರಿ ಮಳೆ ಕೈಕೊಟ್ಟಾಗ ಉದ್ಭವಿಸುತ್ತದೆ. ಈ ವರ್ಷ ಮಳೆ ವೈಫಲ್ಯವಾಗಿದ್ದರಿಂದ ಮತ್ತು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಎಂದಿನಂತೆ ಸುಪ್ರೀಂಕೋರ್ಟ್ ಮುಂದೆ ತಕರಾರು ಮಾಡಿದ್ದರಿಂದ ಬೆಂಗಳೂರು ಹತ್ತಿ ಉರಿಯುವಂತಾಯಿತು. ಇನ್ನು ಕೆಲದಿನಗಳಲ್ಲಿ ತಮಿಳುನಾಡಿನಲ್ಲಿ ಮಳೆ ಸುರಿದರೆ ಇಲ್ಲಿನ ಬೆಂಕಿ ಅಷ್ಟೇ ವೇಗವಾಗಿ ಶಮನಗೊಳ್ಳುತ್ತದೆ. ಆಗ ಅದೆಷ್ಟು ಟಿಎಂಸಿ ನೀರು ಹರಿದುಹೋಯಿತು ಎಂದು ಕೇಳಲು ಯಾರೂ ಇರುವುದಿಲ್ಲ.

ಕನ್ನಡಿಗರು ತಮಿಳರ ವಿರೋಧಿಗಳಲ್ಲ. ತಮಿಳರೂ ಕನ್ನಡಿಗರ ವಿರೋಧಿಗಳಲ್ಲ. ಕರ್ನಾಟಕದ ರೈತರು ತಮಿಳುನಾಡಿನ ರೈತರ ಶತ್ರುಗಳಲ್ಲ. ಅಲ್ಲಿನ ರೈತರೂ ನಮ್ಮ ರೈತರ ಶತ್ರುಗಳಲ್ಲ. ತಮಿಳು ಕವಿ ತಿರುವಳ್ಳುವರ್ ನಮಗೂ ಬೇಕು; ಕನ್ನಡ ಕವಿ ಸರ್ವಜ್ಞ ತಮಿಳರಿಗೂ ಬೇಕು. ಹಾಗೆಯೇ ಕಾವೇರಿ ನಮಗೂ ಬೇಕು, ಅವರಿಗೂ ಬೇಕು. ಸಮಸ್ಯೆ ಇರುವುದು ನಮ್ಮೆಲ್ಲರ ಅಗತ್ಯಕ್ಕೆ ಅನುಗುಣವಾಗಿ ಕಾವೇರಿಯ ನೀರನ್ನು ಕಷ್ಟಕಾಲದಲ್ಲಿ ಯಾವ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು ಎನ್ನುವುದು. ಹಾಗೆಯೇ ಎರಡೂ ರಾಜ್ಯಗಳಲ್ಲಿ ಈಗ ಅಂತರ್ಜಲದ ಮಟ್ಟ ಕುಸಿಯುತ್ತಿದೆ ಮಾತ್ರವಲ್ಲ, ಕಾಡು ನಾಶ ಮತ್ತು ಪರಿಸರ ಹಾನಿಯಿಂದಾಗಿ ಕಾವೇರಿ ನದಿಯೇ ಪ್ರತಿವರ್ಷ ಸೊರಗುತ್ತಿದ್ದಾಳೆ. ಪರಿಸ್ಥಿತಿ ಹೀಗಿರುವಾಗ ಕನ್ನಡಿಗರು ಮತ್ತು ತಮಿಳರು ಕಾವೇರಿಯನ್ನು ಹೇಗೆ ಹಂಚಿಕೊಳ್ಳಬೇಕೆಂದು ಚರ್ಚಿಸಬೇಕಿದೆ ಮತ್ತು ಅಷ್ಟೇ ಮುಖ್ಯವಾಗಿ ಆಕೆಯನ್ನು ಹೇಗೆ ಕಾಪಾಡಬೇಕು ಎಂದೂ ಚಿಂತಿಸಿ ಕಾರ್ಯಪ್ರವೃತ್ತರಾಗಬೇಕಿದೆ. ಹಾಗೆ ಮಾಡಿದಾಗ ಎರಡೂ ರಾಜ್ಯಗಳಲ್ಲಿ ಶಾಂತಿ ಉಳಿಯುತ್ತದೆಯೇ ಹೊರತು, ಗಲಭೆ, ಬೆಂಕಿ, ಹುಚ್ಚು ಉನ್ಮಾದ ಯಾರಿಗೂ ಲಾಭ ತರುವುದಿಲ್ಲ, ಕಾವೇರಿಯನ್ನಂತೂ ಉದ್ಧಾರ ಮಾಡುವುದಿಲ್ಲ. ■







ಕಾವೇರಿಗೆ ಕೊಳ್ಳಿ ಇಟ್ಟ ಚಾನೆಲ್‌ಗಳು

ಕರ್ಫ್ಯೂ ಬಿಗಿಪಟ್ಟಿಗೆ ಬೆಂಗಳೂರಿನ ಬದುಕಿನ್ನೂ ಸಹಜ ಸ್ಥಿತಿಗೆ ಬಂದಿಲ್ಲ. ಸೆಪ್ಟೆಂಬರ್ ಹದಿನಾಲ್ಕರ ಬುಧವಾರದ ಹೊತ್ತಿಗೆ ಬಂದ್ ಮುಗಿದು ಐದನೇ ದಿನ. ಸೆಪ್ಟೆಂಬರ್ ೯ರ ಉದ್ವಿಗ್ನ ಬಂದ್, ಅದರ ಮರುದಿನ ಅದ್ಯಾರೋ ಮುಠ್ಠಾಳ ಮಾಡಿದ ಕಪಿಚೇಷ್ಟೆ, ಅದಕ್ಕೆ ಇಲ್ಲಿನ ನಟರ ಭಕ್ತರ ಅತಿರೇಕ, ಇದನ್ನೇ ನಾಡಿನ ಸಮಸ್ಯೆಯೆಂಬಂತೆ ಹುಚ್ಚಾಟಕ್ಕಿಳಿದ ನ್ಯೂಸ್ ಚಾನಲ್ಲುಗಳ ಮಂಗಾಟ, ಇದಕ್ಕೆ ಪ್ರತೀಕಾರವೆಂಬಂತೆ ತಮಿಳು ಪುಂಡರು ಮಾಡಿದ ಅನಾಹುತ ಮತ್ತು ಇದನ್ನೇ ಕಾವೇರಿಗಿಂತಲೂ ಅನ್ಯಾಯವೆಂಬಂತೆ ಬಿಂಬಿಸಿದ ಮತ್ತದೇ ನ್ಯೂಸ್ ಚಾನಲ್ಲುಗಳ ಅವಿವೇಕದಿಂದಾಗಿ ಹರಿದ ರಕ್ತ ಮತ್ತು ಉರಿದ ಆಸ್ತಿಪಾಸ್ತಿಗಳಿಗೆ ಹೊಣೆ ಯಾರು?

9ರ ಕಾವೇರಿ ಗಲಭೆಗಳಿಗೆ ಹೋಲಿಸಿದರೆ ಮೊನ್ನೆ ನಡೆದದ್ದು ಕಮ್ಮಿಯೆ ಆದರೂ ಆದ ಹಾನಿಯಿದೆಯಿಲ್ಲ; ಅದು ಆವತ್ತಿನ ಹಿಂಸಾಚಾರಕ್ಕೇನೂ ಕಮ್ಮಿಯಿರಲಿಲ್ಲ. ಒಬ್ಬ ಗೋಲಿಬಾರ್‌ಗೆ ಅಸುನೀಗಿದರೆ ಮತ್ತೊಬ್ಬ ಪೊಲೀಸರ ಲಾಠಿಗೆ ಹೆದರಿ ಪ್ರಾಣತೆತ್ತ. ಬಲಿಯಾದ ಎರಡೂ ಜೀವಗಳೂ ಕನ್ನಡಿಗರೇ. ಇನ್ನು ಗುಂಡೇಟು ತಿಂದು ಆಸ್ಪತ್ರೆಗೆ ದಾಖಲಾದವರು, ಹಿಂಸಾಚಾರದಲ್ಲಿ ಗಾಯಗೊಂಡವರು, ಭಸ್ಮಗೊಂಡ ಲಾರಿಗಳು, ಉರಿದು ಹೋದ ವಾಹನಗಳು ಒಂದಾ ಎರಡಾ? ಬಕ್ರೀದ್‌ನ ಸಡಗರವಿಲ್ಲ. ಕಾವೇರಿ ಹೋರಾಟದ ವಿವೇಕವಿರಲಿಲ್ಲ. ಸರಿತಪ್ಪುಗಳ ವಿವೇಚನೆಯ ಸುಳಿವಿರಲಿಲ್ಲ. ಹೆಚ್ಚೂಕಮ್ಮಿ ಒಂದು ವಾರದ ಕಾಲ ರಾಜಧಾನಿ ಬೆಂಗಳೂರಿನ ಬದುಕನ್ನೇ ತಲ್ಲಣಿಸಿದ ಧಾವಾನಲಕ್ಕೀಗ 'ಪೋಸ್ಟ್ ಮಾರ್ಟಂ' ಕಾರ್ಯಾಚರಣೆಯಂತೆ!

ಅದೂ ಎಂಥಾ ವಿಪರ್ಯಾಸವೆಂದರೆ ಸಿಕ್ಕಸಿಕ್ಕವರನ್ನೆಲ್ಲ ಠಾಣೆಗೆ ಎಳೆದೊಯ್ಯುವ ಪೊಲೀಸರು ಈತನಕ ಆರು ನೂರು ಮಂದಿಯನ್ನು ಬಂಧಿಸಿದ್ದೇವೆಂದು ಹೇಳಿಕೊಳ್ಳುತ್ತಾರಾದರೂ ವಾಸ್ತವದಲ್ಲಿದು ಮೂರು ಸಾವಿರಕ್ಕೂ ಅಧಿಕ. ಅಂದರೆ ಯಾರ್‍ಯಾರು ಪೊಲೀಸರ ಕೈ ಬೆಚ್ಚಗಾಗಿಸುತ್ತಾರೋ ಅಂಥವರಿಗೆ ಬಿಡುಗಡೆ ಭಾಗ್ಯ. ರೊಕ್ಕ ಬಿಚ್ಚದೆ ಹೋದರೆ ಜೈಲು ಯೋಗ. ಯಾರೋ ಮಾಡಿದ ಹುಚ್ಚಾಟಕ್ಕೆ ಇನ್ನಾರದೋ ತಲೆದಂಡ. ಯಾರದೋ ತೆವಲಿಗೆ ಇನ್ನಾರದೋ ರಕ್ತ. ಯಾರೋ ಮೆರೆದ ಸೊಕ್ಕಿಗೆ ಇನ್ನೆಲ್ಲೋ ಬಿದ್ದ ಬೆಂಕಿ. ಇಲ್ಲಿ ಪ್ರಶ್ನೆಯೆಂದರೆ ಲಾರಿಗೆ ಬೆಂಕಿ ಇಟ್ಟರೆಂದೋ, ಬಸ್ಸಿಗೆ ಕಲ್ಲು ತೂರಿದರೆಂದೋ ಅಥವಾ ಬಿದ್ದ ಬೆಂಕಿಗೆ ಉರಿದ ಸೊತ್ತಿಗೆ ಹೊಣೆಗಾರರೆಂದೋ ಪೊಲೀಸರೇನೋ ಸಿಕ್ಕಿಸಿಕ್ಕವರನ್ನು ಠಾಣೆಗೆ ಎಳೆದೊಯ್ಯಬಹುದು, ಜೈಲಿಗೆ ದಬ್ಬಬಹುದು ಅಥವಾ ಕಾಸು ಕಿತ್ತು ಕಳಿಸಲೂ ಬಹುದು.

ಆದರೆ ಇದೆಲ್ಲಕ್ಕೂ ಕೊಳ್ಳಿಯಿಟ್ಟ ನ್ಯೂಸ್ ಚಾನಲ್ಲುಗಳ ದುರಾಚಾರಕ್ಕೇನೂ ಶಿಕ್ಷೆಯಿಲ್ಲವೇ? ಬೆಂಕಿಯಿಟ್ಟವರನ್ನು ಬಂಧಿಸಬಹುದಾದರೆ ಅದಕ್ಕೆ ಪ್ರಚೋದನೆ ಗೈದವನಿಗೇಕೆ ಶಿಕ್ಷೆಯಿಲ್ಲ? ಇಲ್ಲಿ ಹಿಂಸೆಯ ಮೂಲ ಪುರುಷರು ಯಾರು ಅದಕ್ಕೆ ತಲೆಕೊಟ್ಟ ಕಾರಣಪುರುಷರಷ್ಟೇ ಹೊಣೆ ಹೊರಬೇಕೇಕೆ?

ತಮಿಳುನಾಡಿಗೆ 15 ಸಾವಿರ ಕ್ಯೂಸೆಕ್ಸ್ ನೀರು ಹರಿಸುವಂತೆ ಸುಪ್ರೀಂಕೋರ್ಟ್ ನೀಡಿದ ಆದೇಶದ ವಿರುದ್ಧ ಕನ್ನಡಪರ ಸಂಘಟನೆಗಳು ಕರೆಕೊಟ್ಟ ಸೆಪ್ಟೆಂಬರ್ ಒಂಬತ್ತರ ಬಂದ್‌ಗೆ ರಾಜ್ಯವ್ಯಾಪಿ ಅಭೂತಪೂರ್ವ ಬೆಂಬಲವೇ ವ್ಯಕ್ತವಾಗಿತ್ತು. ಹಿಂದ್ಯಾವತ್ತೂ ಇಲ್ಲದಂತೆ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲೂ ಕಾವೇರಿಗಾಗಿ ಜನ ಪ್ರಾಮಾಣಿಕವಾಗೇ ಸ್ಪಂದಿಸಿದ್ದರು. ಬಂದ್‌ಗೆ ದೊರೆತ ಬೆಂಬಲದ ಗಂಭೀರತೆಯನ್ನು ಅರಿತ ಮುಖ್ಯಮಂತ್ರಿಗಳು ಸೆಪ್ಟೆಂಬರ್ 12ಕ್ಕೆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿಯೂ ನಿರ್ಧರಿಸಿದ್ದಾಯ್ತು. ಅಲ್ಲಿಗೆ ಕಾವೇರಿ ಅನ್ಯಾಯದ ವಿರುದ್ಧದ ಪ್ರತಿಭಟನೆಗೊಂದು 'ತಾರ್ಕಿಕ ತಿರುವು' ದೊರೆತಂತಾಗಿ ಮುಂದಿನ ಕಾರ್ಯತಂತ್ರಗಳ ಕುರಿತಂತೆ ಗಂಭೀರ ಕ್ರಮಗಳ ಬಗ್ಗೆ ನಾಡಿನ ಎಲ್ಲಾ ಸಂಘಟನೆ, ಪಕ್ಷ ಮತ್ತು ಸರ್ಕಾರ ಹೆಜ್ಜೆಯಿಡುವತ್ತ ಹೋರಾಟ ಸಾಗಬೇಕಿತ್ತು.

ಆದರೆ ವಿಘ್ನ ಸಂತೋಷಿ ಚಾನಲ್‌ಗಳ ವಿಕೃತಿ ತಣಿಯಬೇಕಲ್ಲ. ಅದಕ್ಕೆ ತೊತ್ತಾಗಿದ್ದು ಯಾರೋ ಅಬ್ಬೇಪಾರಿಯೊಬ್ಬನ ಫೇಸ್‌ಬುಕ್ ಕಪಿಚೇಷ್ಟೆ. ಬಂದ್‌ನ ಮಾರನೇ ದಿನ ಸೆಪ್ಟೆಂಬರ್ ಹತ್ತರಂದು ಸಂಪತ್ ಅಲಿಯಾಸ್ ಸಂತೋಷ್ ಎಂಬ ಕಮಂಗಿಯೊಬ್ಬ ತನ್ನ ಫೇಸ್‌ಬುಕ್ ಖಾತೆಯಲ್ಲೊಂದು 'ಪುಂಡು ಪೋಸ್ಟಿಂಗ್' ಹಾಕಿದ್ದ. ಕನ್ನಡದ ನಟರಾದ ಶಿವಣ್ಣ, ದರ್ಶನ್, ದುನಿಯಾ ವಿಜಿ, ಪ್ರಜ್ವಲ್ ದೇವರಾಜ್ ಮತ್ತು ರಾಗಿಣಿಯವರ ಫೋಟೋಗಳನ್ನು ಅಂಟಿಸಿದ್ದೇ 'ನೀವೆಲ್ಲ ಹೀರೋಗಳೇನ್ರೋ...?' ಎಂಬಂತೆ ತಮಿಳುನಾಡಿನ ಪರ ವಹಿಸಿ ಮಾಡಿದ ಗೇಲಿಯದು. ಅಂದರೆ ಈ ನಟರುಗಳು ಕಾವೇರಿ ಹೋರಾಟಕ್ಕೆ ಇಳಿದಾಕ್ಷಣ ಅದು ತಮಿಳರಿಗೆ ಬಗೆದ ಮಹಾದ್ರೋಹವೆಂಬುದು ಆತನ ಲೆಕ್ಕಾಚಾರ. ಈ ನಟರೆಲ್ಲ ತಮಿಳು ನಟರ ಕಾಲುಕಸಕ್ಕೆ ಸಮವೆಂಬುದು ಆತನ ಹೀಯಾಳಿಕೆ.

ಹಾಗೆ ನೋಡಿದರೆ ದರ್ಶನ್ ಅಭಿಮಾನಿಗಳು ಪುನೀತ್ ವಿರುದ್ಧವೋ, ಶಿವಣ್ಣನ ಭಕ್ತರು ಸುದೀಪ್‌ನನ್ನು ಗೇಲಿ ಮಾಡುವುದೋ; ಸಿನಿಮಾ ಅಭಿಮಾನಿ ವಲಯದಲ್ಲಿ ಆಗಾಗ ನಡೆಯುತ್ತಲೇ ಇರುತ್ತದೆ. ಅದೇರೀತಿ ತಮಿಳು, ತೆಲುಗು ನಟರುಗಳ ಅಭಿಮಾನಿಗಳು ಅದೇ ಭಾಷೆಯ ಎದುರಾಳಿ ನಟರ ವಿರುದ್ಧ ಗೇಲಿ, ಟೀಕೆ, ಚೇಷ್ಟೆ ಮಾಡುವುದೂ ಹೊಸದೇನಲ್ಲ. ಆದರೆ ಕಾವೇರಿ ಬಂದ್ ಇತ್ತಲ್ಲ. ಅದರಲ್ಲೂ ರಜೆ ಬೇರೆ. ಪುಂಡಾಟಿಕೆಗೊಂದು ನೆಪ ಸಿಕ್ಕರೆ ಸಾಕು. ಇದನ್ನೇ ಕಾಯುತ್ತಿದ್ದ ಕನ್ನಡ ನಟರೊಬ್ಬರ ಭಕ್ತಗಣವೊಂದು ಸಂತೋಷ್ ತನ್ನ ಫೇಸ್‌ಬುಕ್‌ನಲ್ಲಿ ಮಾಡಿದ್ದ ಕಪಿಚೇಷ್ಟೆಯನ್ನೇ ನಾಡಿಗೆ ಬಗೆದ ಮಹಾದ್ರೋಹವೆಂದೂ ಕಾವೇರಿಗಿಂತಲೂ ದೊಡ್ಡ ಅನ್ಯಾಯವೆಂದೂ ಪರಿಗಣಿಸಿತು.

ಇದಕ್ಕೆ ಕಾರಣನಾದ ಸಂತೋಷ್ @ ಸಂಪತ್ ಬೆಂಗಳೂರಿನ ಶ್ರೀರಾಂಪುರದ ವಾಸಿ ಮತ್ತು ಆತ ಹೊಸಕೆರೆಹಳ್ಳಿ ರಿಂಗ್‌ರಸ್ತೆಯ ಪಿಇಎಸ್ ಕಾಲೇಜಿನ ವಿದ್ಯಾರ್ಥಿ ಎಂಬುದನ್ನು ಅರಿತ ಮೇಲಂತೂ ಆತನಿಗೊಂದು ಶಾಸ್ತಿ ಮಾಡಲೇಬೇಕೆಂದು ಈ ಗುಂಪು ಕಾರ್ಯಾಚರಣೆಗಿಳಿಯಿತು. ಸೆಪ್ಟೆಂಬರ್ 10ರ ಶನಿವಾರ ಅಂದರೆ ಬಂದ್‌ನ ಮಾರನೇ ದಿನ ಹತ್ತಾರು ಬೈಕುಗಳಲ್ಲಿ ಪಿಇಎಸ್ ಕಾಲೇಜಿಗೆ ನುಗ್ಗಿದ 'ಕನ್ನಡ ಭಕ್ತಗಣ' ಅಲ್ಲಿ ಆತನನ್ನು ಹುಡುಕಾಡಿದೆ. ಆತ ಗಿರಿನಗರದಲ್ಲಿದ್ದ ತನ್ನ ಸ್ನೇಹಿತನೊಬ್ಬನನ್ನು ಭೇಟಿಯಾಗಲು ಬಂದಿದ್ದರ ಮಾಹಿತಿಯನ್ನು ಗುಂಪು ಕಲೆಹಾಕಿದೆ. ಆತನ ಮೊಬೈಲ್ ನಂಬರನ್ನೂ ಪತ್ತೆ ಹಚ್ಚಿ ಇನ್ನಾವುದೋ ನೆಪದಲ್ಲಿ ಆತನನ್ನು ಬೆನ್ನಟ್ಟಿ ಹಿಡಿದ ಅಭಿಮಾನಿಗಳ ಪಡೆ ಸಂತೋಷ್‌ನನ್ನು ಗಿರಿನಗರದ ನಡುರಸ್ತೆಯಲ್ಲೇ ಅಟ್ಟಾಡಿಸಿ ಹೊಡೆದಿದೆ.


ಕಿಡಿಗೇಡಿ ಸಂತೋಷ್

ಇದಿಷ್ಟೇ ಆಗಿದ್ದರೆ ಸಮಸ್ಯೆಯಿರುತ್ತಿರಲಿಲ್ಲ. ಆದರೆ ಕಾರ್ಯಾಚರಣೆಯ ಪೌರುಷವಿತ್ತಲ್ಲ; ತಾವು ಆತನನ್ನು ಹಿಡಿದು ಥಳಿಸಿದ್ದು, ಒದೆತಿಂದ ಆತ ಕೈ ಮುಗಿದು ದಮ್ಮಯ್ಯ ಗುಡ್ಡೆ ಹಾಕಿದ್ದು ಎಲ್ಲವನ್ನೂ ಚಿತ್ರೀಕರಿಸಿದ್ದೇ ಫೇಸ್‌ಬುಕ್‌ಗೆ ಪೋಸ್ಟ್ ಮಾಡಿದ್ದಾರೆ. ತನ್ನ ಸಣ್ಣದೊಂದು 'ಮೆಮ್' ಇಷ್ಟೆಲ್ಲಾ ಅನಾಹುತ ಮಾಡಬಹುದೆಂದು ನಿರೀಕ್ಷೆಯನ್ನೇ ಮಾಡದಿದ್ದ ಶ್ರೀರಾಂಪುರದ ಸಂತೋಷ್ ಕೆಲವೇ ಗಂಟೆಗಳಲ್ಲಿ 'ನನ್ನಿಂದ ತಪ್ಪಾಯಿತು, ಇನ್ನು ಮುಂದೆ ನಾನು ಕನ್ನಡವನ್ನು ಬೆಂಬಲಿಸುತ್ತೇನೆ. ಕನ್ನಡಿಗ ಬಾಂಧವರ ಮನಸ್ಸು ನೋಯಿಸಿದ್ದಕ್ಕೆ ಕ್ಷಮೆ ಯಾಚಿಸುತ್ತೇನೆ' ಎಂದು ಮತ್ತೊಂದು ಪೋಸ್ಟ್ ಹಾಕಿದ್ದಾನೆ.

ಅಲ್ಲಿಗಿದು ಮುಗಿಯಬೇಕಿತ್ತಲ್ಲವೇ? ಮಾಡಿದ ಚೇಷ್ಟೆಗೆ ಒದೆ ತಿಂದ.. ಬಿದ್ದ ಒದೆಗೆ ಬುದ್ಧಿಯನ್ನೂ ಕಲಿತ ಸಂತೋಷ್ ಕ್ಷಮೆ ಕೇಳುವ ಮೂಲಕ ಮೆಚ್ಚುಗೆಗೂ ಪಾತ್ರನಾದ.

ಇದೊಂದು ಸಿನಿಮಾ ನಟರ ಭಕ್ತರ ನಡುವಿನ ಕ್ಷುಲ್ಲಕ ಹೊಡೆದಾಟವಷ್ಟೆ. ಆದರೆ ಮಹೇಂದ್ರನ 'ಬಿ ಟೀವಿ'ಯಿತ್ತಲ್ಲ. ಮಾಡಲು ಬೇರೆ ಕಿತಾಪತಿಯಿರಲಿಲ್ಲವೋ ಅಥವಾ ಚಳಿ ಕಾಯಿಸಿಕೊಳ್ಳಲು ಬೆಂಕಿ ಹಚ್ಚಲೇಬೇಕಿತ್ತೋ ಗೊತ್ತಿಲ್ಲ. ಎಲ್ಲೋ ಯಾವುದೋ ಸಂದಿಯಲ್ಲಿ ನಡೆದ ಸಿನಿಮಾನಟರ ಭಕ್ತರ ನಡುವಿನ ಈ ತರಲೆಯನ್ನೇ ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ನಡುವಿನ ಭೀಕರ ಕಾಳಗವೆಂಬಂತೆ ಗಿರಿ ನಗರದ ಫುಟ್‌ಪಾತ್ ಜಗಳವನ್ನೇ ಕನ್ನಡಿಗರ ಐತಿಹಾಸಿಕ ದಿಗ್ವಿಜಯ ವೆಂಬಂತೆ ಭ್ರಮಿಸಿ ಬೆಳ್ಳಂಬೆಳಗ್ಗೆಯೇ ಬೊಬ್ಬೆ ಶುರುವಿಟ್ಟಿತು. ಅದ್ಯಾರೋ ಚಂದನ್ ಶರ್ಮನೆಂಬ ಐನಾತಿ ಆ್ಯಂಕರ್ ಕನ್ನಡದ ನಟರ ಗೇಲಿಯನ್ನೇ ಕರ್ನಾಟಕಕ್ಕೆ ಬಗೆದ ಅಪಚಾರವೆಂತಲೂ ಈ ರೀತಿ ಗೇಲಿ ಮಾಡಿದವ ನನ್ನು ಹಿಡಿದು ಹೊಡೆದವರೆಲ್ಲ ಕನ್ನಡ ವೀರರೆಂದು ಕಿರುಚಿದ್ದೇ ಕಿರುಚಿದ್ದು.

ಇನ್ನು ಈ ಟೀವಿ ಮತ್ತು ಸುವರ್ಣಗಳು ಕೇಳಬೇಕೆ? ಕನ್ನಡ ನಟರನ್ನು ಗೇಲಿ ಮಾಡಿದ ತಮಿಳನನ್ನು ಹಿಡಿದು ಹೊಡೆದದ್ದೇ ಕಾವೇರಿ ವಿಜಯವೆಂಬಂತೆ ಪದೇ ಪದೇ ಸಂತೋಷ್ ಒದೆ ತಿಂದು ಗೋಗರೆಯುತ್ತಿದ್ದ ಫೋಟೋಗಳನ್ನು ಮೇಲಿಂದ ಮೇಲೆ ಬಿತ್ತರಿಸಿ ವಿಜಯೋತ್ಸವ ಆಚರಿಸಲಾರಂಭಿಸಿದರು. ಇದನ್ನೇ ಕಾಯುತ್ತಿದ್ದ ತಮಿಳುನಾಡಿನ ಕೆಲ ಚಾನಲ್ಲುಗಳಿಗೆ ಇಷ್ಟೇ ಸಾಕಲ್ಲವೇ?

ಬೆಂಗಳೂರಿನಲ್ಲಿ ತಮಿಳು ವಿದ್ಯಾರ್ಥಿಯನ್ನು ಕನ್ನಡ ಭಾಷಾಂಧರು ಅಟ್ಟಾಡಿಸಿ ಹೊಡೆದರೆಂದೂ, ಕಾವೇರಿಗಾಗಿ ತಮಿಳುನಾಡಿನ ಪರ ವಹಿಸಿದ್ದಕ್ಕೆ ತಮಿಳ[...] ಹಲ್ಲೆಯಾಯಿತೆಂದೂ, ದಿನವಿಡೀ ಬ್ರೇಕಿಂಗ್ [...] ಶುರುವಿಟ್ಟವು. ನಟರ ವಿರುದ್ಧದ ಸಣ್ಣ[...] ಕಮೆಂಟ್ ಚಾನಲ್ಲುಗಳ ಅವಿವೇಕ[...] ರಾತ್ರೋರಾತ್ರಿ ಎರಡು ರಾಜ್ಯಗಳ ಯುದ್ಧ[...] ಬಿಂಬಿಸಲ್ಪಟ್ಟ ಹುಚ್ಚಾಟವಾಗಿತ್ತು. ತಮಿ[...] ನ್ಯೂಸ್ ಚಾನಲ್‌ಗಳ ಪೈಕಿ ವಿಶೇಷವಾಗಿ '[...] ಎಂಬ ಚಾನಲ್ಲೊಂದು ಬೆಂಗಳೂರಿನಲ್ಲಿ [...] ಮೇಲೆ ಹಿಂಸೆ ನಡೆಯುತ್ತಿದೆಯೆಂಬಂತೆ [...] ಬುಲೇಟಿನ್ ಬಿತ್ತರಿಸುತ್ತಿದ್ದಂತೆ ಸನ್ [...] ರಾಜ್ ನ್ಯೂಸ್, ಕಳಂಜರ್ ಟೀವಿಗಳೂ [...] ಸುದ್ದಿಯಾಗಿಸಿದವು. ಇಷ್ಟಾದ ಮೇಲೆ ತಮಿಳ[...] ಕೈಕಟ್ಟಿ ಕೂರುವುದುಂಟಾ? ಸೆಪ್ಟೆಂಬರ್ 11ರ [...] ರಾಮೇಶ್ವರದಲ್ಲಿ ಯಾತ್ರೆಗೆಂದು ಬೆಂಗಳ[...] ಹೊರಟಿದ್ದ ಪ್ರವಾಸಿಗರ ತಂಡದ ಮೇಲೆ ಇ[...] ದ್ರಾವಿಡ ಕಳಗಂನ ಕಾರ್ಯಕರ್ತರು ದಾಳಿ ಮಾ[...] ಪ್ರವಾಸಿಗರಿದ್ದ ಬಸ್ಸಿನ ಡ್ರೈವರ್ ಮಂಜುನಾ[...] ಎಳೆದೊಯ್ದಿದ್ದೇ ಹಿಗ್ಗಾಮುಗ್ಗಾ ಥಳಿಸಿ [...] ತಮಿಳುನಾಡಿಗೆ ಸೇರಿದ್ದೆಂದು ಹೇಳು, ಹೇಳು[...] ಮಂಜುನಾಥ್‌ನನ್ನು ಹೊಡೆಯುತ್ತಿದ್ದ [...] ಚಿತ್ರಿಸಿದ್ದೇ ಅದನ್ನೂ ಫೇಸ್‌ಬುಕ್‌ಗೆ [...] ಇದನ್ನು ತಮಿಳು ಚಾನಲ್‌ಗಳೇನೂ ವಿ[...] ಪರಿಗಣಿಸಲಿಲ್ಲ. ಆದರೆ ಇಲ್ಲಿನ ಕೆಲ ಚಾ[...] ತಮಿಳುನಾಡಿನಲ್ಲಿ ಕನ್ನಡಿಗರಿಗೆ ಚಿತ್ರಹಿಂಸೆ, [...] ಭಾಷಾಂಧರಿಂದ ಕನ್ನಡಿಗರ ಮೇಲೆ ದಾ[...] ಶೀರ್ಷಿಕೆಯಡಿ ಬೆಳ್ಳಂಬೆಳಗ್ಗೆಯೇ [...] ನ್ಯೂಸ್' ಶುರುವಿಟ್ಟವು. ದ್ರಾವಿಡ ಕಳಗ[...] ತಮಿಳು ಭಾಷಾಂಧ ಸಂಘಟನೆಯಿಂದ [...] ಗುಂಪೊಂದು ರಾಮೇಶ್ವರದ [...] ಮೇಲೆಸಗಿದ ಈ ದಾಳಿ ಸ[...] ಕನ್ನಡಿಗರನ್ನು ಕೆರಳಿಸಿತ್ತು. ಈ ಪುಂಡಾಟಿಕೆಯನ್ನು ತೋರಿಸಿದ್ದರ ಕೆಟ್ಟ [...] ಇದಾಗಿತ್ತು. ಏಳೆಂಟು ಮಂದಿ[...] ಗುಂಪೊಂದು ಕನ್ನಡಿಗ ಒಬ್ಬನನ್ನು ಹಿಡಿದು ಹೊಡೆಯ[...] ಹೊಡೆತ ತಾಳಲಾರದೆ ಆ [...] ಕೈಮುಗಿದು ಬೇಡಿಕೊಳ್ಳುತ್ತಿದ್ದ[...] ಹೊಡೆಯುತ್ತಿದ್ದವರು [...] ಕಾವೇರಿ ತಮಿಳುನಾಡಿಗೆ ಸ[...] ಹೇಳುವಂತೆ ಹಿಂಸಿಸುತ್ತಿದ್ದ[...] ಎಂಥವರನ್ನೂ ರೊಚ್ಚಿಗೇಳಿಸು[...] ಜನಾಂಗೀಯ [...] ಕಾರಣವಾಗಬಹುದಾದ ದೃಶ್ಯಾವಳಿಗಳನ್ನು ಬಿತ್ತ[...] ಚಾನಲ್ಲುಗಳು ತೋರಬೇಕಿದ್ದ[...] ಮತ್ತು ಸಾಮಾಜಿಕ ಹಿತದೃಷ್ಟಿಯೇ ಮಾಯ[...] ಸೆಪ್ಟೆಂಬರ್ 11ರ ಬೆಳಗ್ಗೆಯಿಂದಲೇ [...] ಪ್ರಕರಣದ ಲೈವ್ ಶುರು ಹಚ್ಚಿಕೊಂಡ ಬಿ[...] ಟೀವಿ, ಸುವರ್ಣ ಮತ್ತು ಕಸ್ತೂರಿ ಚಾ[...] ಒಬ್ಬೊಬ್ಬ ಕನ್ನಡ ಹೋರಾಟಗಾರರನ್ನು ಸ್ಟು[...] ಕರೆಸಿಕೊಂಡಿದ್ದೇ ಪ್ರಚೋದನಾ ಅಭಿಯ[...] ಆರಂಭಿಸಿದವು. ಬಿ ಟೀವಿಯ ಶೇಷಕೃಷ್ಣನೆಂಬ ಮೂರ್ಖನಂತೂ ವಾ[...] ಸಂಪರ್ಕಿಸಿದ್ದೇ 'ಏನ್ರೀ ವಾಟಾಳ್, ಹೇಡಿಗಳಾ, ಕೈಕಟ್ಟಿಕೊಂಡು ಕೂರ್ತೀರಾ?' ಹಿಂಸೆಗೆ ಪ್ರಚೋದಿಸಿದ. ಮತ್ತೊಂದು ಚಾನ[...] ವೇದಿಕೆಯ ಪ್ರವೀಣ್ ಶೆಟ್ಟರನ್ನು ಕೂರಿ[...] ಮಗದೊಂದು ಚಾನಲ್ ಶಿವರಾಮೇ[...] ಕರೆಸಿಕೊಂಡು ಯುದ್ಧಾಲೋಪನೆ ನಡೆಸಿತು.

ಇದೇ ಹೊತ್ತಿಗೆ ಸುಪ್ರೀಂಕೋರ್ಟ್ [...] ಪೀಠದ ತೀರ್ಪು ಹೊರಬಿದ್ದು ಸೆಪ್ಟೆಂಬರ್ [...] ತಮಿಳುನಾಡಿಗೆ ಹೆಚ್ಚುವರಿ ನೀರು ಬಿಡಲ[...] ಆದೇಶವಿತ್ತಲ್ಲ. ಇದು ಚಾನಲ್‌ಗಳು ಹಚ್ಚಿ[...] ತುಪ್ಪವಾಯಿತು. ಸೆಪ್ಟೆಂಬರ್ 9ರ ಬಂದ್ ಯ[...] ಮೂರನೇ ದಿನಕ್ಕೆ ಇದ್ದಕ್ಕಿದ್ದಂತೆ ಹಿಂಸೆ ಭ[...] ಅಪರಾಹ್ನ 12ರ ಹೊತ್ತಿಗೆ ಮೈಸೂರು [...] ನಾಯಂಡಹಳ್ಳಿಯಲ್ಲಿ ತಮಿಳುನಾಡಿನ ಲಾರಿ[...] ಉದ್ರಿಕ್ತ ಗುಂಪೊಂದು ಬೆಂಕಿಯಿಟ್ಟಿತ್ತು. ತಾವಿಟ್ಟ ಬೆಂಕಿಯ ಪ್ರತಿಫಲವೆಂಬಂತೆ ರು[...] ತುಪ್ಪಕ್ಕೆ ಬಿದ್ದಂತೆ ಮತ್ತೆ ಬ್ರೇಕಿಂಗ್ ನ್ಯೂಸ್ [...] ಮೈಸೂರು ರಸ್ತೆಯಲ್ಲಿ ಲಾರಿಗೆ ಬೆಂಕಿಯಿಟ್ಟ[...] ಬಂದಿದ್ದೇ ಅದನ್ನು ಟೀವಿಯಲ್ಲಿ ನೋಡು[...] ಬೀದಿಗಿಳಿದರು. ಮಧ್ಯಾಹ್ನದ ಹೊತ್ತಿ[...] ಬೆಂಗಳೂರೇ ಅಗ್ನಿಕುಂಡವಾಗಿತ್ತು.

ಮೈಸೂರು ರಸ್ತೆಯ ಟಿಂಬರ್‌ಯ[...] ಒಂದರ ಮೇಲೊಂದರಂತೆ ಒಂಬತ್ತು [...] ಬೆಂಕಿ ಬಿತ್ತು. ಇತ್ತ ರಿಂಗ್ ರಸ್ತೆಯಲ್ಲಿ [...] ಸಾವಿರಾರು ಮಂದಿ ತಮಿಳುನಾಡಿನ ನ[...] ಲಾರಿ, ಬಸ್ಸು ಏನೇ ಕಂಡರೂ ಬೆಂಕಿಯಿ[...] ನೋಡುನೋಡುತ್ತಿದ್ದಂತೆಯೇ ರಾ[...]



ಕನ್ನಡಿಗರಿಗೆ ಹೊಡೆತ | ಸುಟ್ಟುಹೋದ ಬಸ್ಸುಗಳು | ಕೇಂದ್ರ ಸರ್ಕಾರದ ಎಚ್ಚರಿಕೆ

ಲಕ್ಷ್ಮಿ ಲೇಔಟ್, ರಾಜಗೋಪಾಲನಗರ, ಪೀಣ್ಯ, ...ನಗರ, ಚಂದ್ರಾ ಲೇಔಟ್, ಕೆಂಪಾಪುರ ...ರ, ಬಸವೇಶ್ವರ ನಗರ, ಕಾಮಾಕ್ಷಿಪಾಳ್ಯ, ...ಾಜೇಶ್ವರಿನಗರ, ಪದ್ಮನಾಭನಗರ ಇತ್ಯಾದಿ ...ಗರ ಪ್ರಾಬಲ್ಯದ ಏರಿಯಾಗಳೆಲ್ಲ ಬೆಂಕಿಯ ...ಬಿದ್ದಾಗಿತ್ತು. ಪ್ರತಿ ಗಲ್ಲಿಯಲ್ಲೂ ಬೆಂಕಿ, ಪ್ರತಿ ...ಲ್ಲೂ ಟೈರು. ಸೌದೆಗಳನ್ನಿಟ್ಟು ಜ್ವಾಲಾಗ್ನಿ. ...ರು ಕಡೆಯ ಸ್ಯಾಟಲೈಟ್ ಬಸ್‌ಸ್ಟ್ಯಾಂಡ್‌ನಲ್ಲಿದ್ದ ...ರ್ ಆನಂದ್ ಭವನ, ಗೋಪಾಲನ್ ಮಾಲ್, ...ಸ್ ಟ್ರಾವಲ್ಸ್‌ನ ಬಸ್ ಡಿಪೋ ತಮಿಳರ ...ಗಳು, ತಮಿಳರ ಚರ್ಚ್, ತಮಿಳರ ಅಂಗಡಿ ... ಆಯ್ದು ಆಯ್ದು ದಾಳಿಯಿಡುತ್ತಿದ್ದರು. ಬೆಂಕಿ ...ದ್ದರು. ಬೆಂಗಳೂರಿನ ಹದಿನೈದಕ್ಕೂ ಅಧಿಕ ...ೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಕ್ಷರಶಃ ...ಳಗ. ಉದ್ರಿಕ್ತರ ಹಿಂಡು ಬೆಂಕಿಯಿಕ್ಕುತ್ತಿದ್ದರೆ ...ಗಳು ಅದನ್ನು ಕ್ರಿಕೆಟ್ ಕಾಮೆಂಟರಿಯೆಂಬಂತೆ ... ವಿವರಣೆ ಕೊಟ್ಟವು.

...ವರ ಅತಿರೇಕ ಯಾವ ಮಟ್ಟಕ್ಕಿಳಿಯಿತೆಂದರೆ ...ರು ಬೆಂಕಿಯಿಕ್ಕುತ್ತಿದ್ದರೆ ಇತ್ತ ಟೀವಿಯಲ್ಲಿ ... ಕನ್ನಡಿಗರ ಆಕ್ರೋಶವೆಂದೋ, ಕನ್ನಡಿಗರ ...ಷವೆಂದೋ ಕಾಮೆಂಟರಿ ಕೊಟ್ಟರು. ಇದರ ...ಮ ರಾಜಗೋಪಾಲನಗರ ಪೊಲೀಸ್ ...ಯ ವ್ಯಾಪ್ತಿಯಲ್ಲಿ ಭೀಕರ ರೂಪವನ್ನೇ ತಾಳಿತು. ...ಹಳ್ಳಿಯ ಮೋಹನ್ ಥಿಯೇಟರ್ ಬಳಿ ... ಸಾವಿರಾರು ಮಂದಿ ಉದ್ರಿಕ್ತರು ಪೊಲೀಸರ ...ವೇ ಹಿಂಸೆಗಿಳಿದರೆ ಅದನ್ನು ನಿಯಂತ್ರಿಸಲಾಗದೆ ...ೀಸರು ನಡೆಸಿದ ಗೋಲಿಬಾರ್‌ಗೆ ಕುಣಿಗಲ್ ...ಕು ಸಿಂಗೋನಹಳ್ಳಿಯ ಉಮೇಶ್‌ಗೌಡ ...ೇಟು ತಿಂದು ನೆಲಕ್ಕೊರಗಿದ್ದ. ಮತ್ತೊಂದೆಡೆ ...ರಹಳ್ಳಿಯಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳಲೆಂದು ...ವೊಂದಕ್ಕೆ ನುಗ್ಗಿ ಅದರ ಮೂರನೇ ...ತಿಯಿಂದ ನೆಗೆದ ಕುಮಾರ್ ಬಿದ್ದೇಟಿಗೆ ಆಸ್ಪತ್ರೆ ...ವನು ಮರುದಿನ ಮಧ್ಯಾಹ್ನದ ಹೊತ್ತಿಗೆ ...ಪ್ಪಿದ್ದ.

...ವರ್ಯಾರೂ ದುಷ್ಕರ್ಮಿಗಳಲ್ಲ. ಗಲಭೆಯಲ್ಲಿ ...ಬಿದ್ದಿದ್ದ ನಿಷ್ಪಾಪಿಗಳು. ತನ್ನ ಮನೆಯಿಂದ ...ಗೆ ನಡೆಯುತ್ತಿದ್ದ ಗಲಭೆಯ ಸದ್ದು ಕೇಳಿ ...ಲೆಂದು ಹೊರಬಿದ್ದವನು ಉಮೇಶ್‌ಗೌಡ ...ತ್ತಿದೆ ಎಂದು ಗೊತ್ತಾಗುವ ಮೊದಲೇ ...ಗಳೂ ಮೊರೆತವು. ಇನ್ನೇನು ಓಡಿ ತನ್ನ ಮನೆ ...ಳ್ಳಬೇಕೆನ್ನುವಷ್ಟರಲ್ಲಿ ಗುಂಡು ಎದೆ ಹೊಕ್ಕಿತ್ತು. ...ರುವನ್ನೇ ಸೀಳಿಕೊಂಡು ಬೆನ್ನಿನಿಂದ ಹೊರಬಿದ್ದ ... ಉಮೇಶ್‌ಗೌಡನ ಗರ್ಭಿಣಿ ಪತ್ನಿಯನ್ನು ...ಯನ್ನಾಗಿಸಿತ್ತು. ಇತ್ತ ಬ್ಯಾಡರಹಳ್ಳಿಯಲ್ಲಿ ...ೀಸರಿಂದ ತಪ್ಪಿಸಿಕೊಳ್ಳಲು ಮೂರನೇ ...ತಿಯಿಂದ ಕೆಳಕ್ಕೆ ನೆಗೆದ ಕುಮಾರ್ ಮೂಲತಃ ...ಡಿ ತಾಲ್ಲೂಕು ಕಲ್ಕೆರೆ ಗ್ರಾಮದ ಯುವಕ. ...ನ್ನೂ ಮೂವತ್ತು. ಈತನ ಪತ್ನಿ ಮಂಜುಳಾ ... ಮೂರು ತಿಂಗಳ ಗರ್ಭಿಣಿ. ಮಹಡಿಯಿಂದ ... ಪೆಟ್ಟಿಗೆ ಬೆನ್ನುಮೂಳೆ ಮುರಿಯಿತು, ತಲೆಗೆ ... ಪೆಟ್ಟು ಬಿತ್ತು. ಪಕ್ಕದ ಕೊಟ್ಟಿಗೆಪಾಳ್ಯದ ಲಕ್ಷ್ಮಿ ...ಟಿ ಆಸ್ಪತ್ರೆಗೆ ಸೇರಿಸಲಾಯಿತಾದರೂ ಮರುದಿನ ...ಹ್ನದ ಹೊತ್ತಿಗೆ ಕುಮಾರ್ ಕೊನೆಯುಸಿರೆಳೆದಿದ್ದ. ...ಲಿಯಾದ ಈ ಎರಡೂ ಜೀವಗಳೂ ...ರಾಧಿಗಳೆ. ಅನ್ಯಾಯವಾಗಿ ಪ್ರಾಣತೆತ್ತರು. ...ರಿಬ್ಬರೂ ವಿಧವೆಯರಾದರು. ಅವರ ...ೀಗ ಅನಾಥರು. ಸೆಪ್ಟೆಂಬರ್ 9ರಂದು ... ಕಾರಣದ ಶಾಂತಿಯುತ ಬಂದ್ ಆದರೆ ... ನಂತರ ಚಾನೆಲ್‌ಗಳು ಮಾಡಿದ ಹುಚ್ಚಾಟಕ್ಕೆ ...ಾಗಿದ್ದು ಎರಡು ಅಮೂಲ್ಯ ಜೀವಗಳು ... ಸಹಸ್ರಾರು ಕೋಟಿ ರೂಪಾಯಿಗಳ ಮೊತ್ತದ ...ಸ್ತಿಗಳು. ಊರಿಗೆ ಊರೇ ಭಸ್ಮವಾಯಿತು. ...ರು ಜೀವಗಳು ನರಳಿದವು. ಇದೇ ಕಾವೇರಿಯ ...ಕ್ಕಾಗಿ ನಡೆದಿದ್ದರೆ ಆ ಮಾತು ಬೇರೆ. ಆದರೆ ...ಗಳ ದುರ್ಬುದ್ಧಿಗೆ ಸೃಷ್ಟಿಯಾದ ಜನಾಂಗೀಯ ...ಚಾರಕ್ಕೆ ಹೊಣೆ ಯಾರು?

...ೊಲೀಸರೀಗ ಪೋಸ್ಟ್‌ಮಾರ್ಟಂ ಆರಂಭಿಸಿದ್ದಾರೆ. ... ಯುವಕರನ್ನು ದುಷ್ಕರ್ಮಿಗಳೆಂದು ... ಎಳೆದೊಯ್ದು ದೋಚಲಾರಂಭಿಸಿದ್ದಾರೆ. ...ವೆಂದರೆ ದುಷ್ಕರ್ಮಿಗಳು ಬೆಂಕಿ ಹಚ್ಚುತ್ತಿದ್ದರೆ ... ಕನ್ನಡಿಗರ ಆಕ್ರೋಶ, ಪೌರುಷ ಎಂದೆಲ್ಲ ...ಸಿದ ಚಾನೆಲ್ಲುಗಳೇ ಈಗ ಅವರನ್ನು ...ರ್ಮಿಗಳೆನ್ನುತ್ತಿದ್ದಾರೆ. ಸಮಸ್ಯೆ ಹುಟ್ಟುಹಾಕಿದ್ದು ...ೇ. ಹಿಂಸೆಗೆ ಕಾರಣರೂ ಅವರೇ. ಅವರಿಗೆ ...ದಾಗ ದುಷ್ಕರ್ಮಿ ಹೋರಾಟಗಾರನಾಗಬೇಕು ...ವೆಂದಾಗ ದುಷ್ಕರ್ಮಿ ಎನ್ನಿಸಿಕೊಳ್ಳಬೇಕು! ...ಮುಗ್ಧರನ್ನೇನೋ ಪೊಲೀಸರು ಲಾಕಪ್ಪಿಗೆ ...ತ್ತಿದ್ದಾರೆ ನಿಜ. ಆದರೆ ಅದಕ್ಕೆ ಕಾರಣರಾದ ಈ ... ಚಾನೆಲ್ಲುಗಳಿಗೆ ಯಾವುದೇ ಶಿಕ್ಷೆಯಿಲ್ಲವೇ?

ರಾ. ಸೋಮನಾಥ್

ವಾಸಸ್ಥಾನ, ಜಾತಿ, ಆಹಾರ ಮತ್ತು ವರ್ಗ

ಭಾರತ ದೇಶದಲ್ಲಿ ವಾಸಸ್ಥಾನಕ್ಕೂ, ಜಾತಿಗೂ, ಆಹಾರಕ್ಕೂ, ವರ್ಗಕ್ಕೂ, ವೃತ್ತಿಗೂ ಒಂದಕ್ಕೊಂದು ಸಂಬಂಧವಿದೆ. ಭಾರತ ಜಾತ್ಯತೀತ ರಾಷ್ಟ್ರ ಎಂಬುದಕ್ಕಿಂತ ಜಾತಿಯತೆ ಅತಿಯಾಗಿರುವ ರಾಷ್ಟ್ರವಾಗಿದೆ. ಇಲ್ಲಿ ಜಾತಿ, ವರ್ಗ, ಪುರುಷ ಕೇಂದ್ರಿತ ಹಿತಾಸಕ್ತಿಗಳು ಹಲವು ಸಾಮಾಜಿಕ, ಆರ್ಥಿಕ ತಾರತಮ್ಯಗಳನ್ನು ನಿರ್ಮಾಣ ಮಾಡಿವೆ. ಇವು ಎಷ್ಟೋ ಅಮಾನವಿಯ ಘಟನೆಗಳಿಗೆ ಕಾರಣವಾಗಿವೆ. ಈ ಬಗೆಯ ತಾರತಮ್ಯಗಳು ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುತ್ತವೆ. ಪ್ರಸ್ತುತ ಈ ಲೇಖನದಲ್ಲಿ ವಾಸಸ್ಥಾನದ ಮೇಲೆ ಜಾತಿ, ಆಹಾರ ಮತ್ತು ವರ್ಗದ ತಾರತಮ್ಯಗಳು ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಗಮನಿಸಲಾಗಿದೆ.

ಕೆಲವೊಂದು ದೇವಸ್ಥಾನಗಳಲ್ಲಿ ಹೇಗೆ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತದೆಯೋ ಹಾಗೆಯೇ ಕೆಲವು ಬಾಡಿಗೆ ಮನೆಗಳನ್ನು ಪಡೆಯುವಲ್ಲಿ ಕೂಡಾ ದಲಿತರು ಅಸ್ಪೃಶ್ಯತೆಗೆ ಒಳಗಾಗುವಂತಹ ಪರಿಸ್ಥಿತಿಯಿದೆ. ಊರಿಗೆ ಹೊರಗಿನಿಂದ ವೃತ್ತಿಗೊ, ಶಿಕ್ಷಣಕ್ಕೊ ಬಂದ ದಲಿತರಿಗೆ ಮೊದಲು ಕಾಡುವಂತಹ ಸಮಸ್ಯೆಯೆಂದರೆ ಬಾಡಿಗೆ ಮನೆ ಪಡೆಯುವುದು. ಸಾಮಾಜಿಕವಾಗಿ ಮೇಲುಸ್ತರದಲ್ಲಿರುವ ಸಮುದಾಯಗಳು ಬಹುತೇಕ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು ಸ್ವಂತ ಮನೆಯನ್ನು ಹೊಂದಿರುತ್ತಾರೆ. ದಲಿತರು ಬಾಡಿಗೆ ಕೊಡುವಂತೆ ತಮ್ಮ ಮನೆ ಕಟ್ಟಿಕೊಂಡಿರುವುದಿಲ್ಲ. ಹೀಗಾಗಿ ಹೊರಗಿಂದ ಬಂದವರು ಮೇಲ್ಜಾತಿ, ಮೇಲ್ವರ್ಗದವರು ಕಟ್ಟಿದ ಮನೆಗಳಲ್ಲೇ ಬಾಡಿಗೆ ಹಿಡಿಯಬೇಕಾಗುತ್ತದೆ. ಆದರೆ ಅವರು ದಲಿತರಿಗೆ ಆಹಾರದ ಕಾರಣಕ್ಕಾಗಿ, ಜಾತಿಯ ಕಾರಣಕ್ಕಾಗಿ ಬಾಡಿಗೆ ಮನೆ ಕೊಡುವುದಕ್ಕೆ ನಿರಾಕರಿಸುತ್ತಾರೆ. ನಮ್ಮ ಸಮಾಜದಲ್ಲಿ ಜಾತಿ ಮತ್ತು ಆಹಾರಕ್ರಮಗಳು ಅಂತರ್‌ಸಂಬಂಧ ಹೊಂದಿರುವುದರಿಂದ ಇವುಗಳ ಆಧಾರದ ಮೇಲೆ ಬಾಡಿಗೆ ಮನೆಯನ್ನು ಕೊಡುವ ಅಥವಾ ಕೊಡದಿರುವ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಆದರೆ ಮನೆಯನ್ನು ನಿರ್ಮಾಣ ಮಾಡುವಲ್ಲಿ ಜಲ್ಲಿ ಒಡೆಯುವ, ಮಣ್ಣು ಹೊರುವ, ಸಿಮೆಂಟ್ ಕಲಸುವ ಕೆಲಸಗಳ ಹಿಂದೆ ತಳಸಮುದಾಯದಿಂದ ಬಂದ ದುಡಿಯುವ ವರ್ಗಗಳ ಶ್ರಮವೇ ಬಹುತೇಕ ಇರುತ್ತದೆ. ಮನೆ ನಿರ್ಮಾಣವಾಗುವಾಗ ಕಾಣದ ಸಾಮಾಜಿಕ, ಆರ್ಥಿಕ ಅಂತರಗಳು ಅದು ಗೃಹವಾದಾಗ ಗೃಹಪ್ರವೇಶದ ಬಳಿಕ ಶುರುವಾಗುತ್ತವೆ. ಗೃಹಪ್ರವೇಶದಲ್ಲಿ ಅದಕ್ಕೆ ಹೋಮ, ಪೂಜೆಯ ಮೂಲಕ 'ಪವಿತ್ರ'ಕರಿಸಲಾಗುತ್ತದೆ. ಈ ಮೂಲಕ ಅಸ್ಪೃಶ್ಯವಾಗಿದ್ದ ಮನೆ ಸ್ಪೃಶ್ಯವಾದ ಗೃಹವಾಗುತ್ತದೆ. ಅಸ್ಪೃಶ್ಯತೆ ಆಚರಿಸುವ ಜಾಗವಾಗುತ್ತದೆ.

ಇದನ್ನು ಒಂದು ರೂಪಕ ಕತೆಯ ಮೂಲಕ ವಿವರಿಸಬಹುದು. ಒಮ್ಮೆ ಒಬ್ಬ ಮೇಲ್ಜಾತಿ ವ್ಯಕ್ತಿ ಪತ್ನಿಗೆ ನೀರು ತರಲು ಹೇಳುತ್ತಾನೆ. ಆಕೆ ಪಕ್ಕದ ಶೂದ್ರನ ಮನೆಯಿಂದ ನೀರು ತಂದುಕೊಡುತ್ತಾಳೆ. ನೀರು ಕುಡಿದ ವ್ಯಕ್ತಿ ನೀರು ಚೆನ್ನಾಗಿದೆ ಎಲ್ಲಿಂದ ತಂದೆ ಎಂದು ನೀರಿನ ಮೂಲ ಕೇಳುವನು. ಅದು ಶೂದ್ರನ ಮನೆಯದು ಎಂದು ಗೊತ್ತಾದ ತಕ್ಷಣ ಅದನ್ನು ಕುಡಿದುದಕ್ಕೆ ಪರಿತಪಿಸುವನು. ಮತ್ತೊಂದು ದಿನ ನೀರು ಕೇಳಿದಾಗ ಪತ್ನಿ ನೀರಿಲ್ಲ ಎನ್ನುತ್ತಾಳೆ. ಏಕೆಂದರೆ ನೀರಿನ ಮೂಲ ಶೂದ್ರರ ಕೇರಿಯಲ್ಲಿರುತ್ತದೆ. ಹಾಲು ಕೇಳಿದಾಗ ಹಾಲಿಲ್ಲ ಎನ್ನುತ್ತಾಳೆ. ಏಕೆಂದರೆ ಹಸು ಮೇಯಿಸುವವರು ತಳ ಸಮುದಾಯದವರಾಗಿರುತ್ತಾರೆ. ಕೊನೆಗೆ ಆಕೆ ಮನೆಗೆ ಬೆಂಕಿ ಹಚ್ಚುತ್ತಾಳೆ, ಕಾರಣ ಆ ಮನೆಯ ನಿರ್ಮಾಣದ ಹಿಂದಿರುವ ಬೆವರು ಕೂಡಾ ತಳಸಮುದಾಯದಿಂದ ಬಂದ ದುಡಿಯುವ ವರ್ಗಗಳದ್ದೆ ಆಗಿರುತ್ತದೆ. ಇಲ್ಲಿಯೇ ಸಿದ್ದಲಿಂಗಯ್ಯನವರ 'ನನ್ನ ಜನಗಳು' ಕವಿತೆಯ

"ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು

ತಳಾದೀಗೆ ಸಿಕ್ಕಿದೋರು ನನ್ನ ಜನಗಳು...."

ಸಾಲು ನೆನಪಾಗುತ್ತದೆ.

ಈ ಮೇಲಿನ ಕಥೆ ಮತ್ತು ಕವಿತೆಗಳೆರಡು ಉತ್ಪಾದಕರೂ ಮತ್ತು ಉತ್ಪಾದಿತ ವಸ್ತುವಿಗೂ ಇರುವ ಸಂಬಂಧವನ್ನು ಮತ್ತು ಒಟ್ಟಾರೆ ಸಮಾಜದ ಸಂಪತ್ತಿನ ನಿರ್ಮಾಣದ ಹಿಂದೆ ಇರುವ ದಲಿತರ, ಬಡವರ, ದುಡಿಯುವ ವರ್ಗಗಳ ಶ್ರಮವನ್ನು ಮಾರ್ಮಿಕವಾಗಿ ತಿಳಿಸುತ್ತದೆ. ಈ ರೀತಿ ಶ್ರಮ ಸಂಸ್ಕೃತಿಯ ದುಡಿಯುವಿಕೆಯಿಂದ ನಿರ್ಮಾಣವಾದ ಯಾವುದನ್ನೇ ಆಗಲಿ ಸಂಪ್ರದಾಯ, ನಂಬಿಕೆಗಳ ಹೆಸರಲ್ಲಿ ಸ್ವಾಧೀನಕರಿಸುವುದರ ಹಿಂದೆ ಒಂದು



ದೀರ್ಘ ಚರಿತ್ರೆಯೇ ಇದೆ. ಆರ್ಯರು ಭಾರತಕ್ಕೆ ವಲಸೆ ಬಂದಾಗ ಅನಾರ್ಯರ ಸಂಪತ್ತನ್ನು ವಶಪಡಿಸಿಕೊಳ್ಳಲು ಸ್ಪೃಶ್ಯತೆ, ಅಸ್ಪೃಶ್ಯತೆಯನ್ನು ಹುಟ್ಟುಹಾಕಿದರು ಎಂಬ ವ್ಯಾಖ್ಯಾನವಿದೆ. ಅಸ್ಪೃಶ್ಯತೆಯು ಒಂದು ಸಾಮಾಜಿಕ, ಮನಶ್ಶಾಸ್ತ್ರೀಯ, ಆರ್ಥಿಕ ಸಿದ್ಧಾಂತವಾಗಿದ್ದು, ಅದು ಇಂದಿಗೂ ಜನರ ಬದುಕಿನ ಭಾಗವಾಗಿ ಮುಂದುವರೆದುಕೊಂಡು ಬಂದಿದೆ. ಇದಕ್ಕೆ ಪೂರಕವಾಗಿ ಮಾಧ್ಯಮಗಳಲ್ಲಿ ಬರುವ ಜ್ಯೋತಿಷಿಗಳು ಜನರ ಭಾವುಕತೆಯನ್ನು ದುರುಪಯೋಗಪಡಿಸಿಕೊಂಡು ಅವರನ್ನು ಮೂಢರನ್ನಾಗಿಸಿ ಉತ್ತಮ ಸಮಾಜದ ನಿರ್ಮಾಣಕ್ಕೆ ತೊಡಕಾಗಿದ್ದಾರೆ. ಈ ಹಿಂದಿನ ಚರಿತ್ರೆಯಲ್ಲಿ ಮೇಲ್ವರ್ಗದವರು ದಲಿತರಿಗೆ ನೇರವಾಗಿ ಶೋಷಣೆ ಮಾಡುತ್ತಿದ್ದರು ಹಾಗೂ ಶೋಷಕರು ಇಲ್ಲಿ ಸ್ಪಷ್ಟವಾಗಿರುತ್ತಿದ್ದರು. ಆದರೆ ಇಂದಿನ ದಿನಮಾನಗಳಲ್ಲಿ ನಾಜೂಕಾಗಿ ಶೋಷಿಸುವುದನ್ನು ಕಾಣಬಹುದು. ಹೀಗೆ ವಾಸಸ್ಥಾನ ಕೂಡಾ ಸ್ಪೃಶ್ಯತೆ, ಅಸ್ಪೃಶ್ಯತೆ ಎಂಬುದರ ವ್ಯಾಪ್ತಿಗೆ ಬಂದು ಗಟ್ಟಿಯಾಗಿ ನೆಲೆ ನಿಂತಿದೆ.

ಭಾರತದಲ್ಲಿ ಬಹುಸಂಖ್ಯಾತ ಮಾಂಸಾಹಾರಿಗಳನ್ನು ಕಡೆಗಣಿಸಿ ಅಲ್ಪಸಂಖ್ಯಾತ ಸಸ್ಯಾಹಾರಿಗಳ ಸಂಸ್ಕೃತಿಯನ್ನು ಶ್ರೇಷ್ಠ ಎಂದು ಬಿಂಬಿಸುತ್ತ ಬರಲಾಗಿದೆ. ಅದನ್ನು ಜನರ ಮೇಲೆ ಹೇರುವ ಕೆಲಸ ನಡೆಯುತ್ತಿದೆ. ಈ ಮೂಲಕ ಮಾಂಸಾಹಾರಿಗಳಿಗೆ ಬಾಡಿಗೆ ಮನೆ ನೀಡಲು ನಿರಾಕರಿಸಲಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಾಂಸಾಹಾರಿಗಳ ಮೇಲೆ ಮಾರಣಾಂತಿಕವಾದ ಹಲ್ಲೆಗಳನ್ನು ಮಾಡುವಂತಹ ಪರಿಸ್ಥಿತಿ ಕಂಡುಬರುತ್ತಿದೆ. ಉತ್ತರ ಪ್ರದೇಶದ ದಾದ್ರಿಯಲ್ಲಿ ಮುಸ್ಲಿಮರ ಮೇಲೆ, ಗುಜರಾತಿನ ಊನದಲ್ಲಿ ಹಾಗೂ ಕರ್ನಾಟಕದ ಬಾಳೆಹೊನ್ನೂರಿನಲ್ಲಿ ದಲಿತರ ಮೇಲಾದ ಹಲ್ಲೆಗಳ ಹಿಂದೆ ಮಾಂಸಾಹಾರದ ಬಗೆಗಿನ ಮೇಲ್ಜಾತಿಯವರ ಅಸಹನೆಯಿದೆ. ಮಾಂಸಾಹಾರವು ಕೂಡ ಆಹಾರ ಸರಪಳಿಯ ಒಂದು ಕ್ರಮ ಎಂಬುದು ಇವರಿಗೆ ತಿಳಿದಿದೆಯೋ ಅಥವಾ ತಿಳಿದಿದ್ದರೂ ತಿಳಿಯದಂತೆ ಮಾಡಲಾಗುತ್ತಿದೆಯೋ ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿದೆ.

ಮನೆಯಲ್ಲಿ ಮುದ್ರೆಕಲ್ಲಿದೆ ಎಂಬ ನೆಪ ಹೇಳಿ ದಲಿತರಿಗೆ, ಮುಸ್ಲಿಮರಿಗೆ ಬಾಡಿಗೆ ನೀಡದಿರುವ ನೂರಾರು ಪ್ರಕರಣಗಳಿವೆ. ನಮ್ಮ ಸಮಾಜವು ವೈಚಾರಿಕ ತಳಹದಿಯ ಮೇಲೆ ನಿರ್ಮಾಣವಾಗದಿರುವುದೇ ಈ ತರದ ತಾರತಮ್ಯಗಳಿಗೆ ಕಾರಣವಾಗಿದೆ. ಅವಿವಾಹಿತರಿಗೆ, ದಲಿತರಿಗೆ, ಬಡವರಿಗೆ, ಮುಸ್ಲಿಮರಿಗೆ ಬಾಡಿಗೆ ಮನೆ ಕೊಡದಿರುವುದು ನಮ್ಮ ದೇಶ 'ವಿವಿಧತೆಯಲ್ಲಿ ಏಕತೆ'ಯನ್ನು ಒಳಗೊಂಡಿದೆ ಎಂಬ ನಂಬಿಕೆಯನ್ನು ಭಗ್ನಗೊಳಿಸುತ್ತದೆ. ಈ ಏಕತೆ ಎಂಬುದು ಮೇಲ್‌ಸ್ತರದಿಂದ ಉಂಟಾದುದ್ದಲ್ಲ, ತುಳಿತಕ್ಕೊಳಗಾದವರು ತಮ್ಮ ಅಸಹಾಯಕತೆಯಿಂದ ಸಹಿಸಿಕೊಂಡಿರುವುದರಿಂದ ಬಂದಿದೆ. ಈ ಬಗೆಯ ತಾರತಮ್ಯಗಳು ಕೇವಲ ಸಸ್ಯಾಹಾರಿ ಹಾಗೂ ಮಾಂಸಾಹಾರಿಗಳ ನಡುವೆ ಮಾತ್ರ ಕಂಡುಬರುವುದಿಲ್ಲ, ಮಾಂಸ ತಿನ್ನುವ ಬಹುತೇಕ ಸಮದಾಯಗಳಲ್ಲೂ ಈ ತರದ ಜಾತಿ ಆಧಾರಿತ, ಆಹಾರ ಆಧಾರಿತ ತಾರತಮ್ಯಗಳು ಕಂಡುಬರುತ್ತವೆ.

ಮುಸ್ಲಿಮರಿಗೆ ಬಾಡಿಗೆ ಮನೆ ನೀಡಲು ಹೇಗೆ ಕೆಲವೊಂದು ನಿರ್ಬಂಧಗಳಿವೆಯೊ ಹಾಗೆಯೇ ಕೆಲವು ದಲಿತರು ಮತ್ತು ಕೆಳಜಾತಿಯವರು ಮುಸ್ಲಿಮ್ ಕೇರಿಗಳಲ್ಲಿ ಬಾಡಿಗೆ ಮನೆ ಕೇಳಲು ಹಿಂಜರಿಯುತ್ತಾರೆ. ಇದಕ್ಕೆ ಮುಖ್ಯವಾದ ಕಾರಣ, ಸಾಂಸ್ಕೃತಿಕ ಭಿನ್ನತೆ. ನಮ್ಮವರು ನಮ್ಮವರಲ್ಲ ಎಂಬ ಈ ಅಸಂವಿಧಾನಿಕ ಭಿನ್ನತೆಯ ಸೃಷ್ಟಿಯು ಮುಸ್ಲಿಮರನ್ನು ಹೀಗೆ ಕಾಣುವಂತೆ ಮಾಡಿದೆ. ಮುಸ್ಲಿಮರು ಭಯೋತ್ಪಾದಕರಿದ್ದಂತೆ ಎಂಬ ಪೂರ್ವಗ್ರಹಿತ ಆರೋಪವು ಕೂಡ ನಗರಗಳಲ್ಲಿ ಮುಸ್ಲಿಮರಿಗೆ ಬಾಡಿಗೆ ಮನೆ ಕೊಡಲಾಗದಂತಹ ಸನ್ನಿವೇಶ ನಿರ್ಮಾಣ ಮಾಡಿಬಿಟ್ಟಿದೆ. ಈ ಎಲ್ಲಾ ಸಂಗತಿಗಳ ಮೂಲಕ ನಮ್ಮವರು, ನಮ್ಮವರಲ್ಲ ಎಂಬ ತಾರತಮ್ಯ ಪ್ರಜ್ಞೆಯನ್ನು ಸಮಾಜದಲ್ಲಿ ತುಂಬಲಾಗಿದೆ. ಬ್ರಿಟಿಷರು ತಮ್ಮ ವಸಾಹತುಶಾಹಿ ಆಡಳಿತಕ್ಕೆ ಧಕ್ಕೆ ಬಾರದಿರಲಿ ಎಂಬ ಕಾರಣಕ್ಕೆ ಧರ್ಮಧರ್ಮಗಳ ನಡುವೆ ಒಡೆದು ಆಳುವ ನೀತಿಯನ್ನು ಕುತಂತ್ರದಿಂದ ಬಳಸಿದರು. ಬಾಡಿಗೆ ಕೊಡುವ ಅಥವಾ ಬಾಡಿಗೆದಾರರಾಗಿ ಹೋಗುವುದರ ಹಿಂದೆ ಜಾತಿಗಳು ಒಡೆದು ಆಳುವ ನೀತಿಯನ್ನು ಬಳಸುತ್ತವೆ. ಜಾತಿ ಮತ್ತು ಧರ್ಮದ ಆಧಾರದಲ್ಲಿ ಬಾಡಿಗೆ ಮನೆ ಕೊಡುವುದು ಕೊಡದಿರುವುದು ಭಾರತದ ಬಹುಸಂಸ್ಕೃತಿಯನ್ನು ಒಪ್ಪದ ಮೂಲಭೂತವಾದಿತನದಂತೆ ಕಾಣುತ್ತದೆ.


ಇನ್ನು ವಾಸಸ್ಥಾನಕ್ಕೂ, ಆರ್ಥಿಕತೆಗೂ ಇರುವ ಸಂಬಂಧವನ್ನು ಗಮನಿಸುವುದಾದರೆ, ಮನೆಯ ಮಾಲಿಕರ ಪ್ರತಿಕ್ರಿಯೆಯು ಬಾಡಿಗೆ ಮನೆ ಕೇಳುವವರ ಆರ್ಥಿಕ ಹಿನ್ನೆಲೆಯನ್ನು ಆಧರಿಸಿರುತ್ತದೆ. ಬಾಡಿಗೆ ಮನೆ ಕೇಳುವವರು ಆರ್ಥಿಕವಾಗಿ ಸಬಲರಾಗಿರುವಂತೆ ಕಂಡುಬಂದರೆ ಅಥವಾ ಯಾವುದಾದರೂ ನೌಕರಿಯಲ್ಲಿದ್ದರೆ ಅವರಿಗೆ ಸ್ವಲ್ಪ ಗೌರವದಿಂದಲಾದರೂ ಮಾತನಾಡಿಸುತ್ತಾರೆ. ಇನ್ನು ಆರ್ಥಿಕವಾಗಿ ಹಿಂದುಳಿದಿರುವವರನ್ನಂತೂ ಮಾತನಾಡಿಸುವ ವ್ಯವಧಾನ ಮಾಲಿಕರಲ್ಲಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕೆಲವರು ದಲಿತರಿಗೆ ಬಾಡಿಗೆ ಮನೆ ಕೊಡಲು ಮುಂದಾದರೂ, ಅದು ದಲಿತರ ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ. ಜೊತೆಗೆ ಮೇಲ್‌ಜಾತಿಯ ಸಮುದಾಯಗಳು ಬಹುಸಂಖ್ಯಾತ ತಳಸಮುದಾಯದವರೊಂದಿಗೆ ಮಾಂಸಾಹಾರದ ವಿಷಯದಲ್ಲಿ ಅಂತರ ಕಾಯ್ದುಕೊಂಡರೆ ಅವರ ಆರ್ಥಿಕತೆಗೆ ಪೆಟ್ಟು ಬೀಳುವ ಸಾಧ್ಯತೆಗಳಿವೆ. ಇದರಿಂದ ಇತ್ತೀಚೆಗೆ ದಲಿತರ ಆರ್ಥಿಕ ಸ್ಥಿತಿಗತಿಯನ್ನು ಆಧರಿಸಿ ಬಾಡಿಗೆ ಮನೆ ನೀಡುವ ಪ್ರಸಂಗಗಳು ಅಪರೂಪಕ್ಕೆ ನಡೆಯುತ್ತಿವೆ. ಆದರೂ ಇನ್ನೂ ಹಳೆಯ ಅನಿಷ್ಟ ಸಂಪ್ರದಾಯಗಳು ಹಾಗೆಯೇ ಉಳಿದುಕೊಂಡಿವೆ. ಇಲ್ಲಿ ನಡೆಯುತ್ತಿರುವ ಅಪರೂಪದ ಬದಲಾವಣೆಗಳು ಕೇವಲ ಬಾಹ್ಯ ಒತ್ತಡದವು, ಅಂತರಂಗದಿಂದ ಆದವುಗಳಲ್ಲ. ಹೀಗೆ ವಾಸಸ್ಥಾನಕ್ಕೂ, ಜಾತಿಗೂ, ವರ್ಗಕ್ಕೂ ಸಂಬಂಧವಿದ್ದು ಅವು ಹಲವು ಸಮಸ್ಯೆಗಳನ್ನುಂಟುಮಾಡುತ್ತಿವೆ. ಇಲ್ಲಿ ಮನುಷ್ಯರು ತಾವು ಬದುಕಲು ಕೇವಲ ನಿಯಮಗಳನ್ನಷ್ಟೆ ಮಾಡಿಕೊಂಡಿಲ್ಲ, ಸ್ವಾರ್ಥಕ್ಕಾಗಿ ನಿರ್ಬಂಧಗಳನ್ನು ಸಹ ರೂಪಿಸಿಕೊಂಡಿದ್ದಾರೆ. ಈ ನಿರ್ಬಂಧಗಳ ಫಲವಾಗಿಯೇ ತಾರತಮ್ಯಗಳುಂಟಾಗಿ ವಾಸಸ್ಥಾನದ ಜೊತೆಗೆ ಇನ್ನೂ ಹಲವು ಸಂಗತಿಗಳಲ್ಲಿ ದಲಿತರು, ಬಡವರನ್ನು ಶೋಷಣೆಗೆ ಒಳಪಡಿಸುತ್ತಿವೆ. ಈ ತಾರತಮ್ಯಗಳಿಂದ ನಮ್ಮದು, ನಮ್ಮದಲ್ಲ ಎಂಬ ನಿಲುವು ಜನರ ಮನಸ್ಸಿನೊಳಗೆ ತುಂಬಿಹೋಗಿದೆ.

ಈ ತರದ ಸಮಸ್ಯೆಗಳು ಇಂದು ನಿನ್ನೆಯದಲ್ಲ, ಕಾಲದಿಂದ ಕಾಲಕ್ಕೆ ಬೇರೆ ಬೇರೆ ಸ್ವರೂಪದಲ್ಲಿ ಸೃಷ್ಟಿಯಾಗುತ್ತಲೆ ಇರುತ್ತವೆ. ಇಂತಹ ಸಮಸ್ಯೆಗಳನ್ನು ಮೀರಿ ಸಮಾನ ಸಮಾಜ ನಿರ್ಮಾಣದ ಹಿನ್ನೆಲೆಯಲ್ಲಿ ಎರಡು ಸಂಗತಿಗಳ ಮೇಲೆ ಸಾಕಷ್ಟು ನಿರೀಕ್ಷೆ ಇಟ್ಟುಕೊಳ್ಳಲಾಗಿತ್ತು. ಒಂದನೆಯದು ಬ್ರಿಟಿಷ್‌ರಿಂದ ಸ್ವಾತಂತ್ರ್ಯ ಸಿಗುವುದು, ಮತ್ತೊಂದು ಆಧುನಿಕ ಶಿಕ್ಷಣ ಪದ್ಧತಿ. ಇವೆರಡೂ ಜನರ ಮನಸ್ಥಿತಿಯಲ್ಲಿ ಹಾಗೂ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ತರಬಹುದೆಂಬ ಆಕಾಂಕ್ಷೆ ಇತ್ತು. ಆದರೆ 1947 ಆಗಸ್ಟ್ 15ರ ಘಟನೆಯನ್ನು ಸ್ವಾತಂತ್ರ್ಯ ದೊರಕಿದ ದಿನ ಎಂಬುದಕ್ಕಿಂತ ಬ್ರಿಟಿಷ್‌ರಿಂದ ಭಾರತದ ಉಳ್ಳವರಿಗೆ ಅಧಿಕಾರ ಹಸ್ತಾಂತರವಾದ ದಿನ ಎಂದು ಹೇಳಬಹುದಾಗಿದೆ. ಇದರಿಂದ ಜನಸಾಮಾನ್ಯರ ನಿರೀಕ್ಷೆಗಳೆಲ್ಲ ಹುಸಿಯಾಗಿ ಬಡವರು ಬಡವರಾಗಿಯೇ ಉಳಿದುಹೋದರು. ಜಾತಿಯತೆ ಮತ್ತಷ್ಟು ಹೆಚ್ಚಿತು. ಇನ್ನೂ ಮುಂತಾದ ಸಮಸ್ಯೆಗಳು ಹೊಸ ಸ್ವರೂಪದಲ್ಲಿ ಹುಟ್ಟಿಕೊಂಡವು; ಇನ್ನೂ ಶಿಕ್ಷಣವು ಸಹ ಜನರ ಮನಸ್ಥಿತಿಯಲ್ಲಿ ಯಾವುದೇ ಬದಲಾವಣೆ ತರುವಲ್ಲಿ ಬಹುತೇಕ ವಿಫಲವಾಗಿದೆ. ಇವುಗಳೆಲ್ಲದರ ನಡುವೆ ಉಂಟಾದ ತಾರತಮ್ಯಗಳು ಸಮಾಜದಲ್ಲಿ ಹಲವು ಬಿಕ್ಕಟ್ಟುಗಳ ಸೃಷ್ಟಿಗೆ ಕಾರಣವಾಗಿದ್ದು ಪರಿಹಾರವೇ ಒಂದು ಜಿಜ್ಞಾಸೆಯಾಗಿ ಉಳಿದುಬಿಟ್ಟಿದೆ.

ಹರೀಶ್ ಚನ್ನಗಿರಿ

ಮಸ್ಕಿ ಶಾಸಕ ಪ್ರತಾಪ್‌ಗೌಡ

ಪಾಟೀಲನ ಅಪರಾವತಾರ


ಪ್ರತಾಪ್... ಪಾಟ...

ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಜನರ ಸೇವೆ ಮಾಡಲು ಸಿದ್ಧರಿರಬೇಕು ಎಂಬುದು ಸಂವಿಧಾನದ ಆಶಯ. ಆದರೆ ಈಗಿನ ಪರಿಸ್ಥಿತಿ ನೋಡಿದರೆ ಜನಪ್ರತಿನಿಧಿಗಳು ಸೇವೆ ಮಾಡುವುದು ಇರಲಿ, ಜನರಿಗೆ ತೊಂದರೆ ಕೊಡದೇ ಇದ್ದರೆ ಅಷ್ಟೇ ಸಾಕಪ್ಪ ಎಂಬ ಸ್ಥಿತಿಗೆ ತಲುಪಿರುವುದು ನಮ್ಮೆಲ್ಲರ ದುರಂತ. ಇಂತಹ ದುರಂತಗಳನ್ನು ಹುಟ್ಟುಹಾಕಲೆಂದೇ ಅವತಾರವೆತ್ತಿ ಬಂದಿರುವ ಮಸ್ಕಿ ಕ್ಷೇತ್ರದ ಶಾಸಕ ಪ್ರತಾಪಗೌಡ ಪಾಟೀಲ್‌ನ ಆಟಾಟೋಪಗಳು ಅಷ್ಟಿಷ್ಟಲ್ಲ. ಇಡೀ ಕ್ಷೇತ್ರದ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ಈತನ ದುರಹಂಕಾರಕ್ಕೆ ನೋವಿಗೀಡಾದ, ಬಸವಳಿದ ಬಡವರು ಮತ್ತು ಅಸಹಾಯಕರು ಸದ್ಯಕ್ಕೆ ಏನೂ ಮಾಡಲಾಗದೇ, 2018ರ ವಿಧಾನಸಭಾ ಚುನಾವಣೆ ಆದಷ್ಟು ಬೇಗ ಬರಲಪ್ಪ ಎಂದು ಮನಸ್ಸಿನಲ್ಲಿಯೇ ಬೇಡಿಕೊಳ್ಳುತ್ತಿದ್ದಾರೆ.

ರಾಯಚೂರು ಜಿಲ್ಲೆಯ ದೂರದ ಗಡಿಭಾಗದ ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕ ಪ್ರತಾಪಗೌಡ ಪಾಟೀಲ್ ತಾನು ನಡೆದದ್ದೆ ದಾರಿ, ಆಡಿದ್ದೆ ಆಟ ಎಂದುಕೊಂಡಿದ್ದಾನೆ. ತನ್ನನ್ನು ಯಾರಾದರೂ ಪ್ರಶ್ನಿಸಿದರೆ ಅಥವಾ ತನಗೆ ಅಡ್ಡಬಂದರೆ ತನ್ನ ಹಿಂಬಾಲಕರ ಮೂಲಕ ಅವರನ್ನು ಬಾಯಿಬಿಡದಂತೆ ಮಾಡುವುದರಲ್ಲಿ ಈತ ಎತ್ತಿದಕೈ. ಈತ ಸ್ವತಃ ಎಸ್‌ಟಿ ಸಮುದಾಯಕ್ಕೆ ಸೇರಿದ್ದರೂ ಈತನ ಕ್ಷೇತ್ರದಲ್ಲಿನ ಹಲವಾರು ತಾಂಡಾಗಳಲ್ಲಿ ಕಷ್ಟಪಟ್ಟು ಬದುಕು ದೂಡುತ್ತಿರುವ ದಲಿತ ಜನರ ಬದುಕು ಮಾತ್ರ ಸುಧಾರಣೆಯಾಗಿಲ್ಲ. ಇಂದಿಗೂ ಇಲ್ಲಿನ ತಾಂಡಾದ ನೂರಾರು ಯುವಕರು ಮತ್ತು ಕೂಲಿಕಾರ್ಮಿಕರು ಮೂಲಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಬದುಕಬೇಕಾದರೆ ಬೆಂಗಳೂರು, ಮಂಗಳೂರು ಥರದ ಮಹಾನಗರಗಳಿಗೆ ಪ್ರತಿನಿತ್ಯ ಗುಳೇ ಹೋಗಬೇಕಾದ ಸ್ಥಿತಿ ಇದೆ. ಮೀಸಲು ಕ್ಷೇತ್ರವಾದ ಮಸ್ಕಿಯಲ್ಲಿ ದಲಿತರ ಸಬಲೀಕರಣದ ಬದಲಿಗೆ ರಾಯಚೂರು ಜಿಲ್ಲೆಯಲ್ಲಿಯೇ ಅತಿಹೆಚ್ಚಿನ ದಲಿತರ ಮೇಲಿನ ಹಲ್ಲೆಗಳು ಇದೇ ಕ್ಷೇತ್ರದಲ್ಲಿ ನಡೆದಿರುವುದು ಈತನ ಕುಂತಂತ್ರದಿಂದಲೇ.

ದಲಿತ ವಿರೋಧಿ ಶಾಸಕ

ಕೆಲ ತಿಂಗಳ ಹಿಂದೆಯಷ್ಟೆ ತುರ್ವಿಹಾಳ ಗ್ರಾಮದಲ್ಲಿ ದಲಿತ ಯುವಕರ ಮೇಲೆ ಮತ್ತು ಬಾಣಂತಿಯರ ಮೇಲೆಯೂ ಹಲ್ಲೆ ನಡೆದಿತ್ತು. ಹಲ್ಲೆ ಮಾಡಿದವರೆಲ್ಲರೂ ಊರಿನ ಮೇಲ್ಜಾತಿಯವರಾಗಿದ್ದರೂ ಹಲ್ಲೆಗೆ ಕುಮ್ಮಕ್ಕು ನೀಡಿದ್ದು ಮಾತ್ರ ಇದೇ ಪಾಟೀಲ. ತನ್ನ ಕ್ಷೇತ್ರದ ದಲಿತರ ಮೇಲೆ ಬರ್ಬರ ಹಲ್ಲೆಯಾಗಿದ್ದ ಸಂದರ್ಭದಲ್ಲಿ ನೆಪಮಾತ್ರಕ್ಕಾದರೂ ಆ ದಲಿತರನ್ನು ಮಾತನಾಡಿಸದ ಈತ ಅದೇ ದಿನ ಅದೇ ಊರಿನಲ್ಲಿ ತನ್ನ ಬೆಂಬಲಿಗನೊಬ್ಬನ ಅದ್ಧೂರಿ ಗೃಹಪ್ರವೇಶದಲ್ಲಿ ಭಾಗವಹಿಸಿ ಭರ್ಜರಿ ಊಟ ಮಾಡುತ್ತಿದ್ದ. ಅದೇರೀತಿ ತಿಡಿಗೊಳದಲ್ಲಿ ದಲಿತರ ಜಾಗ ವಶಪಡಿಸಿಕೊಳ್ಳಲು ಮುಂದಾದ ಇವನಿಗೆ ಅದು ಅಷ್ಟು ಸುಲಭವಾಗಲಿಲ್ಲ. ಅಲ್ಲಿನ ಸ್ವಾಭಿಮಾನಿ ದಲಿತರು ತಮ್ಮ ಜಮೀನನ್ನು ಅಷ್ಟು ಸುಲಭಕ್ಕೆ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಇದರಿಂದ ಕುಪಿತಗೊಂಡ ಈತ ಅಲ್ಲಿಯ ಮೇಲ್ಜಾತಿಯ ತನ್ನ ಬೆಂಬಲಿಗರಿಗೆ ಸುಪಾರಿ ನೀಡಿ ದಲಿತರ ಮೇಲೆ ಹಲ್ಲೆ ನಡೆಸಿದ್ದಲ್ಲದೇ ದಲಿತರ ಗುಡಿಸಲುಗಳಿಗೆ ಬೆಂಕಿ ಇಡಲು ಕಾರಣವಾಗಿದ್ದ. ಚಿಕ್ಕಕಡಬೂರು ದಲಿತರ ಮೇಲಿನ ಹಲ್ಲೆ ಘಟನೆಯಲ್ಲಿಯೂ ಈತನ ಪಾಲಿದೆ. ಒಮ್ಮೆ ಚುನಾವಣಾ ಪ್ರಚಾರಕ್ಕೆ ಹೋಗಿದ್ದಾಗ ಹಳ್ಳಿಯೊಂದರಲ್ಲಿ ಭಾರೀ ವಿರೋಧ ಎದುರಾದಾಗ ಅದೇ ಊರಿನಲ್ಲಿ 'ನಿಮಗೆ ಒದ್ದು ಹೇಗೆ ಓಟು ಹಾಕಿಸಿಕೊಳ್ಳಬೇಕು ನನಗೆ ಗೊತ್ತು' ಎಂದು ಧಮಕಿ ಹಾಕಿ ವಾಪಸ್ ಮರಳಿದ ಬಗ್ಗೆ ಜನರೇ ತಿಳಿಸುತ್ತಾರೆ.

ಈತನ ಕಟ್ಟಾ ಬೆಂಬಲಿಗ ಶಿವು ಗುಂಜಳ್ಳಿ ಎಂಬಾತ ಪಡ್ಡೆ ಗ್ಯಾಂಗ್ ಕಟ್ಟಿಕೊಂಡು ಸಿಂಧನೂರಿನಲ್ಲಿ ಮುಸ್ಲಿಂ ಯುವಕರ ಮೇಲೆ ಹಲ್ಲೆ ಮಾಡಿದ್ದ. ಪ್ರಕರಣ ಗಂಭೀರ ತಿರುವು ಪಡೆದಿತ್ತು. ಈ ಪ್ರಕರಣದಲ್ಲಿ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಮುಂದಾದ ಎಂಎಲ್‌ಎ ದಾಂಡಿಗರ ಪರ ಲಾಬಿ ನಡೆಸಿ ಎಸ್ಪಿ ಮೇಲೆ ಒತ್ತಡ ಹಾಕಿದ್ದ. ಆದರೂ ಆರೋಪಿಗಳನ್ನು ಬಂಧಿಸಲು ಎಸ್ಪಿ ಮುಂದಾದಾಗ ಪೊಲೀಸ್ ಠಾಣೆಯಲ್ಲಿಯೇ "ನಮ್ಮ ಬೆಂಬಲಿಗರನ್ನೇನಾದರೂ ಅರೆಸ್ಟ್ ಮಾಡಿದರೆ ನಿಮ್ಮ ಪರಿಸ್ಥಿತಿ ನೆಟ್ಟಗಿರುವುದಿಲ್ಲ" ಎಂದು ಸಾರ್ವಜನಿಕವಾಗಿ ಧಮಕಿ ಹಾಕಿದ್ದ ಪಾಟೀಲು ಸಾಹೇಬ.


ದರ್ಪ ಅಂಗವಿಕಲರನ್ನೂ ಬಿಟ್ಟಿಲ್ಲ



ಇಷ್ಟೆಲ್ಲಾ ಗೂಂಡಾಗಿರಿ ನಡೆಸುವ ಪ್ರತಾಪ್‌ಗೌಡ ಪಾಟೀಲ್‌ನಿಗೆ ದಯೆ, ಕರುಣೆ ಎಂಬ ಪದಗಳ ಅರ್ಥವೇ ಗೊತ್ತಿಲ್ಲ. ಮಾನವೀಯತೆ ಎಂಬುದು ಅವನ ಶಬ್ದಕೋಶದಲ್ಲೇ ಇಲ್ಲ ಎನ್ನುವುದಕ್ಕೆ ಮೊನ್ನೆ ಅಂಗವಿಕಲನೊಬ್ಬನ ಮೇಲೆ ನಡೆದ ದಾಳಿಯೇ ಸಾಕ್ಷಿ. ಹಸಮಕಲ್‌ನ ಅಂಗವಿಕಲರಾದ ಬಾಬು ಎಂಬುವವರು ಕಳೆದ ಕೆಲವು ವರ್ಷಗಳಿಂದ ಮೂರು ಚಕ್ರದ ಮೋಟಾರ್ ಸೈಕಲ್ ಒಂದಕ್ಕೆ ಅರ್ಜಿ ಹಾಕಿ ಅಲೆದು ಅಲೆದು ಸುಸ್ತಾಗಿದ್ದರು. ಕೆಲವು ಬಾರಿ ಈ ಕುರಿತು ಶಾಸಕನಿಗೂ ಮನವಿ ಸಲ್ಲಿಸಿದ್ದರು. ಇಷ್ಟು ದಿನ ಆದರೂ ಸರ್ಕಾರದಿಂದ ತನಗೆ ನ್ಯಾಯವಾಗಿ ಬರಬೇಕಿದ್ದ ಸೌಲಭ್ಯ ಸಿಗದಿದ್ದುದರಿಂದ ಬಾಬು ಪ್ರತಾಪ್‌ಗೌಡನ ಖಾಸಗಿ ಆಪ್ತ ಸಹಾಯಕ ವಿರೇಶ್ ಎಂಬುವರಿಗೆ ಫೋನ್ ಮಾಡಿ ಮನವಿ ಮಾಡಿದರು. ತನ್ನ ಶಾಸಕನಂತೆಯೇ ದುರಹಂಕಾರ ತುಂಬಿಕೊಂಡಿರುವ ವೀರೇಶ್ ಇದಕ್ಕೆ ಸೂಕ್ತವಾಗಿ ಸ್ಪಂದಿಸಲಿಲ್ಲ. ಬದಲಿಗೆ "ಮೂರು ಚಕ್ರದ ವಾಹನವನ್ನು ಯಾರಿಗೆ, ಯಾವಾಗ ಕೊಡಿಸಬೇಕು ಎಂಬುದು ಗೊತ್ತು, ನೀನೇನು ನಮಗೆ ಪಾಠ ಹೇಳಲು ಬರಬೇಡ" ಎಂದೆಲ್ಲಾ ಬಾಯಿಗೆಬಂದಂತೆ ಬೈದನು. "ಅಲ್ಲ ಸಾರ್ ಕೊಡೋಕೆ ಆಗುತ್ತೆ ಅಂದ್ರೆ ಆಗುತ್ತೆ ಅಂತ ಹೇಳಿ, ಇಲ್ಲ ಅಂದ್ರೆ ಇಲ್ಲ ಅಂತ ಹೇಳಿ. ಅದು ಬಿಟ್ಟು ಯಾಕೆ ಬೈತೀರ?" ಎಂದು ಪ್ರಶ್ನಿಸಿದ್ದಕ್ಕೆ ವಿರೇಶ್ ಮತ್ತಷ್ಟು ಬೈದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ.

ಅಷ್ಟಕ್ಕೆ ಬಿಡದೇ ವೀರೇಶ್ ಮತ್ತವನ 4–5 ಜನ ಪುಢಾರಿಗಳು ಮಸ್ಕಿ ಬಸ್‌ಸ್ಟ್ಯಾಂಡ್‌ನ ಬಳಿ ಕಾಯುತ್ತಿದ್ದ ಬಾಬುವನ್ನು ಅಲ್ಲಿಂದ ಅಪಹರಿಸಲು ಮುಂದಾಗಿದ್ದಾರೆ. ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿ, ಗಲಾಟೆ ಮಾಡಿದ ಬಾಬು ತಕ್ಷಣ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿ ರಕ್ಷಣೆ ಕೋರಿದ್ದಾರೆ. ಇದರಿಂದ ಸ್ವಲ್ಪ ಹೆದರಿದ ಆ ಪುಢಾರಿಗಳು ಬಾಬುವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಇದನ್ನೆಲ್ಲಾ ನೋಡುತ್ತಿದ್ದ ಅಲ್ಲಿನ ಸಾರ್ವಜನಿಕರ ಸಲಹೆ ಮೇರೆಗೆ ಪೊಲೀಸರಿಗೆ ದೂರು ಕೊಡಲು ಬಾಬು ಮುಂದಾಗಿದ್ದಾರೆ. ಆದರೆ ಅಷ್ಟೊತ್ತಿಗಾಗಲೇ ಇದರ ಪೂರ್ಣ ವಿವರ ಪಡೆದಿದ್ದ ಪ್ರತಾಪ್‌ಗೌಡ ಯಾವುದೇ ಕಾರಣಕ್ಕೂ ದೂರು ದಾಖಲಿಸಿಕೊಳ್ಳಬಾರದೆಂದು ಎಸ್ಸೈ ಮೇಲೆ ಒತ್ತಡ ತಂದಿದ್ದಾನೆ. ಅಲ್ಲದೇ ತನ್ನ ಇತರ ಹಿಂಬಾಲಕರ ಅಕ್ರಮಕೂಟ ಸೇರಿದಂತೆ ಆಪ್ತ ಸಹಾಯಕನ ಕಡೆಯವರು ಅಲ್ಲಿಗೆ ಬಂದು ದೂರು ಕೊಡದಂತೆ ಒತ್ತಡ ಹೇರಿದ್ದಲ್ಲದೇ, ದೂರು ಬರೆಯಲು ಸಹ ಬಿಡದೆ, ಠಾಣೆಯಲ್ಲಿಯೇ ಅಡೆತಡೆ ಮಾಡಿದ್ದಾರೆ. "ಒಂದುವೇಳೆ ದೂರು ಕೊಟ್ಟಿದ್ದೇ ಆದರೆ ನೀನು ಜೀವಸಹಿತ ಉಳಿಯುವುದಿಲ್ಲ" ಎಂದು ಜೀವಬೆದರಿಕೆ ಹಾಕಿದ್ದಾರೆ. ಆಪ್ತ ಸಹಾಯಕನ ಹಾಗೂ ಹಿಂಬಾಲಕರ ಒತ್ತಡಕ್ಕೆ ಮಣಿದ ಠಾಣೆಯ ಸಿಬ್ಬಂದಿ ಘಟನೆ ನಡೆದ ದಿನ ಪ್ರಕರಣ ದಾಖಲಿಸಿಕೊಳ್ಳಲು ಹಿಂದೇಟು ಹಾಕಿ, ಬಾಬುಗೆ ಸಮಜಾಯಿಸಿ ನೀಡಿ ವಾಪಸ್ ಕಳುಹಿಸಿದ್ದಾರೆ.

ಅಂಗವಿಕಲ ಬಾಬು ಹಸಮಕಲ್ ಸರಕಾರದ ಸೌಲಭ್ಯ ಕೇಳಿದ್ದಕ್ಕೆ ಆತನ ಮೇಲೆ ಗೂಂಡಾವರ್ತನೆ ನಡೆಸಿರುವುದು ಮತ್ತು ದೂರು ನೀಡಲು ಮುಂದಾದ ಸಂದರ್ಭದಲ್ಲಿ ಪೊಲೀಸ್ ಠಾಣೆಯಲ್ಲೇ ಅಡೆತಡೆ ಮಾಡಿರುವುದು ಗಮನಿಸಿದರೆ ಮಸ್ಕಿ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆಯೇ? ಅಧಿಕಾರಿಗಳು ನ್ಯಾಯಸಮ್ಮತವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ಎಂದು ಅನುಮಾನ ಮೂಡಿಸುತ್ತದೆ. ಇವೆಲ್ಲವೂ ಅಲ್ಲಿಯ ಶಾಸಕ ಕೊಡುವ ತಿಂಗಳ ಹಣದ ಲೆಕ್ಕಾಚಾರಕ್ಕೆ ನೇರವಾಗಿ ನಡೆಯುತ್ತಿದೆ ಎಂದು ಅಲ್ಲಿನ ಪ್ರಗತಿಪರ ಸಂಘಟನೆಗಳ ಒಕ್ಕೂಟ ಆರೋಪಿಸಿದೆ. ಬಾಬುವಿನ ಜೊತೆಗೆ ನಿಂತು ಒತ್ತಡ ತಂದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುವಂತೆ ಒಕ್ಕೂಟ ಮಾಡಿದೆ. ಆದರೆ ದೂರು ದಾಖಲಿಸಿಕೊಂಡ ಪೊಲೀಸರು ಯಥಾರೀತಿ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಆರೋಪಿ ವೀರೇಶ್‌ನನ್ನು ಬಂಧಿಸುವುದಿರಲಿ ಕರೆದು ವಿಚಾರಣೆ ಸಹ ಮಾಡಿಲ್ಲ. ಇದರಿಂದ ಸಹನೆಯ ಕಟ್ಟೆಯೊಡೆದ ಅಂಗವಿಕಲರ ಸಂಘ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಪ್ರತಾಪ್‌ಗೌಡನ ಮಿತಿಮೀರಿದ ದೌರ್ಜನ್ಯದ ವಿರುದ್ಧ ಮತ್ತು ನಿಷ್ಕ್ರಿಯ ಪೊಲೀಸ್ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲು ಮುಂದಾಗಿದ್ದಾರೆ.


ಖಾಸಗಿ ಆಪ್ತ ಸಹಾಯಕ ವೀರೇಶ್

ಶಾಸಕನ ವಿರುದ್ಧ ಪ್ರತಿಭಟನೆ

ಆದರೆ ಭಾರೀ ಭ್ರಷ್ಟಾಚಾರ ಮತ್ತು ಪೊಲೀಸರನ್ನು ಒಳಗೆ ಹಾಕಿಕೊಳ್ಳುವುದನ್ನು ಕರಗತ ಮಾಡಿಕೊಂಡಿರುವ ಪ್ರತಾಪ್ ಪಾಟೀಲ್ ತನ್ನ ಕುತಂತ್ರ ಮುಂದುವರೆಸಿದ್ದಾನೆ. ಪ್ರತಿಭಟನೆ ನಾಳೆ ಅನ್ನುವಾಗ ಯಾವತ್ತೂ ಮಾಡದ ಅಂಗವಿಕಲರ ಸಂಘದ ಸಭೆ ನಡೆಸಿ ಸೌಲಭ್ಯಗಳ ಸುರಿಮಳೆ ಸುರಿಸಿದ್ದಾನೆ. ಎರಡು ಬಾರಿ ಶಾಸಕನಾಗಿರುವ ತನ್ನ ವಿರುದ್ಧ ಇದುವರೆಗೂ ಒಂದೂ ಪ್ರತಿಭಟನೆ ನಡೆದಿಲ್ಲ; ಹಾಗಾಗಿ ಯಾವುದೇ ಕಾರಣಕ್ಕೂ ಪ್ರತಿಭಟನೆಯಲ್ಲಿ ಭಾಗವಹಿಸದಂತೆ ಸೂಚನೆ ನೀಡಿದ್ದಾನೆ. ತನ್ನ ಮಾತನ್ನು ಮೀರಿದರೆ ಆಗುವ ಪರಿಣಾಮಗಳು ಕುರಿತು ಪರೋಕ್ಷವಾಗಿ ತಿಳಿಹೇಳಿದ್ದಾನೆ. ಇದು ಅವರೆಲ್ಲರನ್ನು ಭಯಗೊಳಿಸುವುದರ ಜೊತೆಗೆ ಬಾಬುವನ್ನು ಸಹ ಚಿಂತೆಗೀಡುಮಾಡಿದೆ. ಇವೆಲ್ಲದರ ಪರಿಣಾಮ ಅವತ್ತಿನ ಪ್ರತಿಭಟನೆಗೆ ಬಾಬು ಸೇರಿದಂತೆ ಅಂಗವಿಕಲರ ಸಂಘದ ಯಾರೊಬ್ಬರೂ ಬರಲಿಲ್ಲ. ಆದರೂ ಜಗ್ಗದ ಪ್ರಗತಿಪರ ಸಂಘಟನೆಗಳ ಒಕ್ಕೂಟದವರು ತಮ್ಮ ಪಟ್ಟು ಬಿಡದಂತೆ ಪ್ರತಿಭಟನೆ ಮಾಡಿಯೇ ತೀರಿದ್ದಾರೆ. "ಇದವರೆಗೂ ನಿನ್ನ ಮೋಸಗಳನ್ನು ಸಹಿಸಿದ್ದರಿಂದಲೇ ನೀನು ಇಷ್ಟು ಕೊಬ್ಬಿದ್ದು. ನಿನ್ನ ಕೊಬ್ಬನ್ನು ಇಳಿಸದೇ ಬಿಡುವುದಿಲ್ಲ" ಎಂದು ಸಾರ್ವಜನಿಕವಾಗಿ ಘೋಷಿಸಿದ್ದಾರೆ. ಮಸ್ಕಿಯ ವಿಶೇಷ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಪ್ರತಾಪ್ ಪಾಟೀಲನ ಆಟಾಟೋಪಗಳ ಬಗ್ಗೆ ವಿವರಿಸಿ ಆರೋಪಿಗಳ ಮೇಲೆ ಕ್ರ... ತೆಗೆದುಕೊಳ್ಳದಿರುವುದು ಗಮನಿಸಿ... ಜಿಲ್ಲಾಡಳಿತ ಪ್ರಭಾವಿಗಳ ಒತ್ತಡಕ್ಕೆ... ಮಣಿದಿದೆ; ಈ ಬಗ್ಗೆ ಕೂಲಂಕಷ... ತನಿಖೆ ನಡೆಸಿ ಆರೋಪಿಗಳ ಮೇ... ಕಾನೂನುರೀತ್ಯ ಕ್ರಮ ಕೈಗೊಳ್ಳಬೇ... ಎಂದು ಆಗ್ರಹಿಸಿದ್ದಾರೆ. ಒಂದುವೆ... ಈ ಬಗ್ಗೆ ಉದಾಸೀನ ತಾಳಿದ್ದೇ ಆದಲ್ಲಿ ಹೋ... ತೀವ್ರಗೊಳಿಸುವುದಾಗಿಯೂ ಎಚ್ಚರಿಕೆ ನೀಡಿದ್ದಾ... ಅಷ್ಟಕ್ಕೆ ಸುಮ್ಮನಾಗದೇ ರಾಜ್ಯ ಮಾನವ ಹಕ್ಕುಗ... ಆಯೋಗದ ಅಧ್ಯಕ್ಷರಿಗೂ ಪತ್ರ ಬರೆದು ಕ್ರಮಕ್ಕೆ ಕೋರಿದ್ದಾರೆ. ತನ್ನ ವಿರುದ್ಧದ ಮೊದಲ... ಪ್ರತಿಭಟನೆಯಿಂದ ಪ್ರತಾಪ್‌ಗೌಡ ಪಾಟೀಲ್ ಕಂಗಾಲಾಗಿರುವುದು ಮಾತ್ರ ಗ್ಯಾರಂಟಿಯಾಗಿದ...


ಪ್ರಗತಿಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

ರಾಜಕೀಯ ಮೋಸದಾಟ...

ಕಳೆದ ಬಾರಿ ಬಿಜೆಪಿಯಿಂದ ಶಾಸಕನಾಗಿದ್ದ... ಪಾಟೀಲ ಈ ಬಾರಿ ಕಾಂಗ್ರೆಸ್‌ನಿಂದ ಎಂಎಲ್... ಆಗಿದ್ದಾನೆ. ಈತನ ರಕ್ತ ಸಂಬಂಧಿ ಮಹದೇಪ್ಪ... ಈತನ ವಿರುದ್ಧ ಕೆಜೆಪಿಯಿಂದ ಸ್ಪರ್ಧಿಸಿದ್ದ. ಬಿ... ಆರ್ ಪಕ್ಷದಿಂದ ಶೇಖರಪ್ಪ ತಳವಾರ್ ನಿಂತಿದ್ದ... ಇಲ್ಲಿ ಹೆಸರಿಗೆ ಮಾತ್ರ ಚುನಾವಣೆ ನಡೆಯಿತು. ಯಾಕೆಂದರೆ ಮೊದಲೇ ಒಳಒಪ್ಪಂದವಾಗಿತ್ತು. ಕ್ಷೇತ್ರದ ನೀರಾವರಿ ಯೋಜನೆಗಳು ಸೇರಿದಂತೆ ಹಲವಾರು ಕಾಂಟ್ರಾಕ್ಟ್‌ಗಳು ಇವರೆಲ್ಲರೂ ಸೇರಿ... ಹಂಚಿಕೊಂಡು ಯೋಜನೆಗಳ ದುಡ್ಡನ್ನು ನುಂ... ನೀರು ಕುಡಿಯುತ್ತಿದ್ದಾರೆ. ಹಾಗಾಗಿಯೇ ಇಲ್ಲಿ ... ಪಕ್ಷದಿಂದಲೂ ದಕ್ಷ ಅಭ್ಯರ್ಥಿಗಳನ್ನು ಕಣಕ್ಕಿಳಿಸ... ನೋಡಿಕೊಳ್ಳುವುದರಲ್ಲಿ ಈತ ನಿಸ್ಸೀಮನಾಗಿದ್ದಾ... ಯಾವುದೇ ಒಂದು ಪಕ್ಷಕ್ಕೆ ನಿಷ್ಠನಲ್ಲದ ಈತನ ವಿರುದ್ಧ ಇಷ್ಟೆಲ್ಲಾ ಆರೋಪಗಳು ಕೇಳಿಬರುತ್ತಿರು... ಈ ಸಂದರ್ಭದಲ್ಲೇ ಮುಂದಿನ ಬಾರಿ ಮತ್ತೆ ... ಹಾರಲು ತಂತ್ರ ಹೆಣೆಯುತ್ತಿದ್ದಾನೆ. ತನ್ನಿಬ್ಬರು ಮಕ್ಕಳನ್ನು ಕಾಂಟ್ರಾಕ್ಟ್‌ದಾರರನ್ನಾಗಿ ಮಾಡಿರು... ಎಲ್ಲಾ ಅಧಿಕಾರ ತನ್ನಲ್ಲೆ ಉಳಿಸಿಕೊಳ್ಳಲು ಯಾ... ಅಡ್ಡದಾರಿಗಿಳಿಯಲು ಹಿಂಜರಿಯುವುದಿಲ್ಲ.


ಒಟ್ಟಾರೆ ಈ ಶಾಸಕನಿಂದಾಗಿ ಜನತೆಗಾಗು... ಅನಾಹುತಗಳು ಒಂದೆರಡರಲ್ಲ. ಅಧಿಕಾರದ ... ನೆತ್ತಿಗೇರಿಸಿಕೊಂಡಿರುವ ಈತನಿಂದ ಜನತೆಗೆ ಇನ್ನೆಷ್ಟು ಸಂಕಟಗಳು ಕಾದಿವೆಯೋ ಗೊತ್ತಿಲ್ಲ. ಆದರೆ ಮುಂದಿನ ಚುನಾವಣೆಯಲ್ಲಿ ಇದರ ಸ... ಪರಿಣಾಮವನ್ನು ಈತ ಎದುರಿಸುವುದಂತೂ ಗ್ಯಾರಂಟಿ.

ಮುತ್ತು...

ಕಾಸಿಗಾಗಿ ಸುದ್ದಿ ಮಾಡದ ಪತ್ರಕರ್ತರು


ಮಸ್ಕಿಯ ಜನವಿರೋಧಿ ಶಾಸಕ ಪ್ರತಾಪ್‌ಗೌಡ ಪಾಟೀಲ ಇಷ್ಟೆಲ್ಲಾ ದರ್ಪ ಮೆರೆಯುತ್ತಿದ್ದರೂ ಇದು ಹೊರಜಗತ್ತಿಗೆ ಗೊತ್ತಾಗದ ಹಾಗೇ ನೋಡಿಕೊಳ್ಳುತ್ತಿದ್ದಾನೆ. ಹೇಗೆಂದರೆ, ಇಲ್ಲಿಯ ಸ್ಥಳೀಯ ಬಹುತೇಕ ಪತ್ರಕರ್ತರು ಈತನ ಚೇಲಾಗಳಾಗಿದ್ದು ಸುದ್ದಿ ಮಾಡದೇ ಇರುವುದಕ್ಕಾಗಿ ಕಾಸು ಪಡೆಯುತ್ತಿದ್ದಾರೆ. ಈತನ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಎಂಜಲು ಕಾಸು ಪಡೆಯುತ್ತಿರುವ ಕೆಲ ಪತ್ರಕರ್ತರಂತೂ ಆತನ ಹೊಗಳುಭಟ್ಟರಾಗಿ ಬಿಟ್ಟಿದ್ದಾರೆ.

ಮೊನ್ನೆ ನಡೆದ ಅಂಗವಿಕಲನ ಮೇಲಿನ ಹಲ್ಲೆ ಕುರಿತಂತೆ ಸ್ಥಳೀಯ ದಸಸಂ ಸೇರಿದಂತೆ ಪ್ರಗತಿಪರ ಸಂಘಟನೆಗಳು ಪತ್ರಿಕಾಗೋಷ್ಠಿ ನಡ... ಪ್ರತಿಭಟನೆ ನಡೆಸಿದರೂ ಹೆಚ್ಚಿನ ಪತ್ರಿಕೆಗಳು ಒ... ಸಣ್ಣ ಸುದ್ದಿಯನ್ನೂ ಪ್ರಕಟಿಸಲಿಲ್ಲ. ಬದಲಿಗೆ ಶಾ... ಅಂಗವಿಕಲರ ಸಭೆ ನಡೆಸಿದ್ದನ್ನೇ ದೊಡ್ಡದಾಗಿ ಪ್ರಕಟಿಸಿದವು. ಸ್ಥಳೀಯ ಪತ್ರಕರ್ತರ ಈ ಲಜ್ಜೆ... ನಡವಳಿಕೆಯನ್ನು ಪ್ರಶ್ನಿಸಿ ಸ್ಥಳೀಯ ಪ್ರಜ್ಞಾವಂ... ಪತ್ರಿಕೆಗಳ ಮುಖ್ಯಸ್ಥರಿಗೆ ಪತ್ರ ಬರೆದು ತಮ್ಮ ... ಮೆರೆದಿದ್ದಾರೆ.



ತುಮಕೂರು: ಬಿಜೆಪಿಯ ಸೊಗಡು ಶಿವಣ್ಣ ಮತ್ತು ಜಿ.ಎಸ್.ಬಸವರಾಜು ನಡುವೆ

'ಹಿಂದ' ಕೊಳ್ಳಿ



ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥಸಾಧನೆಗಾಗಿ ಮಹಾನ್ ವ್ಯಕ್ತಿಗಳೆ ...ರನ್ನು ಬಳಸಿಕೊಂಡು ಅವರ ಹೆಸರಿಗೆ ...ಕ ತರುವ ಕೆಲಸಗಳನ್ನು ಹಿಂದಿನಿಂದಲೂ ...ಡುತ್ತಿದ್ದಾವೆ. ಅದಕ್ಕೆ ಲೇಟೆಸ್ಟ್ ಉದಾಹರಣೆ ...ಪಿಯ ಕೆ.ಎಸ್.ಈಶ್ವರಪ್ಪ. ಈತ ಕೋಮುವಾದಿ ...ಪಿಯಲ್ಲಿ ಅಂಡೆಲೆದು ಮನಬಂದಂತೆ ...ಚುತ್ತಾ ತಿರುಗಾಡುತ್ತಿದ್ದುದದ್ದು ರಾಜ್ಯದ ...ರು ನೋಡಿದ್ದಾರೆ. ಆದರೀಗ ತನ್ನ ಪಕ್ಷದಲ್ಲಿ ...ತ್ರವಲ್ಲ, ರಾಜ್ಯ ರಾಜಕೀಯದಲ್ಲೂ ತನ್ನ ...ತ್ವವನ್ನು ಉಳಿಸಿಕೊಳ್ಳಲು ಈಶ್ವರಿ ಜಾತಿಪ್ರೇಮದ ...ಕವಾಡುತ್ತಾ ಸಿದ್ದರಾಮಯ್ಯನವರ 'ಅಹಿಂದ' ...ದರಿಯ ಒಂದು ಸಂಘಟನೆಯನ್ನು ಕಟ್ಟಲು ...ಂದಾಗಿದ್ದಾನೆ.

'ಅಹಿಂದ'ದಿಂದ 'ಅ' ತೆಗೆದು – ಅಂದರೆ ...ಸಂಖ್ಯಾತರನ್ನು ಕೈಬಿಟ್ಟು – ಕೇವಲ ...ದ' ಇಟ್ಟುಕೊಂಡು ರಾಜ್ಯ ಬಿಜೆಪಿ ಅಧ್ಯಕ್ಷ ...ಡಿಯೂರಪ್ಪನ ಓಟಕ್ಕೆ ಬ್ರೇಕ್ ಹಾಕಲು ...ರ್ಧಾನಿಸಿರುವ ಈಶ್ವರಿ ಹಲವಾರು ಹಿಂದುಳಿದ ...ತ್ತು ದಲಿತ ಸಮುದಾಯಗಳ ಯುವಕರನ್ನು ...ತೆಹಾಕಿಕೊಂಡು ತನ್ನ ರಾಜಕೀಯ ...ಬೇಯಿಸಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾನೆ. ...ಲ್ನೋಟಕ್ಕೆ ಯಡಿಯೂರಪ್ಪನಿಗೆ ...ಕಾರಿಯಾಗಲೆಂದೇ ಈ ಹಿಂದ ಸಂಘಟನೆ ...ತ್ತಿದ್ದೇನೆ ಎಂದು ಈಶ್ವರಿ ಹೇಳಿದರೂ ಸಹ ...ಗಡೆ ಈತ ಮುಖ್ಯಮಂತ್ರಿಯಾಗುವ ಕನಸು ...ತ್ತಿರುವುದು ರಾಜ್ಯದ ಜನರಿಗೆ ಗೊತ್ತಿಲ್ಲದ ...ಗತಿಯೇನಲ್ಲ.


ಈಶ್ವರಿಯ ಕುತಂತ್ರವನ್ನು ಅರಿತ ...ಡಿಯೂರಪ್ಪ ಯಾವುದೇ ಸಂಘಟನೆ ...ಡಿದರೂ ಪಕ್ಷದ ಚೌಕಟ್ಟಿನಲ್ಲಿಯೇ ...ಡಬೇಕೆಂದು ತಾಕೀತು ಮಾಡಿದ್ದೂ ಆಗಿದೆ. ...ರೆ ಇದಕ್ಕೆಲ್ಲಾ ಸೊಪ್ಪು ಹಾಕದ ಈಶ್ವರಿ ಎಲ್ಲಾ ...'ಸಂಗೊಳ್ಳಿ ರಾಯಣ್ಣ ಬ್ರಿಗೇಡ್' ಹೆಸರಿನಲ್ಲಿ ...ದ' ಸಂಘಟನೆಯನ್ನು ಕಟ್ಟಲು ಯತ್ನಿಸುತ್ತಿದ್ದು ...ಚೆಗೆ ಇದು ತುಮಕೂರಿಗೂ ಕಾಲಿಟ್ಟಿತು. ಆದರೆ ...ಗಳ ದುರಂತ ಎಂತಹದ್ದೆಂದರೆ ಈ 'ಹಿಂದ' ...ಘಟನೆಯಿಂದಾಗಿ ಸ್ಥಳೀಯ ಬಿಜೆಪಿ ಎರಡು ...ಳಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.


ಸೊಗಡು ವರ್ಸಸ್ ಬಸು

ಸೊಗಡು ಶಿವಣ್ಣ ಮತ್ತು ಜಿ.ಎಸ್.ಬಸವರಾಜು ...ವಿನ ಸಂಬಂಧ ಮೊದಲಿನಿಂದಲೂ ಅಷ್ಟಕಷ್ಟೆ ... ಒಬ್ಬರಿಗೊಬ್ಬರು ಪೈಪೋಟಿ ನಡೆಸುತ್ತಾ ... ಇವರಿಬ್ಬರು 2013ರಲ್ಲಿ ತಮ್ಮ ಬೆಂಬಲಿಗರು ...ಡೆದಾಡಿಕೊಳ್ಳುವ ಮಟ್ಟಕ್ಕೆ ಹೋಗುವಂತೆ ...ಡಿದ್ದರು. ಈ ಹಿಂದೆ ಬಸವರಾಜು ಯಡ್ಡಿ ...ನಿಂತು "ಯಡಿಯೂರಪ್ಪ ಜೈಲಿಗೆ ಹೋಗಲು ...ಣ್ಣನಿಯೇ ಕಾರಣ" ಎಂದಿದ್ದ. ಆಗ ಸೊಗಡು ...ಣ್ಣ "ಅಧ್ವಾನಿಯ ಪಾದದ ಧೂಳಿಗೂ ...ವರಾಜು ಸಮವಲ್ಲ. ಅವರ ನಾಯಕ ...ಡಿಯೂರಪ್ಪ ಹಿಟ್ಲರ್‌ಗೆ ಸಮ" ಎಂದು ...ಗೇಟು ನೀಡಿದ್ದ. ಆನಂತರ ಅವರಿಬ್ಬರ ನಡುವಿನ ...ನ ಮೇಲುನೋಟಕ್ಕೆ ಶಾಂತವಾಗಿಯೇ ಇದ್ದರೂ ...ಸ್ಪರರ ವಿರುದ್ಧ ಅವರಿಬ್ಬರು ಕತ್ತಿಮಸೆಯುತ್ತಿದ್ದದ್ದು ...ಮಕೂರಿನ ಜನರಿಗೆ ಗೊತ್ತಿತ್ತು.

ಈಗ ಅವರಿಬ್ಬರ ನಡುವೆ ಮತ್ತೆ ಕದನ ...ವಾಗಲು ಯಡ್ಡಿ ಮತ್ತು ಈಶ್ವರಿಯೇ ...ರಣರಾಗಿದ್ದಾರೆ. ಸೊಗಡು ಶಿವಣ್ಣ ...ದಲಿನಿಂದಲೂ ಬಿಜೆಪಿಯಲ್ಲಿಯೇ ಇದ್ದು 18 ವರ್ಷಗಳ ಕಾಲ ಶಾಸಕರಾಗಿದ್ದು, ಎರಡು ಬಾರಿ ಸಚಿವರಾಗಿದ್ದ ಹಿರಿಯ ನಾಯಕರೆನಿಸಿದ್ದಾರೆ. ಆದ್ದರಿಂದ ಜಿಲ್ಲೆಯಲ್ಲಿ ತಾನೇ ಬಿಜೆಪಿಯ ಏಕಮೇವ ನಾಯಕನಾಗಿ ಮೆರೆಯಬೇಕೆಂಬ ಆಶೆ ಸೊಗಡು ಶಿವಣ್ಣನದ್ದು. ಆದರೆ ಅದಕ್ಕೆ ಅಡ್ಡಬಂದವನೇ ಜಿ.ಎಸ್.ಬಸವರಾಜು.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ತಪ್ಪಿ ಬೆಪ್ಪನಂತಾಗಿದ್ದ ಬಸವರಾಜುವಿಗೆ ಆಸರೆಯಾಗಿ ಬಂದುದ್ದು ಇದೇ ಯಡಿಯೂರಪ್ಪ. ಯಾವಾಗ ಕಾಂಗ್ರೆಸ್‌ನ ಪರಮೇಶ್ವರ್ ಬಸವರಾಜುಗೆ ಟಿಕೆಟ್ ತಪ್ಪಿಸಿದರೋ ಅದನ್ನೆ ಹೊಂಚು ಹಾಕಿ ಕಾಯುತ್ತಿದ್ದ ಯಡ್ಡಿ ಬಸವರಾಜುವನ್ನು ಸೀದಾ ಕೆಜೆಪಿಗೆ ಎಳೆದುಕೊಂಡಿದ್ದರು. ಆ ನಂತರ ತನ್ನ ಜೊತೆ ಬಸವರಾಜುನನ್ನೂ ಬಿಜೆಪಿಗೆ ಜಮೆಮಾಡಿದ್ದರು. ಇಷ್ಟು ಮಾತ್ರ ಆಗಿದ್ದರೆ ಪರವಾಗಿರಲಿಲ್ಲ. ಆದರೆ ಇದೇ ಸ್ಪೀಡಿನಲ್ಲಿ ತನ್ನ ಕಷ್ಟಕಾಲದಲ್ಲಿ ನೆರವಾಗಿದ್ದ ಎಂತಲೋ, ತನ್ನ ನಿಷ್ಠಾವಂತ ಅಂತಲೋ, ತನ್ನ ಸ್ವಜಾತಿಯವನು ಅಂತಲೋ... ಒಟ್ಟಾರೆ ಬಸವರಾಜುನ ಮಗ ಜ್ಯೋತಿ ಗಣೇಶನಿಗೆ ಯಡಿಯೂರಪ್ಪ ಜಿಲ್ಲಾ ಬಿಜೆಪಿ ಅಧ್ಯಕ್ಷ ಪಟ್ಟ ನೀಡಿದ್ದು ಸೊಗಡು ಶಿವಣ್ಣನನ್ನು ಕೆಂಡಮಂಡಲವಾಗಿಸಿದೆ. ಬಸವರಾಜು ಮಗನಿಗೆ ಇಂತಹ ಭಡ್ತಿಯನ್ನು ಕನಸಿನಲ್ಲಿಯೂ ನಿರೀಕ್ಷಿಸದಿದ್ದ ಸೊಗಡು ಶಿವಣ್ಣನಿಗೆ ತೀವ್ರವಾದ ಮುಖಭಂಗವಾಗಿದೆ.







ಇದೇ ಕೋಪದಲ್ಲಿ ಸೊಗಡು ಶಿವಣ್ಣ ಪತ್ರಿಕಾಗೋಷ್ಠಿ ನಡೆಸಿ ಯಡ್ಡಿಯನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. "ಪಕ್ಷದ ಜಿಲ್ಲಾಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ನೇಮಕ ಹಾಗೂ ರಾಜ್ಯ ಕಾರ್ಯಕಾರಣಿಗೆ ನೇಮಕವಾಗಿರುವವರೆಲ್ಲಾ ವಲಸಿಗ ಮುಖಂಡರಾಗಿದ್ದು ಹಲವಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದಂತಹ ಹಿರಿಯ ಮುಖಂಡರನ್ನು ಮೂಲೆಗುಂಪು ಮಾಡಿರುವುದು ಸರಿಯಲ್ಲ. ಯಡಿಯೂರಪ್ಪ ಕೇವಲ ಬುಗುರಿ ಮಾತ್ರ, ಚಾಟಿ ಬೇರೆಯವರೇ ಆಗಿದ್ದಾರೆ. ಇದು ಸಿ.ಟಿ.ರವಿ, ಈಶ್ವರಪ್ಪ, ಅನಂತ್‌ಕುಮಾರ್, ಸದಾನಂದ ಗೌಡ, ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಶಿಯಂತವರಿಗೂ ಸರಿಕಾಣುತ್ತಿಲ್ಲ" ಎಂದು ಶಿವಣ್ಣ ತಮ್ಮ ಸಿಟ್ಟು ವ್ಯಕ್ತಪಡಿಸಿದ್ದಾರೆ. ಜೊತೆಗೆ ಕೂಡಲೇ ಜಿಲ್ಲಾಧ್ಯಕ್ಷರ ನೇಮಕಾತಿಯನ್ನು ವಾಪಸ್ ಪಡೆದು ಹಿರಿಯರನ್ನು ನೇಮಿಸಬೇಕೆಂದು ಆಗ್ರಹಿಸಿದ್ದಾರೆ.

ಶಿವಣ್ಣನ ಈ ಅಧಿಕಪ್ರಸಂಗದಿಂದ ಬಿಜೆಪಿಗೆ ಆಗುವ ಡ್ಯಾಮೇಜ್ ಅನ್ನು ಕಂಟ್ರೋಲ್ ಮಾಡಲು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಲಿಂಬಾವಳಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಎಲ್ಲರನ್ನು ಸಮಾಧಾನ ಮಾಡಲು ಯತ್ನಿಸಿದರು. ಆದರೆ ಆ ಸಭೆಯಲ್ಲಿ ನಡೆದದ್ದೇ ಬೇರೆ. ತನ್ನ ವೈರಿಯನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದಲ್ಲದೇ ಅವರ ಕಡೆಯವರಿಗೇ ಪಕ್ಷದಲ್ಲಿ ಸ್ಥಾನಮಾನಗಳನ್ನು ಕೊಟ್ಟಿದ್ದಕ್ಕೆ ತೀವ್ರವಾಗಿ ಬೇಸರಗೊಂಡಿದ್ದ ಶಿವಣ್ಣನ ಗ್ಯಾಂಗ್ ಜಿಲ್ಲಾ ಬಿಜೆಪಿ ಕಾರ್ಯಕಾರಣಿ ಸಭೆಗೆ ಗೈರುಹಾಜರಾಗುವ ಮೂಲಕ ಸಭೆಯನ್ನು ಬಹಿಷ್ಕರಿಸಿದರಲ್ಲದೆ ತಮ್ಮ ಕೋಪವನ್ನೂ ನೇರವಾಗಿ ಹೊರಹಾಕಿದರು.

ವಿಫಲವಾದ ಡ್ಯಾಮೇಜ್ ಕಂಟ್ರೋಲ್ ಸಭೆ

ಸಭೆಯಲ್ಲಿ ಲಿಂಬಾವಳಿ "ಜಿಲ್ಲಾ ಬಿಜೆಪಿ ಘಟಕದಲ್ಲಿ ಉಂಟಾಗಿರುವ ಅಸಮಾಧಾನ ತಣಿಸಲು ಯಡಿಯೂರಪ್ಪ ಮಧ್ಯಪ್ರವೇಶಿಸುವಂತೆ ಮನವಿ ಮಾಡಲಾಗುತ್ತದೆ. ಪಕ್ಷ ಸಂಘಟನೆಯ ವಿಚಾರದಲ್ಲಿ ಅಲ್ಪ ಅಸಮಾಧಾನವಿರುವುದು ನಿಜ. ಅದನ್ನು ಮುಂದಿನ ದಿನಗಳಲ್ಲಿ ಸರಿಮಾಡಲಾಗುವುದು" ಎಂದು ಹೇಳಿ ಕೈತೊಳೆದುಕೊಂಡು ಇಲ್ಲಿಂದ ಪರಾರಿಯಾದರು. ಈ ಮಧ್ಯೆ ತುಮಕೂರಿಗೆ ಭೇಟಿ ನೀಡಿದ ಈಶ್ವರಪ್ಪ "ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ನ ಮೂಲಕ ನಾವು ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ. ಹಿಂದುಳಿದವರು ಮತ್ತು ದಲಿತರು ನಮ್ಮ ಹಿಂದೆ ಬರಲಿದ್ದಾರೆ" ಎಂದು ಹೇಳಿಹೋಗಿದ್ದಾರೆ. ಇಂಥ ಅವಕಾಶಕ್ಕೆ ಕಾಯುತ್ತಿದ್ದ ಸೊಗಡು ಶಿವಣ್ಣ ತನ್ನ ಸಂಪೂರ್ಣ ಬೆಂಬಲವನ್ನು ಈಶ್ವರಪ್ಪಗೆ ಘೋಷಿಸಿ ಮುಂದೆ ಹಾವೇರಿಯಲ್ಲಿ ನಡೆಯಲಿರುವ ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ನ ಸಮಾವೇಶಕ್ಕೆ ಜಿಲ್ಲೆಯಿಂದ ತನ್ನ ಬೆಂಬಲಿಗರೊಂದಿಗೆ ಪಾಲ್ಗೊಳ್ಳುವುದಾಗಿ ಹೇಳಿದ್ದಾರೆ.

ಜೊತೆಗೆ ಮತ್ತೊಮ್ಮೆ ಪತ್ರಿಕಾಗೋಷ್ಠಿ ನಡೆಸಿ "ಜಿಲ್ಲೆಯಲ್ಲಿ ವಲಸಿಗ ಬಿಜೆಪಿಗರಾದ ಜಿ.ಎಸ್.ಬಸವರಾಜು ಮತ್ತು ಆತನ ಮಗ ಜ್ಯೋತಿ ಗಣೇಶ್ ಇಬ್ಬರೂ ಸೇರಿಕೊಂಡು ಏಕಪಕ್ಷೀಯ ನಿರ್ಧಾರ ತೆಗೆದುಕೊಂಡು ಪಕ್ಷದ ಕಾರ್ಯಕರ್ತರನ್ನು ಮೂಲೆಗುಂಪು ಮಾಡುತ್ತಿದ್ದಾರೆ. ಮೂಲ ಬಿಜೆಪಿಯ ಹಿರಿಯರನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಹಾಗಾಗಿ ಇಂತಹ ವ್ಯಕ್ತಿಗಳು ಮೊದಲು ಪಕ್ಷ ಬಿಟ್ಟು ಹೋಗಲಿ. ಮುಂದಿನ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕೆಂದರೆ ಅಪ್ಪ–ಮಗ ಪಕ್ಷ ಬಿಡುವುದು ಸೂಕ್ತ" ಎಂದು ಬಹಿರಂಗವಾಗಿ ಸವಾಲೆಸೆದಿದ್ದಾರೆ. "1975ರ ತುರ್ತು ಪರಿಸ್ಥಿತಿಯಲ್ಲಿ ಸಂಸದರಾಗಿದ್ದ ಜಿ.ಎಸ್.ಬಸವರಾಜು ನಮ್ಮನ್ನು ಜೈಲಿಗೆ ಕಳುಹಿಸಿದ್ದ. ಅಂದು ಜೈಲಿನಿಂದ ವರ್ಗಾವಣೆಗೆ ಪತ್ರವೊಂದನ್ನು ಕೋರಿದ್ದಾಗ 'ನೀವು ಗಾಂಧೀಜಿಯವರನ್ನು ಕೊಂದವರು. ನಿಮಗೆ ನಾನು ಪತ್ರ ಕೊಡಬೇಕೆ' ಎಂದು ನಿರಾಕರಿಸಿದ್ದರು. ಒಮ್ಮೆ ಬಿಜೆಪಿಗೆ ಆಹ್ವಾನಿಸಿದ್ದಾಗ 'ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕಸ ಬೇಕಾದರೆ ಗುಡಿಸುತ್ತೇನೆ ಆದರೆ ಬಿಜೆಪಿ ಸೇರುವುದಿಲ್ಲ' ಎಂದು ಹೇಳಿದ್ದ. ಅಂತಹ ವ್ಯಕ್ತಿಗೆ ನಾವು ಯಡ್ಡಿಯೂರಪ್ಪನವರ ಬೆಂಬಲದೊಂದಿಗೆ ಸ್ಥಾನ ನೀಡಿ ಸಂಸದನಾಗಿ ಮಾಡಿದ್ದೇವೆ. ಆದರೆ ಈತನ ಅಸಾಮರ್ಥ್ಯವನ್ನು ನೋಡಿದ್ದ ಜನತೆ ಕಳೆದ ಚುನಾವಣೆಯಲ್ಲಿ ಸೋಲಿಸಿದ್ದರು. ಇಂತಹ ಅಸಮರ್ಥ ವ್ಯಕ್ತಿ ನಮ್ಮ ಪಕ್ಷದಲ್ಲೇ ಇದ್ದು ನಮ್ಮ ಕಮಲದ ಚಿಹ್ನೆಯನ್ನೇ ಕಿತ್ತು ಕೊಂಡಿದ್ದಾರೆ" ಎಂದು ಪತ್ರಿಕಾ ಗೋಷ್ಠಿಯಲ್ಲಿ ವಾಚಾಮ ಗೋಚರ ಬೈದಿದ್ದರು. ಅಷ್ಟೇ ಅಲ್ಲದೇ "ಬಿಜೆಪಿ ಪಕ್ಷದ ತತ್ವ, ಸಿದ್ಧಾಂತದ ಬಗ್ಗೆ ಬಾಯ್ತುಂಬ ಮಾತನಾಡುವ ಬಸವರಾಜುಗೆ ಪಕ್ಷವನ್ನು ಜಿಲ್ಲೆಯಲ್ಲಿ ಹೇಗೆ ಸಂಘಟಿಸಬೇಕು, ಕಾರ್ಯಕರ್ತರನ್ನು ಹೇಗೆ ಒಗ್ಗೂಡಿ ಸಬೇಕೆಂದು ಎಳ್ಳಷ್ಟು ಗೊತ್ತಿಲ್ಲದಿದ್ದರೂ ನಮಗೆ ಬುದ್ಧಿ ಹೇಳಲು ಹೊರಟಿದ್ದಾರೆ, ಇಂತವರಿಂದ ನಾವು ಬುದ್ಧಿ ಕಲಿಯಬೇಕಾಗಿಲ್ಲ. ಇಂತಹ ವ್ಯಕ್ತಿಗಳಿಂದ ಪಕ್ಷಕ್ಕೆ ನಷ್ಟವೇ ಹೊರತು ಲಾಭವಿಲ್ಲ" ಎಂದು ಲೇವಡಿ ಮಾಡಿದ್ದಾರೆ.

"ಇಷ್ಟೆಲ್ಲಾ ನಡೆಯುತ್ತಿದ್ದರೂ ರಾಜ್ಯದ ಬಿಜೆಪಿ ವರಿಷ್ಠರು ಕೈಕಟ್ಟಿ ಕುಳಿತಿರುವುದು ಸರಿಯಲ್ಲ. ಇವನಿಂದ ಪಕ್ಷದ ಅಧಿಕಾರವನ್ನು ಕಿತ್ತುಕೊಂಡು ಸಾಮಾನ್ಯ ಕಾರ್ಯಕರ್ತರಾಗಿ ದುಡಿಯಲು ಬಿಡಬೇಕು. ಆಗ ಬುದ್ಧಿ ಬರುತ್ತದೆ" ಎಂದು ಕಿಡಿ ಕಾರಿದ್ದಾರೆ ಶಿವಣ್ಣ. ರಾಜ್ಯ ಬಿಜೆಪಿ ಉಸ್ತುವಾರಿ ವಹಿಸಿಕೊಂಡಿರುವ ಪ್ರಧಾನ ಕಾರ್ಯದರ್ಶಿ ರಾಮ್‌ಲಾಲ್‌ರವರು ಬೆಂಗಳೂರಿಗೆ ಬಂದಾಗ ಕಾರ್ಯಕರ್ತರ ಪರವಾಗಿ ರಾಷ್ಟ್ರದ ವರಿಷ್ಠರಿಗೆ ಜಿಲ್ಲಾ ಬಿಜೆಪಿಯಲ್ಲಾಗುತ್ತಿರುವ ಅನ್ಯಾಯಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು ಎಂದಿದ್ದಾನೆ

ಇದೆಲ್ಲದರ ಮಧ್ಯೆ ಬಸವರಾಜು ಇದ್ಯಾವುದಕ್ಕೂ ನೇರವಾಗಿ ಉತ್ತರ ಕೊಡುತ್ತಿಲ್ಲ. ಬದಲಿಗೆ ತಮ್ಮ ಲಿಂಗಾಯತ ಜಾತಿಯ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಹವಣಿಸುತ್ತಿದ್ದಾನೆ. ಯಡ್ಡಿಯ ಬಲವಿರುವುದು ಇವನ ಆಸೆಗೆ ನೀರೆರದಂತಾಗಿದೆ. "ಇದುವರೆಗೂ ಈಶ್ವರಪ್ಪನನ್ನು ನಂಬಿ ಉದ್ಧಾರವಾದರೂ ಯಾರೂ ಇಲ್ಲ. ಈ ಸೊಗಡು ಶಿವಣ್ಣ ಹೇಗೆ ಉದ್ಧಾರವಾಗುತ್ತಾನೆ ನಾನು ನೋಡೇಬಿಡುತ್ತೇನೆ" ಎಂದು ತನ್ನ ಬೆಂಬಲಿಗರ ಮುಂದು ಬಸು ಕುಹಕವಾಡುತ್ತಿದ್ದಾನೆ. ಹಾಗೆ ನೋಡಿದರೆ ಈಶ್ವರಿಯ ಹಿಡಿತವಿಲ್ಲದ ನಾಲಿಗೆಯೇ ತನಗೆ ಒಳ್ಳೆಯದು ಮಾಡುತ್ತದೆ ಎಂದು ನಂಬಿರುವ ಬಸವರಾಜು ತನ್ನ ಕೈಲಾದಷ್ಟು ಕಾರ್ಯಕರ್ತರು ರಾಯಣ್ಣನ ಬ್ರಿಗೇಡ್‌ನ ಹಿಂದೆ ಹೋಗದಂತೆ ತಡೆಯಲು ಯತ್ನಿಸುತ್ತಿದ್ದಾನೆ.


ಒಟ್ಟಿನಲ್ಲಿ ಇದುವರೆಗೂ ಮನೆಯೊಳಗೆ ನಡೆಯುತ್ತಿದ್ದ ಬಿಜೆಪಿಯ ಒಳಜಗಳ ಈಗ ಹೊರಕ್ಕೆ ಬಂದಿದೆ. ಮುಂದಿನ ಎಲೆಕ್ಷನ್‌ನಲ್ಲಿ ಗೆಲ್ಲಲು ಯಾರು ಯಾರನ್ನು ಒಲೈಸಬೇಕು, ಯಾರನ್ನು ಎತ್ತಿಕಟ್ಟಬೇಕು ಎಂಬುದರ ಬಗ್ಗೆಯೇ ಎಲ್ಲರ ತಲೆಗಳು ಓಡುತ್ತಿವೆ. ಇದು ಸ್ಥಳೀಯ ಕಾಂಗ್ರೆಸಿಗರು ಒಳಗೊಳಗೆ ಖುಷಿ ಪಡಲು ಕಾರಣವಾಗಿದೆ. ಒಟ್ಟಾರೆ ರಾಜ್ಯದಲ್ಲೂ, ಜಿಲ್ಲೆಯಲ್ಲೂ ಒಡೆದ ಮನೆಯಾಗಿರುವ ಬಿಜೆಪಿ ಕೊನೆಗೆ ಎಲ್ಲಿಗೆ ಮುಟ್ಟುತ್ತದೆ ಕಾದುನೋಡಬೇಕಿದೆ.


ಅನಿಲ್‌ಕುಮಾರ್ ಚಿಕ್ಕದಾಳವಟ್ಟಿ


ಮಂಡ್ಯ: ಕಾವೇರಿ ಹೋರಾಟಕ್ಕೆ

ಕೈಕೊಟ್ಟ ಶಾಸಕರು









ಕಾವೇರಿ ಕಣಿವೆಯಲ್ಲಿ ಕಾವೇರಿ ಕಿಚ್ಚು ಧಗಧಗಿಸತೊಡಗಿದೆ. ಅದರಲ್ಲೂ ಕಾವೇರಿ ನೀರಿನ ಅತಿಮುಖ್ಯ ಪಾಲುದಾರ ಜಿಲ್ಲೆ ಮಂಡ್ಯದಲ್ಲಿ ಕಾವೇರಿ ಹೋರಾಟ ಉಗ್ರ ಸ್ವರೂಪ ತಾಳಿದೆ. ಜಿಲ್ಲಾ ಕೇಂದ್ರ ಮಂಡ್ಯದಲ್ಲಿ ಕಾವೇರಿ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ದಿನನಿತ್ಯ ರಸ್ತೆತಡೆ, ಉಪವಾಸ ಸತ್ಯಾಗ್ರಹ, ಧರಣಿ ಎಂದೆಲ್ಲಾ ನಡೆಯುತ್ತಿದೆ. ಕಾವೇರಿ ವಿಚಾರದಲ್ಲಿ ಪಕ್ಷ ನಿಷ್ಠೆ, ಸ್ವಾಮಿ ನಿಷ್ಠೆಯನ್ನೆಲ್ಲಾ ಬದಿಗೊತ್ತಿ ಪಕ್ಷಾತೀತವಾಗಿ ಜನರೊಂದಿಗೆ ನಿಲ್ಲಬೇಕಿದ್ದ ಸ್ಥಳೀಯ ಶಾಸಕರು ಜಿಲ್ಲೆಯಿಂದಲೇ ನಾಪತ್ತೆಯಾಗಿದ್ದಾರೆ. ಮಂಡ್ಯ ಶಾಸಕ ಅಂಬರೀಶ್, ನಾಗಮಂಗಲ ಶಾಸಕ ಚಲುವರಾಯಸ್ವಾಮಿ, ಮಳವಳ್ಳಿ ಶಾಸಕ ನರೇಂದ್ರಸ್ವಾಮಿ ಮತ್ತು ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಒಂದು ದಿನವೂ ಕಾವೇರಿ ಹೋರಾಟದಲ್ಲಿ ಪಾಲ್ಗೊಳ್ಳದೆ ಜನತೆಗೆ ದ್ರೋಹ ಬಗೆದಿದ್ದಾರೆ. ಈ ಹಿನ್ನೆಲೆಯಲ್ಲಿ ಮತದಾರರು "ನಮ್ಮ ಕ್ಷೇತ್ರಗಳನ್ನು ಪ್ರತಿನಿಧಿಸುವ ಶಾಸಕರನ್ನು ಹುಡುಕಿಕೊಡಿ" ಎಂದು ಮಾಧ್ಯಮಗಳ ಮುಂದೆ ಕಿಡಿಕಾರುತ್ತಿದ್ದಾರೆ.

ಜಿಲ್ಲೆಯ ನಾಲಾಯಕ್ ಶಾಸಕರಲ್ಲಿ ಮೊದಲನೆಯವನಾದ ಅಂಬರೀಶ್ ವಿಚಾರಕ್ಕೆ ಬರೋಣ. ಕಾವೇರಿ ನೀರು ಹರಿಸುವ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶ ನೀಡುವ 2 ದಿನಗಳ ಮೊದಲು ಅಮೆರಿಕದಲ್ಲಿ ನಡೆಯುವ ಅಕ್ಕ ಸಮ್ಮೇಳನದಲ್ಲಿ ಭಾಗವಹಿಸಲು ಪತ್ನಿ ಸುಮಲತಾ ಜೊತೆ ಅಂಬಿ ತೆರಳಿದರು. ಸುಪ್ರೀಂಕೋರ್ಟ್ ಆದೇಶದಿಂದ ರಾಜ್ಯಕ್ಕೆ ಅನ್ಯಾಯವಾದರೆ ಮಂಡ್ಯ ಜಿಲ್ಲೆಯಲ್ಲಿ ಪರಿಸ್ಥಿತಿ ಕೈ ಮೀರುತ್ತದೆ ಎಂಬ ಸತ್ಯ ಗೊತ್ತಿದ್ದರೂ ಅಂಬಿ ಅಕ್ಕ ಸಮ್ಮೇಳನಕ್ಕೆ ಕನ್ನಡ ಚಿತ್ರನಟ ಪುನೀತ್ ರಾಜ್‌ಕುಮಾರ್, ಪ್ರೇಮ್, ರಮೇಶ್, ಯಶ್-ಆತನ ಭಾವಿ ಪತ್ನಿ ರಾಧಿಕಾ, ರಾಗಿಣಿ ಮೊದಲಾದ ನಟ-ನಟಿಯರನ್ನೆಲ್ಲಾ ತುಂಬಿಕೊಂಡು ಅಮೆರಿಕ ಫ್ಲೈಟ್ ಹತ್ತಿಯೇ ಬಿಟ್ಟರು. ತನ್ನನ್ನು ಆರಿಸಿ ಶಾಸಕನಾಗಿ, ಸಚಿವನಾಗಿ ಮಾಡಿದ ಮಂಡ್ಯ ಕ್ಷೇತ್ರದ ಜನತೆಗೆ ನಿಷ್ಠನಾಗಿ ಕಾವೇರಿ ನೀರಿನ ವಿಷಯದಲ್ಲಿ ಸುಪ್ರೀಂ ಆದೇಶ ಏನು ಬರಲಿದೆ ಎಂಬುದನ್ನು ಅಂಬಿ ಕಾಯಬೇಕಿತ್ತು. ಆದರೆ ಅಮೆರಿಕದಲ್ಲಿ ಮೋಜು-ಮಸ್ತಿ ಮಾಡಲು ಹೊರಟಿದ್ದ ಅಂಬಿಗೆ ತನ್ನ ಕ್ಷೇತ್ರದ ರೈತರು, ಜನಸಾಮಾನ್ಯರು ಕಣ್ಣಿಗೆ ಕಾಣಲೇ ಇಲ್ಲ.

ಇಂತಹ ಉಡಾಫೆಯ ಅಂಬಿ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ಕಿಚ್ಚು ಹೊತ್ತಿ ಉರಿಯುತ್ತಿರುವ ಸಂದರ್ಭದಲ್ಲಿ ಕಾಟಾಚಾರಕ್ಕೆಂಬಂತೆ ಅಮೆರಿಕದಿಂದಲೇ ಮನವಿಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ "ಮಂಡ್ಯ ಜಿಲ್ಲೆಯ ಜನರು ಸಂಯಮ ಕಳೆದುಕೊಳ್ಳದೇ ಶಾಂತಿಯುತವಾಗಿ ಪ್ರತಿಭಟನೆ ಮಾಡಿ, ನನ್ನ ಜನರ ಕಷ್ಟದಲ್ಲಿ ನಾನು ಯಾವಾಗಲೂ ಭಾಗಿಯಾಗುತ್ತೇನೆ" ಎಂದು ಬಿಟ್ಟಿ ಉಪದೇಶ ಮಾಡಿದ್ದಾರೆ.

ಅಕ್ಕ ಸಮ್ಮೇಳನದಲ್ಲಿ ಇಸ್ಪೀಟ್ ರಾಜ ಅಂಬಿ ಜೊತೆ ಅಮೆರಿಕದ ಇಸ್ಪೀಟ್ ಪ್ರಿಯರು ಆಡಲೆಂದೇ 'ಅಂಬಿ ಜಾಕ್‌ಪಾಟ್' ನಡೆಸಲಾಗಿತ್ತು. ಇದರಲ್ಲಿ ಭಾಗವಹಿಸಲು 100 ಡಾಲರ್ ಪ್ರವೇಶ ಶುಲ್ಕ ನಿಗದಿ ಮಾಡಲಾಗಿತ್ತು. ಅಮೆರಿಕಕ್ಕೆ ಹೋಗಿ ಇಸ್ಪೀಟು ಆಡಲು ಸಮಯವಿರುವ ಅಂಬಿ ಅಕ್ಕ ಸಮ್ಮೇಳನ ಮುಗಿದು ವಾರವಾಗುತ್ತಾ ಬಂದರೂ ಮಂಡ್ಯಕ್ಕೆ ಕಾಲಿಟ್ಟಿಲ್ಲ. ಅಮೆರಿಕದಲ್ಲೇ ಕೂತು ಬಿಟ್ಟಿ ಉಪದೇಶ ನೀಡುವ ಅಂಬಿಗೆ ಧಿಕ್ಕಾರವನ್ನು ಮಂಡ್ಯದ ಜನ ದಿನನಿತ್ಯ ಕೂಗುತ್ತಿದ್ದಾರೆ. ನೀನೇ ಹೇಳಿದಂತೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನಮ್ಮನ್ನು ಮುಕ್ತಿಗೊಳಿಸಿ ಎಂದು ಮಂಡ್ಯದ ಜನರೇ ಅಂಬಿಗೆ ಮನವಿ ಮಾಡುತ್ತಿದ್ದಾರೆ.

ಇನ್ನು ಮಳವಳ್ಳಿಯ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಬೆಂಗಳೂರಿನಲ್ಲಿದ್ದರೂ ಒಂದು ದಿನವೂ ಕಾವೇರಿ ಚಳವಳಿಗೆ ಬಂದು ಜನರ ಜೊತೆ ನಾನಿದ್ದೇನೆ ಎಂಬ ಮಾತುಗಳನ್ನು ಆಡಿಲ್ಲ. ಅವರ ಕ್ಷೇತ್ರದ ಜನ ಬೀದಿಗಿಳಿದು ಪ್ರತಿಭಟಿಸುತ್ತಿದ್ದರೆ ನರೇಂದ್ರಸ್ವಾಮಿ ಅತ್ತ ತಲೆ ಹಾಕಿಲ್ಲ. ಕಾವೇರಿ ಹೋರಾಟದಲ್ಲಿ ಪಾಲ್ಗೊಂಡರೆ ತಮ್ಮದೇ ಸರ್ಕಾರದ ವಿರುದ್ಧ ನಿಂತಂತೆ ಎಂದು ನರೇಂದ್ರಸ್ವಾಮಿ ಭಾವಿಸಿರುವುದರಿಂದ ಅವರು ಬಂದಿಲ್ಲ ಎಂದು ಅವರ ಕ್ಷೇತ್ರದ ಜನರೇ ಮಾತನಾಡುತ್ತಿದ್ದಾರೆ.

ಕಾವೇರಿ ವಿಚಾರದಲ್ಲಿ ಮಾತನಾಡಿದರೆ ಸಿಎಂ ಸಿದ್ದರಾಮಯ್ಯ ಮುನಿಸಿಗೆ ಕಾರಣವಾಗಬಹುದು ಎಂಬುದು ನರೇಂದ್ರಸ್ವಾಮಿಯ ತಲೆಯಲ್ಲಿದ್ದರೆ ಅದನ್ನು ತೆಗೆದುಹಾಕುವುದು ಒಳಿತು. ಏಕೆಂದರೆ ಸಿದ್ದರಾಮಯ್ಯ ಸರ್ಕಾರದಲ್ಲಿ ನರೇಂದ್ರಸ್ವಾಮಿಗೆ ಸಚಿವ ಸ್ಥಾನ ದಕ್ಕಲೇ ಇಲ್ಲ. ಇನ್ನು ನರೇಂದ್ರಸ್ವಾಮಿ ಸಚಿವರಾಗುವುದು ಕನಸಿನ ಮಾತು. ಜನರ ಮಧ್ಯೆ ಇದ್ದರಷ್ಟೇ ನರೇಂದ್ರಸ್ವಾಮಿ ಮುಂದಿನ ಚುನಾವಣೆಯಲ್ಲಿ ಗೆದ್ದು ಶಾಸಕರಾಗಬಹುದು. ಜನರನ್ನು ಬಿಟ್ಟು ಸಿದ್ದರಾಮಯ್ಯ ಹಿಂದೆ ಹೋದರೆ ಶಾಶ್ವತವಾಗಿ ಜನ ಮನೆಗೆ ಸೇರಿಸುತ್ತಾರೆಂಬ ಎಚ್ಚರವಿದ್ದರೆ ಒಳ್ಳೆಯದು.

ಕಾಂಗ್ರೆಸ್ ಶಾಸಕರು ಕಾವೇರಿ ಹೋರಾಟದಲ್ಲಿ ಪಾಲ್ಗೊಂಡರೆ ಸರ್ಕಾರದ ವಿರುದ್ಧ ಮಾತನಾಡಬೇಕು ಎಂದು ಹೆದರಿ ಪಲಾಯನ ಮಾಡಿದರೆ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಮಾತ್ರ ನೀರು ಬಿಟ್ಟಿದ್ದು ತಪ್ಪು, ನನಗೆ ಪಕ್ಷಕ್ಕಿಂತ, ವ್ಯಕ್ತಿಗಿಂತ ನಮ್ಮ ಮಂಡ್ಯದ ಜನರೇ ಮುಖ್ಯ ಎಂದು ಮಾಧ್ಯಮಗಳ ಮುಂದೆ ಮಾತನಾಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ಹೋಗಿದ್ದಾರೆ. ಇನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷ, ಮಾಜಿ ಸಚಿವ ಎಂ.ಎಸ್.ಆತ್ಮಾನಂದ ದಿನನಿತ್ಯ ಕಾವೇರಿ ಹೋರಾಟದಲ್ಲಿ ಪಾಲ್ಗೊಂಡು ಬೆಂಬಲ ನೀಡುತ್ತಿದ್ದಾರೆ. "ಕಾಂಗ್ರೆಸ್ ಮುಖಂಡರಿಗೆ ಹೋಲಿಸಿದರೆ ಇವರಿಬ್ಬರೇ ವಾಸಿ ಕಣ್ಲ" ಎಂದು ಜನ ಹೇಳುತ್ತಿದ್ದಾರೆ.

ನಾಗಮಂಗಲದ ಶಾಸಕ ಚಲುವರಾಯಸ್ವಾಮಿ ಹೋರಾಟ ಶುರುವಾಗಿ ಹತ್ತಾರು ದಿನ ಕಳೆದರೂ ಮಂಡ್ಯಕ್ಕೆ ಕಾಲಿಡಲೇ ಇಲ್ಲ. ಇಸ್ಪೀಟ್ ಸ್ಟಾರ್ ಅಂಬರೀಶ್ ಜೊತೆ ಅಮೆರಿಕಗೆ ಹೋದ ಚಲುವರಾಯಸ್ವಾಮಿ ಬಂದದ್ದು ಮಂಡ್ಯ ಹೊತ್ತಿ ಉರಿದ ನಂತರವೇ. ಚಲುವರಾಯಸ್ವಾಮಿ ತಮ್ಮ ಎರಡನೇ ಪುತ್ರನನ್ನು ಅಮೆರಿಕದ ಕಾಲೇಜಿಗೆ ಅಡ್ಮಿಷನ್ ಮಾಡಿಸಲು ಹೋಗಿದ್ದಾರೆ. ಆದ್ದರಿಂದ ಕಾವೇರಿ ಹೋರಾಟದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿಲ್ಲ ಎಂದು ಅವರ ಬೆಂಬಲಿಗರು ಬಾಯಿ ಬಡಿದುಕೊಂಡರೂ ಅದನ್ನು ನಂಬಲು ಮಂಡ್ಯದ ಜನ ತಯಾರಿಲ್ಲ. ಏನು ಪುತ್ರನ ಅಡ್ಮಿಷನ್ ಮಾಡಲು 15ದಿನ ಬೇಕೇ ಎಂದು ಚೆನ್ನಾಗಿ ಅವರ ಬೆಂಬಲಿಗರಿಗೆ ಜಾಡಿಸಿದ್ದಾರೆ.

ಇನ್ನು ಚಲುವರಾಯಸ್ವಾಮಿ ಹಿಂಬಾಲಕ ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಸಹ ಕಾವೇರಿ ಹೋರಾಟ ಶುರುವಾಗಿ ಇಷ್ಟು ದಿನವಾದರೂ ತನ್ನ ಕ್ಷೇತ್ರದ ಜನರ ಜೊತೆ ಹೋರಾಟದಲ್ಲಿ ಪಾಲ್ಗೊಂಡಿಲ್ಲ. ಅನಾರೋಗ್ಯದ ನೆಪ ಹೇಳಿ ಮನೆ ಸೇರಿಕೊಂಡಿರುವ ರಮೇಶ್‌ಬಾಬು ಹೋರಾಟದಲ್ಲಿ ಭಾಗಿಯಾಗದಿರಲು ಸಿಎಂ ಸಿದ್ದರಾಮಯ್ಯ ಕಾರಣ ಎಂದು ಜನ ಹೇಳುತ್ತಿದ್ದಾರೆ.

ಇದ್ದುದ್ದರಲ್ಲಿ ಜೆಡಿಎಸ್ ಪಕ್ಷವೇ ವಾಸಿ. ಆ ಪಕ್ಷದ ನಾಯಕರು ತಮ್ಮ ಪಕ್ಷದ ಕಾರ್ಯಕರ್ತರ ಜೊತೆ ದಿನನಿತ್ಯ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಾವೇರಿ ಚಳವಳಿ ಪ್ರಾರಂಭವಾದ ನಂತರ 2 ಬಾರಿ ಭೇಟಿ ನೀಡಿ ಜಿಲ್ಲೆಯ ಜನರ ಜೊತೆ ಸದಾ ... ಎಂದು ಹೇಳಿಹೋದರು. ಅವರ ಪಕ್ಷದ ಸಿ.ಎಸ್.ಪುಟ್ಟರಾಜು, ಶಾಸಕ ಡಿ.ಸಿ.ತಮ್ಮಣ್ಣ, ಶಾಸಕ ಎಂ.ಶ್ರೀನಿವಾಸ್, ಜಿ.ಪಂ.ಸದಸ್ಯ ... ಅಶೋಕ್ ಮೊದಲಾದ ನಾಯಕರೆಲ್ಲಾ ಬೈಕ್ ... ರಸ್ತೆ ತಡೆ ಎಂತೆಲ್ಲ ಪ್ರತಿಭಟನೆಯಲ್ಲಿ ಪಾಲ್ಗೊಂ... ವಿಶ್ವಾಸ ಉಳಿಸಿಕೊಂಡಿದ್ದಾರೆ. ಜೆಡಿಎಸ್ ... ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ 4... ಮುಸ್ಲಿಂ ಬಾಂಧವರನ್ನು ಸೇರಿಸಿ ಕಾವೇರಿ ಹೋ... ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದ್ದಾರೆ. ... ಚಳವಳಿಗೆ ಸೇರಿದ್ದ ಮುಸ್ಲಿಂ ಬಾಂಧವರನ್ನು ಮಂಡ್ಯದ ಜನ ಅಭಿಮಾನದಿಂದ ಜಫ್ರುಲ್ಲಾ ಖಾ... ಹೊಗಳಿದ್ದಾರೆ.

ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ... ಪ್ರಾರಂಭವಾದ ದಿನದಿಂದ ಮಂಡ್ಯ ಜಿಲ್ಲೆ... ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದರೂ ... ನೀರಿನ ಋಣ ತೀರಿಸಬೇಕಾದ ಜಿಲ್ಲೆಯ ಶಾಸಕರು ಹೋರಾಟಕ್ಕೆ ಬಾರದೆ ನಾಪತ್ತೆಯ... ತಮ್ಮ ರಾಜಕೀಯಕ್ಕೆ ಕಾವೇರಿ ಕಣಿವೆಯ ... ಬಳಸಿಕೊಳ್ಳುವ ಈ ಲತ್ತೆ ಶಾಸಕರಿಗೆ ... ಚುನಾವಣೆಯಲ್ಲಿ ಜನತೆ ತಕ್ಕ ಪಾಠ ಕ... ಶತಃಸಿದ್ಧ.

✍ ವ...



ಸ್ವಚ್ಛನಗರಿಯ ಮೈಸೂರು ರಾಜಕಾಲುವೆ ಒತ್ತುವರಿ!

ಬೆಂಗಳೂರಿನ ರಾಜಕಾಲುವೆ ಒತ್ತುವರಿ ತೆರವಿನ ಸಾಹಸಕ್ಕೆ ಬಿಬಿಎಂಪಿ ಕೈಹಾಕಿದ್ದೇ ತಡ ಇತ-ರೆ ಶಹರಗಳ ರಿಯಲ್ ಎಸ್ಟೇಟ್ ಭೂಗಳ್ಳರ ಎದೆ ನಡುಗಲು ಶುರುವಾಗಿದೆ. ಅವರಿಗಿಂತಲೂ ಹೆಚ್ಚು ದಿಗಿಲುಗೊಂಡಿರೋದು, ಕಡಿಮೆ ರೇಟಿಗೆ ಸೈಟು ಸಿಗುತ್ತೆ ಅಂತ ಸರಿಯಾಗಿ ಪರಿಶೀಲನೆ ಮಾಡದೆ ರಿಯಲ್ ಎಸ್ಟೇಟ್ ಖೂಳರಿಂದ ಜಾಗ ಖರೀದಿಸಿದ ಅಮಾಯಕ ಜನ. ರಾಜಕಾಲುವೆಯ ಈ ಭೂತ ಸಾಂಸ್ಕೃತಿಕ ನಗರಿ ಮೈಸೂರಿಗೆ ನಿಧಾನಕ್ಕೆ ಅಡರಿಕೊಳ್ಳಲು ಶುರುವಾಗಿದೆ.

ಒಂದು ನಗರವನ್ನೋ ಅಥವಾ ದೊಡ್ಡ ಊರನ್ನೋ ನಿರ್ಮಿಸುವಾಗ ಊರಿನಿಂದ ನೀರು ಸರಾಗವಾಗಿ ಹರಿದು ಕೆರೆ, ಕಟ್ಟೆ ಸೇರಬೇಕು ಮತ್ತು ಆ ಮೂಲಕ ಅಂತರ್ಜಲ ಮಟ್ಟ ಹೆಚ್ಚಬೇಕು ಅನ್ನೋ ಉದ್ದೇಶದಿಂದ ಈ ರಾಜಕಾಲುವೆಗಳನ್ನು ನಿರ್ಮಿಸಲಾಗುತ್ತೆ. ಆದರೆ ಹಣದಾಸೆಗೆ ಇವತ್ತು ಅಂತಹ ರಾಜಕಾಲುವೆಗಳನ್ನೇ ಒತ್ತುವರಿ ಮಾಡಿ ಸೈಟು ಮಾಡಿಕೊಂಡಿರುವ ಪ್ರಕರಣಗಳು ಒಂದೆರಡಲ್ಲ. ಅದ-ರಿಂದ ಆಗುತ್ತಿರುವ ಅನಾಹುತಗಳೂ ಕಮ್ಮಿ ಇಲ್ಲ. ಸಣ್ಣದೊಂದು ಮಳೆಗೂ ಮಹಾನಗರಗಳು ಮುಳುಗಡೆಯಾಗುವ ಚಿತ್ರಣ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗುತ್ತಿರೋದೆ ಈ ಕಾರಣಕ್ಕೆ. ಸ್ವಚ್ಛಂದ ನಗರಿ ಮೈಸೂರಿನ ರಾಜಕಾಲುವೆಗೆ ಆಪತ್ತು ತಪ್ಪಿಲ್ಲ ಎನ್ನುವ ಅಂಶ ಬೆಳಕಿಗೆ ಬಂದಿದೆ.

ಮೈಸೂರಿನಲ್ಲಿರುವ ಕಾರಂಜಿ ಕೆರೆಗೆ ನೀರು ಹರಿಸಲು ನಿರ್ಮಿಸಿದ್ದ ರಾಜಕಾಲುವೆಯೇ ಸದ್ಯ ಒತ್ತುವರಿಯಾಗಿರೋದು. ಈ ಸಂಗತಿಯನ್ನು ಸ್ವತಃ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ. ವಾರದ ಹಿಂದೆ ಅಂದರೆ ಆಗಸ್ಟ್ 26 ರಂದು ಮಹಾನಗರ ಪಾಲಿಕೆ ಪ್ರಭಾರ ಆಯುಕ್ತರಾದ ಡಾ.ಎಂ.ಮಹೇಶ್ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ರಾಜಕಾಲುವೆ ಒತ್ತುವರಿಯಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳಿಂದ ಸರ್ವೇ ಮಾಡಿಸಲು ಸೂಚನೆ ನೀಡಿದ್ದಾರೆ.

ಮೈಸೂರಿನ ಹೃದಯದಂತಿರುವ ಅರಮನೆಯ ಬಳಿಯಿಂದ ಕೆಸರೆ ಮೂಲಕ ಮೈಸೂರಿನ ಹೊರವಲಯದ ಕಾರಂಜಿ ಕೆರೆಗೆ ನೀರು ಹರಿಯುವಂತೆ ಇದನ್ನು ನಿರ್ಮಿಸಲಾಗಿದೆ. ಭೂಮಾಫಿಯಾ ಮತ್ತು ಭ್ರಷ್ಟ ಅಧಿಕಾರಿಗಳ ಕರಾಮತ್ತಿನಿಂದ ರಾಜಕಾಲುವೆಯ ಜಾಗದಲ್ಲಿ ಬೃಹತ್ ಸುಂದರ ಮನೆ, ಭವನ, ಹಲವು ಕಟ್ಟಡಗಳು ನಿರ್ಮಾಣಗೊಂಡಿವೆ. ವಿಪರ್ಯಾಸವೆಂದರೆ ಸರ್ಕಾರದ ಕೆಲವೊಂದು ಪ್ರಾಧಿಕಾರಗಳೇ ಈ ರಾಜಕಾಲುವೆಯನ್ನು ಒತ್ತುಮಾಡಿಕೊಂಡಿವೆ. ಚಾಮುಂಡಿ ವಿಹಾರ ಕ್ರೀಡಾಂಗಣದಿಂದ ಆರಂಭವಾಗುವ ರಾಜಕಾಲುವೆ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಒಂದು ಭಾಗ, ಕೇಂದ್ರದ ಅಂಚೆ ತರಬೇತಿ ಸಂಸ್ಥೆ ಮೂಲಕ ಹಾದುನಂತರ ಖಾಸಗಿ ಬಡಾವಣೆಯ ಮೂಲಕ ಸಾಗಿ ಕೊನೆಗೆ ಕಾರಂಜಿ-ಕೆರೆ ತಲುಪುತ್ತದೆ. ಇದು ಬಲಭಾಗದ ಕಾಲುವೆ ಚಿತ್ರಣ. ಇನ್ನು ಎಡಭಾಗದ ಕಾಲುವೆ ಮೈಸೂರು ನಗರ ಪೊಲೀಸ್ ಆಯುಕ್ತರ ಮನೆ, ಕರ್ನಾಟಕ ಪೊಲೀಸ್ ಅಕಾಡೆಮಿಯಿಂದ ಸಾಗಿ ಕೆಸರೆ ದಾಟಿ ಮೈಸೂರಿನ ಹೊರವಲಯಕ್ಕೆ ಸಾಗುತ್ತದೆ. ಈಗ ರಾಜ ಕಾಲುವೆಯ ಮೂಲ ಸ್ವರೂಪವನ್ನು ಅಂಚೆ ತರಬೇತಿ ಸಂಸ್ಥೆ ಆವರಣದಲ್ಲಿ ಮಾತ್ರ ಕಾಣಬಹುದು.

ಇನ್ನು ಎಲ್ಲೂ ರಾಜಕಾಲುವೆ ಮೂಲ ಸ್ವರೂಪದಲ್ಲಿ ಉಳಿದಿಲ್ಲ. ಕೆಲವೆಡೆ ಕಲ್ಲುಮಣ್ಣು ತುಂಬಿಕೊಂಡು ಮುಚ್ಚಿಹೋಗಿರುವ ಸ್ಥಿತಿಯಲ್ಲಿದ್ದರೆ, ಇನ್ನೂ ಕೆಲವೆಡೆ ಉದ್ದೇಶಪೂರ್ವಕವಾಗಿ ಮುಚ್ಚಿದ್ದಾರೇನೋ ಎನ್ನಿಸುತ್ತದೆ. ರಾಜಕಾಲುವೆಯಲ್ಲಿ ನೀರು ಹರಿಯುವ ಮಾತೇ ಇಲ್ಲ. ವಿಪರ್ಯಾಸವೆಂದರೆ ಚಾಮುಂಡಿವಿಹಾರ ಕ್ರೀಡಾಂಗಣದ ಒಂದು ಭಾಗದಲ್ಲಿ ರಾಜಕಾಲುವೆಯನ್ನು ಮುಚ್ಚಿ ಕ್ರೀಡಾಂಗಣಕ್ಕೆ ಬಳಸಿಕೊಳ್ಳಲಾಗಿದೆ. ಪೊಲೀಸ್ ಅಕಾಡೆಮಿಯೂ ಕೂಡ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಿದೆ. ಈಗಾಗಲೆ ಪಾಲಿಕೆ ಅಧಿಕಾರಿಗಳು ಸಾಕಷ್ಟು ಬಾರಿ ನೋಟಿಸ್ ನೀಡಿದ್ದರೂ ಪೊಲೀಸ್ ಅಕಾಡೆಮಿಯವರು ಕೇರ್ ಮಾಡುತ್ತಿಲ್ಲ. ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿದರೆ ಅದು ದುರುದ್ದೇಶದಿಂದಲೇ ಕೂಡಿರುತ್ತದೆ ಎನ್ನಬಹುದು. ಆದರೆ ಸರ್ಕಾರಿ ಅಧಿಕಾರಿಗಳೇ ಸರ್ಕಾರಿ ಕೆಲಸಕ್ಕೆ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿರೋದು ದುರಂತ!

ಇನ್ನು ಚಾಮುಂಡಿ ವಿಹಾರ ಬಡಾವಣೆಯಲ್ಲಿ ರಾಜಕಾಲುವೆಯ ಮೇಲೆ ಮನೆಗಳನ್ನು ಕಟ್ಟಲಾಗಿದೆ. ಇದರಲ್ಲಿ ಬಹುಪಾಲು ಐಷಾರಾಮಿ ಮನೆಗಳೆ. ಅಚ್ಚರಿಪಡಬೇಕಾದ ಸಂಗತಿಯೆಂದರೆ ಚಾಮುಂಡಿವಿಹಾರ ಬಡಾವಣೆಯಲ್ಲಿ ನಿರ್ಮಾಣವಾಗಿರುವ ಬಹುತೇಕ ಐಷಾರಾಮಿ ಮನೆಗಳು ವೈದ್ಯರು, ಉದ್ಯಮಿಗಳಿಗೆ ಸೇರಿದವು. ಇದರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ವಿಭಾಗದ ಅಧಿಕಾರಿಯೊಬ್ಬರ ಮನೆಯೂ ಇದೆ. ಒಮ್ಮೆ ರಾಜಕಾಲುವೆ ಸರ್ವೆಯಾದರೆ ಇವುಗಳಲ್ಲಿ ಅದೆಷ್ಟು ಮನೆಗಳು ನೆಲಸಮವಾಗುತ್ತವೋ ಗೊತ್ತಿಲ್ಲ.

ಬಹುಷಃ ನಜರಬಾದ್ ಸುತ್ತಮುತ್ತಲಿನ ಪ್ರದೇಶದ ರಾಜಕಾಲುವೆ ಒತ್ತುವರಿಯಾಗಿರದಿದ್ದರೆ ಮಳೆ ಬಂದಾಗ ನಜರಬಾದ್ ಸುತ್ತಮುತ್ತಲಿನ ಪ್ರದೇಶ ಜಲಾವೃತವಾಗುತ್ತಿರಲಿಲ್ಲ.

ಈ ಹಿಂದೆ ಚಾಮುಂಡಿವಿಹಾರ ಕ್ರೀಡಾಂಗಣ... ರಾಜಕಾಲುವೆಯಿಂದ ಹರಿಯುವ ನೀರು ವಿವಿಧ... ಸಾಗುತ್ತ ಈಗಿನ ವಸ್ತುಪ್ರದರ್ಶನ ಆವರಣವಿರುವ ದೇವನೂರು ಕೆರೆ, ಹೆಬ್ಬಾಳ ಕೆರೆ ಮತ್ತು ಈಗಿನ ಜೆ... ಎನ್ನುವ ರೈಲ್ವೆ ನಿಲ್ದಾಣ ಪಕ್ಕದಲ್ಲಿರುವ ಜೀವ... ಕಟ್ಟೆ ಸುಬ್ಬರಾಯನಕೆರೆ, ದಳವಾಯಿ ಕೆರೆಗಳಿಗೆ ... ಮತ್ತೊಂದು ಮಾರ್ಗದಲ್ಲಿ, ರೇಸ್‌ಕೋರ್ಸ್ ... ಗೊಬ್ಬಳ್ಳಿ ಕಟ್ಟೆಗೆ ಸೇರುತ್ತಿತ್ತು. ಈಗ ರಾಜಕಾಲು... ಪರಿಣಾಮ ಮೈಸೂರಿನ ಒಳಗೆ ಇರುವ ಕೆರೆಗಳಿಗೆ ಹ... ನೀರು ರಸ್ತೆಗಳ ಮೇಲೆ ಬಡಾವಣೆಗಳ ಒಳಗೆ ನುಗ್ಗಿ... ಸೃಷ್ಟಿಸುತ್ತಿದೆ. ಇನ್ನು ಮಾನಸಗಂಗೋತ್ರಿಯ ಪ್ರಾದೇ... ಸಂಸ್ಥೆಯ ಬಳಿಯಿಂದ ಹರಿಯುವ ರಾಜಕಾಲು... ಹಿಂಭಾಗದಲ್ಲಿ ಸಾಗಿ ಅಖಿಲ ಭಾರತ ವಾಕ್ ... ಸಂಸ್ಥೆ ಸುತ್ತಿಕೊಂಡು ಕುಕ್ಕರಹಳ್ಳಿ ತಲುಪುತ್ತಿತ್ತು. ಈ ... ಈಗ ಹಳೆಯ ಸ್ಥಿತಿಯಲ್ಲಿ ಇಲ್ಲ.

ಕೆ.ಆರ್.ಸರ್ಕಲ್, ಹಾರ್ಡಿಂಜ್ ಸರ್ಕಲ್, ... ವಾಕ್ ಮತ್ತು ಶ್ರವಣ ಸಂಸ್ಥೆ, ಗಂಗೋತ್ರಿ ... ಪಡುವಾರಳ್ಳಿ ಬಳಿ, ಯಾದವಗಿರಿಯಲ್ಲಿರುವ ದೊ... ಬಳಿ ರಾಜಕಾಲುವೆ ಒತ್ತುವರಿ ಆಗಿರುವ ಅನು... ಸ್ಥಳೀಯರು ಹೊರಹಾಕುತ್ತಿದ್ದಾರೆ. ಮೈಸೂರು-... ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮಹಾರಾಣಿ... ಕಟ್ಟಡ, ಹಾಸ್ಟೆಲ್, ಯಾದವಗಿರಿಯಲ್ಲಿರುವ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾನಿಲಯ ಒತ್ತುವರಿಯಾಗಿರಬಹುದು ಎಂಬ ಶಂಕೆ ಸಾರ್ವ...

ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ... ಜನತಾನಗರ, ಕುದುರೆ ಮಾಳ ಬಳಿ ಒತ್ತು... ರಾಜಕಾಲುವೆ ಜಾಗವನ್ನು ತೆರವುಗೊಳಿಸಿದ್ದರು. ಜಿಲ್ಲಾಧಿಕಾರಿ ಹರ್ಷಗುಪ್ತ ಅವರು ಅತಿಕ್ರ... ಜಾಗಗಳನ್ನು ತೆರವುಗೊಳಿಸಿದ್ದರು. ಈಗಲೂ ಅಂ... ಪ್ರಾಮಾಣಿಕ ಹೆಜ್ಜೆಯನ್ನು ಜಿಲ್ಲಾಡಳಿತ ಇ... ಇಲ್ಲದೇಹೋದಲ್ಲಿ ಸ್ವಚ್ಛ ನಗರ ಎನಿಸಿಕೊಂಡಿರು... ಕೆಲ ದಿನಗಳಲ್ಲೇ ಕೊಳಚೆ ನೀರಿನ ಮುಳು... ಅನ್ನಿಸಿಕೊಳ್ಳುವುದರಲ್ಲಿ ಅನುಮಾನವಿಲ್ಲ.

ಗಣಪತಿಗೆ ನಿಲ್ಲದ ನರಬಲಿ

ತಿ ವರ್ಷ ಗಣೇಶನ ಹಬ್ಬ ಸಂಭ್ರಮದ ಜೊತೆಗೆ ಆತಂಕವನ್ನೂ ಹೊತ್ತು ತರುತ್ತದೆ. ರೇನೊ ಬ್ರಿಟಿಷರ ವಿರುದ್ಧ ಭಾರತೀಯರನ್ನು ಟಿಸಲು ಗಣಪತಿಯನ್ನು ತಂದು ರಸ್ತೆಯಲ್ಲಿ ದರು. ಆದರೆ ಬ್ರಿಟಿಷರ ನಂತರ ಈ ನಮ್ಮ ಮುಸ್ಲಿಮರ ವಿರುದ್ಧ ಬೆಳೆಯತೊಡಗಿದ. ತ್ಯಾನಂತರ ಈ ಗಣೇಶನ ಹಬ್ಬ ಬಲಿ ಕೊಂಡ ಜೀವಿಗಳ ಸಂಖ್ಯೆ ನೋಡಿದರೆ ತ್ರ್ಯ ಹೋರಾಟದಲ್ಲಿ ಮಡಿದವರಿಗಿಂತಲೂ ಯಾಗಿ ಕಾಣುತ್ತಿದೆ.

ವಮೊಗ್ಗದಲ್ಲಿ ನಡೆವ ಗಣೇಶನ ವಿಸರ್ಜನಾ ಯಕ್ಕೆ ಪ್ರತಿವರ್ಷ ಒಂದೊಂದು ಬಲಿ ಯುವುದು ಸಾಮಾನ್ಯವಾಗಿತ್ತು. ಮಸೀದಿ ಮುಂದೆ ತಿ ಮೆರವಣಿಗೆ ಹೋಗುವಾಗ ಮಸೀದಿ ು ಕರ್ಪೂರ ಹಚ್ಚಿ ಅಶ್ಲೀಲ ಘೋಷಣೆ ವುದಕ್ಕೆ ಕೆರಳಿದ ಮುಸ್ಲಿಮರು, ರಾತ್ರಿ ಸಿಕ್ಕ ಯಾರನ್ನೋ ಇರಿದು ಪರಾರಿಯಾಗಿ ರ್ಕ ಸೇಡನ್ನು ತೀರಿಸಿಕೊಳ್ಳುತ್ತಿದ್ದರು. ಸದರಿ ನ್ನು ಮೆರವಣಿಗೆ ಮಾಡಿದವರು ಮುಸ್ಲಿಮರ ಅಸಹನೆ ಹಬ್ಬಿಸಿ ಅದನ್ನು ಮತಗಳಾಗಿ ರ್ತಿಸುತ್ತ ಬಂದರು. ಇದನ್ನು ರಾಜ್ಯವ್ಯಾಪಿ ಸಂಬಂಧಪಟ್ಟವರು ಫಲಾನುಭವಿಗಳಾಗಿದ್ದು ಇತಿಹಾಸ. ಆದರೆ ಅನಕ್ಷರತೆ, ಬಡತನ ಮತಾಂಧತೆ ಮೇಳೈಸಿದಂತಿರುವ ಮರಲ್ಲಿ ಕೆಲವರು ಹಿಂದೂಗಳೆಲ್ಲಾ ತಮ್ಮ ಧಿಗಳೆಂದು ಭಾವಿಸಿ, ಎದುರಿಗೆ ಸಿಕ್ಕ ನ್ನೋ ಇರಿದು ಪರಾರಿಯಾಗಿ ಮಾಡಿರುವ ಶಕ ಅವರ ಅರಿವಿಗೆ ಬಂದಿಲ್ಲ ಅನ್ನಿಸುತ್ತದೆ ಗೆ. ಅನಂತಮೂರ್ತಿಯವರು ಕಡೆಯದಾಗಿ ಮಾತು ಇಲ್ಲಿ ಉಲ್ಲೇಖನೀಯ: "ಈ ಲ್ಲಿ ಮುಸ್ಲಿಮರು ಮತಾಂಧರಾದರೆ ಅವರು ಗುತ್ತಾರೆ. ಹಿಂದೂಗಳು ಮತಾಂಧರಾದರೆ ವೇ ನಾಶವಾಗುತ್ತದೆ."

ಸಮಯದಲ್ಲಿ ಶಿವಮೊಗ್ಗವನ್ನಿಟ್ಟುಕೊಂಡು ತ್ರಿಕವಾದ ಮಾತನಾಡುವುದು ಕಷ್ಟ. ಬೇರೆ ಕಡೆಗಳಲ್ಲಿ ಮುಸ್ಲಿಮರು ಗಣೇಶನ ಖಜಾಂಚಿಯಾದ ಉದಾಹರಣೆಗಳಿವೆ. ಣಿಗೆಯಲ್ಲಿ ಕುಣಿವ ಮುಸ್ಲಿಮರೂ ಇದ್ದಾರೆ. ತ್ರದಲ್ಲಿ ಹಾಡುವ ಹುಡುಗರಿದ್ದಾರೆ. ಆದರೆ ಗ್ಗಕ್ಕೆ ಬಂದರೆ ಎರಡೂ ಮತಾಂಧ ಶಕ್ತಿಗಳು ನಿಂತಿರುವುದನ್ನು ನೋಡುತ್ತೇವೆ. ಇಲ್ಲಿ ುರು ಮತ್ತು ಗಣೇಶ ಇಬ್ಬರೂ ಸೇರಿ ಬಲಿ ಕೊಂಡಿರುವುದನ್ನು ನೋಡುತ್ತೇವೆ.


ಲ್ಲೆಯ ದೊಡ್ಡ ದುರಂತ ಸಂಭವಿಸಿದ್ದು ಜಲಪಾತದಲ್ಲಿ 1988 ನೇ ಸೆಪ್ಟೆಂಬರ್ ತಾರೀಖಿನಂದು. ಲಿಂಗನಮಕ್ಕಿಗೆ ತಿ ಬಿಡಲೆಂದು ಹೋಗಿದ್ದ 18 ಜನರ 3 ಜನ ಜಲಸಮಾಧಿಯಾದರು. ಇದೂ ಹಾಡೋನಹಳ್ಳಿಯಂತಹ ಘಟನೆ. ಆದರೆ ೀನಹಳ್ಳಿಯದ್ದು ಹಗಲು ಸಂಭವಿಸಿದ ತ. ಲಿಂಗನಮಕ್ಕಿಯದು ಮಧ್ಯರಾತ್ರಿ ಸಿದ ದುರಂತ.

ಷ್ಟು ಬೇಡಿಕೊಂಡರೂ ಪೂಜಾರಿಯನ್ನು ತಮ್ಮ ಕರೆದುಕೊಂಡು ಹೊರಟಿದ್ದ ಯುವಕರು ಗಣೇಶನನ್ನು ವಿಸರ್ಜಿಸಿದ ನಂತರ, ನಲ್ಲಿ ಸ್ವಲ್ಪ ದೂರ ಹೋಗಿ ಬರಲು ತೆಪ್ಪವನ್ನು ದರು. ಮಳೆ ಶುರುವಾಯ್ತು. ಎರಡು ನ್ನು ಜೋಡಿಸಿದ್ದರಿಂದ ಒಂದಕ್ಕೆ ನೀರು ರುವುದು ಗೋಚರಿಸಿತು. ಎಲ್ಲರೂ ಪಕ್ಕದ ನೆಗೆದರು. ಆಗ ಕರೆಂಟು ಹೋಗಿದ್ದರಿಂದ ಮಕ್ಕಿ ಡ್ಯಾಮಿನ ಮೇಲಿನ ಲೈಟುಗಳೆಲ್ಲಾ ೇಗಿ ಭೂಮಿ ಮತ್ತು ಆಕಾಶ ಕಗ್ಗತ್ತಲೆಯಲ್ಲಿ ದವು. ಹಠಾತ್ತನೆ ಮುಳುಗಿದ ಹದಿನೆಂಟು ಕೆಲವರು ಸಮುದ್ರದಲ್ಲಿ ಈಜುವಂತಹ ರು. ಆದರೇನು, ಈಜು ಬರದವರು ಅವರನ್ನು ಡಿದುಬಿಟ್ಟರು. ಇದಂತೂ ಮಾರಣಾಂತಿಕ ಕರೆಂಟಿದ್ದರೆ ಕೆಲವೇ ಕೆಲವು ಮಾರುಗಳ ದಲ್ಲಿದ್ದ ಗುಡ್ಡ ಕಾಣುತ್ತಿತ್ತು. ಈಜು ವರು ಅಲ್ಲಿಗಾದರೂ ಈಜಿ ಕೆಲವರನ್ನು ದಡಕ್ಕೆ ಬಹುದಿತ್ತು, ಆದರೆ ಕತ್ತಲೆಯಲ್ಲಿ ಹದಿಮೂರು ನ್ನು ಗಂಗೆ ಬಲಿ ತೆಗೆದುಕೊಂಡಳು. ದವರು ಈಜುತ್ತಲೇ ನೋಡಿದರೆ, ಎಲ್ಲರನ್ನೂ ತ್ತು ಮುಳುಗಿಸಿದ ತೆಪ್ಪ ಮತ್ತೆ ಮೇಲೆದ್ದು ಮುಟ್ಟದಲ್ಲೇ ತೇಲುತ್ತಿತ್ತು. ಐದು ಜನ ಹೋಗಿ ಕಂಟಿ ಹಿಡಿದು ತೇಲುತ್ತ ಬೆಳಗಿನ ಜಾವಕ್ಕೆ ನ ಅಚೆಬದಿ ತಲುಪಿದರು.

ರಿಗೆ ಎಂತಹ ಶೋಕವನ್ನೂ ಷ ಶಕ್ತಿಯಿದೆ. ಅದಕ್ಕೆ ಹುಲ್ಲು ಕಡ್ಡಿ ದ್ದರಾಯ್ತು, ಆದ್ದರಿಂದ ಐದು ಜನ ದರು. ತೀರಿಕೊಂಡವರ ಪೈಕಿ ಪೂಜಾರಿ




ಹೊರತಾಗಿ ಎಲ್ಲರೂ ತರುಣರು. ಇದರಲ್ಲಿ ನನ್ನ ಸಂಬಂಧಿಯ ಎರಡು ಮಕ್ಕಳಿದ್ದರು. ಈಗಿನಂತೆ ಆಗ ಯಾವ ಧನಸಹಾಯವೂ ಸಿಗಲಿಲ್ಲ. ಆದರೆ ಜೋಗದ ಕಾಲೋನಿ ಸ್ಮಶಾನದಂತಾಗಿ ಹೋಯ್ತು. ತೀರಿಕೊಂಡವರ ಮನೆಗಳಿಗೆ ಹೋದರೆ, ದೊಡ್ಡ ಫೋಟೋ ಸುತ್ತ ಮಿನುಗುವ ಲೈಟು ಹಾಕಿ, ಕೆಳಗಡೆ ತೀರಿಕೊಂಡ ದಿನಾಂಕ ನಮೂದಿಸಿದ್ದಾರೆ. ಆ ಭಾವಚಿತ್ರವನ್ನು ಪ್ರತಿದಿನ ನೋಡುವುದರಿಂದ ಇವರ ದೈನಂದಿನ ದಿನಗಳು ದುಃಖದಿಂದಲೇ ಆರಂಭವಾಗುತ್ತವೆ. ಈಗ ಈ ಸರದಿ ಹಾಡೋನಹಳ್ಳಿಯ ಪಾಲಿಗೆ ಬಂದೊದಗಿದೆ.





ಗಣಪತಿ ವಿಷಯದಲ್ಲಿ ತರುಣರ ಉತ್ಸಾಹ ಹೇಗಿರುತ್ತದೆಂದರೆ, ಎಲ್ಲರೂ ಗಣಬಂದವರಂತಾಗಿರುತ್ತಾರೆ. ಇಲ್ಲದಿದ್ದರೆ ಹತ್ತನ್ನೆರಡು ಜನ ಏರಬಹುದಾದ ತೆಪ್ಪದ ಮೇಲೆ 20 ಜನ ನಿಲ್ಲುತ್ತಾರೆಂದರೆ, ಅವರು ಸಾವಿಗೂ ಅಂಜದ ಧೀರರು ಅನ್ನಬೇಕು. ಮರಳು ಮಾಫಿಯಾದ ಜನ ತುಂಗಭದ್ರಾ ನದಿಯ ಒಡಲನ್ನು ಬಗೆದು ಮರಣಕೂಪವಾಗಿಸಿದ್ದು ಯಾರ ಗಮನಕ್ಕೂ ಬರಲಿಲ್ಲ.

ಇದೆಲ್ಲಕ್ಕಿಂತ ಮುಖ್ಯವಾಗಿ ಈ ದುರಂತ ಸಂಭವಿಸಿದಾಗ ಎಲ್ಲರೂ ನೆನೆದದ್ದು ಇಲ್ಲಿನ ತೆಪ್ಪ ನಡೆಸುತ್ತಿದ್ದ ರಫೀಕರನ್ನು. ಈ ರಫೀಕ್ ನದಿ ಪಾತ್ರದ ನಡವಳಿಕೆಯನ್ನು ಚೆನ್ನಾಗಿ ಅರಿತವರು. ಅಗತ್ಯಕ್ಕಿಂತ ಒಬ್ಬನೇ ಒಬ್ಬನನ್ನು ತೆಪ್ಪ ಹತ್ತಲು ಬಿಡುತ್ತಿರಲಿಲ್ಲ. ಅವರೇನಾದರೂ ಇದ್ದರೆ ಗಣೇಶನನ್ನು ವಿಸರ್ಜಿಸಲು ಹತ್ತು ಜನರ ಹೊರತಾಗಿ ಯಾರನ್ನು ಹತ್ತಿಸುತ್ತಿರಲಿಲ್ಲ. 30 ವರ್ಷಗಳಿಂದ ತೆಪ್ಪ ನಡೆಸುತ್ತಿದ್ದ ರಫೀಕ್ ತೀರಿಕೊಂಡಿರುವುದರಿಂದ ತೆಪ್ಪಕ್ಕೆ ಹೆಚ್ಚು ಜನ ಹತ್ತುವುದನ್ನು ಯಾರೂ ತಡೆಯಲಿಲ್ಲ. ಇಬ್ಬರು ಪಿ.ಸಿ.ಗಳೂ ಕೂಡ ಪ್ರೇಕ್ಷಕರಂತಿದ್ದರು. ಆದ್ದರಿಂದ ಪ್ರತಿಭಾವಂತ ವಿದ್ಯಾರ್ಥಿಗಳೆಲ್ಲಾ ಮುಳುಗಿಹೋದರು. ಇದರಲ್ಲಿ ನಾಲ್ವರು ಇಂಜಿನಿಯರ್ ಪದವೀಧರರಿದ್ದರು. ಒಂದೇ ಕುಟುಂಬದ ಇಬ್ಬರು ಸಹೋದರರ ಸಾವಿನಿಂದ ಆ ಮನೆಯಲ್ಲಿ ದುಃಖ ಬಿಟ್ಟರೆ ಇನ್ನೇನಿಲ್ಲ. ತಾವು ಗಣಪತಿ ವಿಸರ್ಜಿಸುವುದನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯಲು ಹೇಳಿದ್ದವರು ಮತ್ತೆ ಬರಲಿಲ್ಲ.

ಗಣಪತಿಯನ್ನು ವಿಸರ್ಜಿಸಿದ ನಂತರ ತೆಪ್ಪ ಒಂದೆಡೆ ವಾಲಿತು. ಆಗ ಮತ್ತೊಂದೆಡೆಗೆ ಎಲ್ಲರೂ ನುಗ್ಗಿದ್ದರಿಂದ ತೆಪ್ಪ ಇನ್ನೊಂದೆಡೆ ವಾಲಿ ಮುಳುಗತೊಡಗಿತು. ತೆಪ್ಪದ ಅಂಚಿನಲ್ಲಿದ್ದವರು ಹಾರಿ ಈಜತೊಡಗಿದರು. ನಡುವೆಯಿದ್ದವರು ಮುಳುಗಿಹೋದರು. ಒಟ್ಟು 12 ಜನ ನೋಡು ನೋಡುತ್ತಿದ್ದಂತೆ ಮುಳುಗಿದರು. ದಡದಲ್ಲಿದ್ದ ಜನ ಅಸಹಾಯಕರಾಗಿ ಸಾವುಗಳನ್ನು ನೋಡುತ್ತಾ ನಿಂತರು.








ಕೊನೆಗೆ ಉಳಿದಿದ್ದ ಕಾರ್ಯವೆಂದರೆ, ಮುಳುಗಿಹೋದ ಶವಗಳನ್ನು ಹೊರಗೆತ್ತುವುದು. ಅದಕ್ಕಾಗಿ ಹರಿಹರದ ಸಾದತ್ ಖಾನ್ ತಂಡ ಬಂದಿತು. ಇವರ ಸಾಹಸವಂತೂ ಮೆಚ್ಚುವಂತದ್ದು. ಯಾವ ಸಲಕರಣೆಗಳೂ ಇಲ್ಲದೆ ತೂಕವಾದ ಕಲ್ಲನ್ನು ಹಗ್ಗಕ್ಕೆ ಕಟ್ಟಿ, ಅದನ್ನು ನೀರಿನಲ್ಲಿ ಬಿಟ್ಟು ಅದರ ಆಧಾರದಲ್ಲೇ ತಡಕಿ ಶವಗಳನ್ನು ಹೊರ ತೆಗೆಯುವುದು ಇವರ ಸಾಹಸ. ಈ ಸಾದತ್ ಖಾನ್ ತಂಡದಲ್ಲಿ ಫೈರೋಜ್ ಖಾನ್, ಸಾದಿಕ್, ರಿಜ್ವಾನ್ ಖಾನ್, ದಾದಾಫೀರ್, ಅಮೀರ್, ಸನಾವುಲ್ಲ ಮತ್ತು ಮಾರುತಿ ಎಂಬುವವರಿದ್ದಾರೆ. ಸಾದತ್ ಖಾನ್ ಕಳೆದ 40 ವರ್ಷಗಳಿಂದ ಜಲದುರಂತಗಳಿಂದ ಮೃತಪಟ್ಟವರನ್ನು ಹೊರತೆಗೆಯುವ ಕೆಲಸ ಮಾಡುತ್ತಾ ಬಂದಿದ್ದಾರೆ. ಅವರ ತಂಡದಲ್ಲಿರುವ 20 ಜನರ ಪೈಕಿ 19 ಜನ ಮುಸ್ಲಿಮರು. ಇವರೆಲ್ಲರ ಕಾಳಜಿಯೆಂದರೆ ಜನರ ಜೀವ ಉಳಿಸುವುದು. ಅಸು ನೀಗಿದ್ದರೆ ಶವ ತೆಗೆಯುವುದು. ಆಧುನಿಕವಾದ ಯಾವ ಸಲಕರಣೆಗಳೂ ಇಲ್ಲದೆ ಈ ಸಾಹಸ ಮಾಡುತ್ತ ಬಂದಿರುವ ಸಾದತ್ ಖಾನ್ ತಂಡವೇ ಹಾಡೋನಹಳ್ಳಿಯ ನದಿ ದುರಂತದಲ್ಲಿ ಮಡಿದ ಯುವಕರನ್ನು ಮೇಲೆತ್ತಿದ್ದು. ಎಲ್ಲವೂ ಮುಗಿದ ಮೇಲೆ ನಡೆದುದೆಲ್ಲವೂ ಮುಗಿಲುಮುಟ್ಟುವ ರೋದನ. ಈಗ ಹಾಡೋನಹಳ್ಳಿ ನಿಜಕ್ಕೂ ಸ್ಮಶಾನಸದೃಶವಾದ ಮೌನದಿಂದ ಕೂಡಿದೆ. ಒಂದು ತಲೆಮಾರಿನ ತರುಣ ಜನಾಂಗವೇ ಹೊರಟುಹೋಗಿದೆ.

ಹತ್ತು ವರ್ಷಗಳ ಹಿಂದೆ ನನ್ನೂರಿನಲ್ಲೂ ಗಣಪತಿ ಕಾರ್ಯಕ್ರಮಕ್ಕೆ ಹೋಗಿದ್ದ ಎಂಟು ಹುಡುಗರು ಅಸು ನೀಗಿದ ಫಲವಾಗಿ ಊರೇ ಸ್ಮಶಾನದಂತಾಗಿದೆ. ಇಪ್ಪತ್ತು ವರ್ಷಕ್ಕೆ ವಿಧವೆಯರಾದ ಮೂವರು ಹೆಣ್ಣುಮಕ್ಕಳು ಜೀವನ ಮಾಡಲು ಎಷ್ಟು ಕಷ್ಟಪಡಬೇಕಿದೆ ಎಂದರೆ, ಅವರು ಯಾರೊಂದಿಗಾದರೂ ಸಲುಗೆಯಿಂದ ಮಾತನಾಡಿದರೆ ಸಾಕು, ಕತೆ ಕಟ್ಟುವ ಹೀನ ಸಂಸ್ಕೃತಿ ನಮ್ಮ ಹಳ್ಳಿಗಳಲ್ಲಿದೆ. ಶೋಭ ಎಂಬ ಆರಡಿ ಎತ್ತರದ ಹೆಣ್ಣುಮಗಳೊಬ್ಬರು ಎಲ್ಲಿ ಹೋದಳು? ಎಲ್ಲಿ ಬಂದಳು? ಎಂಬ ಕುತೂಹಲದಲ್ಲೇ ಊರು ಮುಳುಗಿದೆ. ಆಕೆಗೆ ಧೈರ್ಯ ತುಂಬಿದ ಮೇಲೆ ಜನಗಳ ಆಡಿಕೆ ಕಡೆ ಗಮನ ಹರಿಸದೆ ತಾನಾಯಿತು ತನ್ನ ಕೆಲಸವಾಯಿತು ಎಂಬಂತಾದಳು.



ಸಾದತ್



ದಾದಾಪೀರ್

ಇದೆಲ್ಲಾ ಗಣೇಶನ ಕೃಪೆಯಿಂದಾದದ್ದು. ಈ ದುರಂತಗಳೇನು ಇಲ್ಲಿಗೇ ನಿಲ್ಲುವಂತಿಲ್ಲ. ಆದರೆ ಮಕ್ಕಳನ್ನು ಕಳೆದುಕೊಂಡು ಬದುಕುವವರ ಗೋಳು ಅಸಹನೀಯ. ನನ್ನೂರಿನಲ್ಲಿ ಒಂದೇ ವಯೋಮಾನದ ಹುಡುಗರು ಈ ಗಣಪತಿ ದೆಸೆಯಿಂದ ತೀರಿಹೋಗಿದ್ದರಿಂದ ಊರಿಗೆ ಹೋಗುವುದನ್ನೇ ಕಡಿಮೆ ಮಾಡಿದೆ. ಉತ್ಸಾಹದ ಚಿಲುಮೆಯಂತಿದ್ದ ಆ ಹುಡುಗರಿದ್ದರೆ ಅಲ್ಲೇನಾದರೂ ಮಾಡಬಹುದಿತ್ತು. ಆದರೀಗ ಇಡೀ ಊರನ್ನು ಒಂದು ರೀತಿಯ ಅವ್ಯಕ್ತ ದುಃಖದ ಛಾಯೆ ಆವರಿಸಿದೆ. "ಅಂಥಾ ಮಗನೆ ಹೋದ ಮೇಲೆ ಇನ್ನೇನು" ಎಂಬ ಉದ್ಗಾರವೊಂದು ಜನ್ಮ ಕೊಟ್ಟವರಿಂದ ಮುಂದಿನ ಬದುಕಿನ ನಿಟ್ಟುಸಿರಾಗಿ ಹೊರಬೀಳುತ್ತದೆ.

ಹಾಡೋನಹಳ್ಳಿಯಲ್ಲಿ 12 ಜನರ ಸಮಾಧಿಗಾಗಿ ದೊಡ್ಡ ಕಾಲುವೆಯಂಥ ಗುಂಡಿ ತೋಡಿದ್ದರು. ಲಿಂಗಾಯತರ ಪದ್ಧತಿಯಂತೆ ಕೂರಿಸಿ ಸಮಾಧಿ ಮಾಡಿದ್ದರಿಂದ ಅವರನ್ನೆಲ್ಲಾ ಸಾಲಾಗಿ ಕೂರಿಸಿ ಮಣ್ಣುಮುಚ್ಚಿದ್ದು ಭಯಾನಕವಾಗಿ ಕಂಡಿತು. ಆದರೆ ನನ್ನೂರಲ್ಲಿ ಸಾಲಾಗಿ ಸೌದೆ ಜೋಡಿಸಿ ಅದರ ಮೇಲೆ ಎಂಟು ಹುಡುಗರನ್ನು ಮಲಗಿಸಿ ಬೆಂಕಿ ಹಚ್ಚಿದಾಗ ಮೇಲೆದ್ದ ಆ ಜ್ವಾಲೆಯ ಜೊತೆಗೆ ಜನ್ಮಕೊಟ್ಟವರ, ಬಂಧುಬಳಗದವರ ಆಕ್ರಂದನವೂ ಮುಗಿಲು ಮುಟ್ಟಿತ್ತು. ಎದೆಯ ದುಃಖವನ್ನು ಬಸಿದ ನಂತರ, ಅವರು ನಿತ್ರಾಣಗೊಂಡು ಅರಳುಮರಳು ಮಾತಿನೊಂದಿಗೆ ಚೇತರಿಸಿಕೊಂಡ ಮೇಲೆ "ಅವನ ಆಯಸ್ಸೇ ಅಷ್ಟಿತ್ತು" ಎಂದು ಸಮಾಧಾನ ಮಾಡಿಕೊಳ್ಳುವವರಿಗಿಂತಲೂ, ತನ್ನ ಸಾವನ್ನೇ ಕಣ್ಣಾರೆ ನೋಡಿದಂತೆ ಗರ ಹೊಡೆದವರು ಚೇತರಿಸಿಕೊಳ್ಳುವುದು ಕಷ್ಟ.

ಈ ಭೀಕರ ದುರಂತಗಳಿಂದಲಾದರೂ ಎಚ್ಚೆತ್ತು ಗಣಪತಿಯಿಂದಾಗುವ ನರಬಲಿ ತಪ್ಪಿಸಲು ಎಲ್ಲರೂ ಯೋಚಿಸಬೇಕಿದೆ. ಏಕೆಂದರೆ ಈ ಗಣಪತಿ ನಮ್ಮ ಮನಸ್ಸಿನೊಳಗಿನ ಮನೋರಂಜನೆ ಮತ್ತು ಸಂಭ್ರಮದ ಪ್ರತೀಕ. ಈತನ ಹಬ್ಬವನ್ನು ಎಷ್ಟು ಕೆಟ್ಟದಾಗಿಯೂ ಮಾಡಬಹುದು ಎಂಬುದನ್ನು ನಮ್ಮ ಸುತ್ತಲ ಜನ ತೋರಿದ್ದಾರೆ. ಆದ್ದರಿಂದ ಈತನ ವಿಸರ್ಜನೆ ವೇಳೆಯಲ್ಲಿ ವಿನಾಕಾರಣ ಜೀವ ಕಳೆದುಕೊಳ್ಳುವುದು ಶುದ್ಧ ಮೂರ್ಖತನ.


ನಮ್ಮ ಕಡಿದಾಳು ಶಾಮಣ್ಣನವರು ಮೈಸೂರಲ್ಲಿ ಓದುತಿದ್ದಾಗ ಅವರ ಸಹಪಾಠಿಯೊಬ್ಬನಿಗೆ ಗಣೇಶನನ್ನು ಕೂರಿಸುವ ಉತ್ಸಾಹ ಬಂದಿತಂತೆ. ಧಾರ್ಮಿಕ ಆಚರಣೆಯನ್ನು ಮನ್ನಿಸುವ ಶಾಮಣ್ಣನವರು "ನೋಡು ಈ ರೂಮಿನಲ್ಲಿ ನಿನ್ನ ಗಣಪತಿ ವಾಸ್ತವ್ಯಕ್ಕೆ ಜಾಗವಿಲ್ಲ. ಆದ್ದರಿಂದ ಕಿಟಕಿ ಮೇಲೆ ಕೂರಿಸುವಷ್ಟು ಗಾತ್ರದ ಗಣಪನನ್ನು ತೆಗೆದುಕೊಂಡು ಬಾ" ಎಂದರಂತೆ. ಸುದೈವಕ್ಕೆ ಇಲಿ ಗಾತ್ರದ ಗಣಪತಿ ಸಿಕ್ಕಿತಂತೆ, ಅದನ್ನೇ ತಂದು ಕಿಟಕಿ ದಿಂಡಿನ ಮೇಲೆ ಕೂರಿಸಿ, ಒಂದೆರಡು ದಿನ ಪೂಜಿಸಿದ ನಂತರ, ಗೆಳೆಯ ಶಾಮಣ್ಣನವರಿಗೆ "ನನ್ನ ಗಣಪತಿ ವಿಸರ್ಜಿಸಬೇಕು" ಎಂದನಂತೆ. ಶಾಮಣ್ಣನವರು ವಿಸರ್ಜನೆ ಎಂಬ ಪದವನ್ನು ಗ್ರಹಿಸಿ ನಕ್ಕು, "ಆಯ್ತು ನಡಿಯಪ್ಪ" ಎಂದು ಕುಕ್ಕರಹಳ್ಳಿ ಕೆರೆಯ ಬಳಿ ಕರೆದುಕೊಂಡು ಹೋಗಿ "ನೋಡು ಗಣಪತಿ ವಿಸರ್ಜನೆ ಮಾಡಬೇಕಾದ್ರೆ ನಿನಗೆ ಈಜು ಬರಬೇಕು. ಬರುತ್ತಾ?" ಎಂದರಂತೆ. ಗೆಳೆಯ ಸಂದಿಗ್ಧಕ್ಕೆ ಸಿಕ್ಕಂತೆ "ಇಲ್ಲವಲ್ಲಾ" ಎಂದನಂತೆ. ಆಗ ಶಾಮಣ್ಣ "ಯೋಚನೆ ಮಾಡಬೇಡ, ನಿನ್ನ ಗಣಪತಿ ಕೊಡಿಲ್ಲಿ" ಎಂದು ತೆಗೆದುಕೊಂಡು ಅದನ್ನು ಕ್ಯಾಟರ್‌ಬಿಲ್ಲಿನ ಕವಣೆಗೆ ಒತ್ತಿ ಬೀರಿದ ಕೂಡಲೇ ಗಣೇಶ ಆಕಾಶಕ್ಕೆ ಚಿಮ್ಮಿ ಕೆರೆಯ ನಡುವೆ ಬಿತ್ತಂತೆ. ಹೆದರಿದ ಭಕ್ತನ ಕಡೆ ತಿರುಗಿದ ಶಾಮಣ್ಣ, "ನಿನ್ನ ಗಣೇಶ ಕೆರೆಯ ಮಧ್ಯಕ್ಕೆ ಅದೂ ಆಳವಾದ ನೀರಿಗೆ ಪಕ್ಷಿಯ ಮಲ ವಿಸರ್ಜನೆಯಾದಂತೆ ಬಿದ್ದಿದ್ದರಿಂದ ನಿನಗೆ ಒಳ್ಳೆಯದಾಗುತ್ತೆ ನಡಿ" ಎಂದರಂತೆ.

ಯಾವ ಕಡೆಯಿಂದ ನೋಡಿದರೂ ಮನೋರಂಜನೆಯ ವಸ್ತುವಿನಂತೆ ಕಾಣುವ ಗಣೇಶನಿಗಾಗಿ ಈ ನಾಡಿನಲ್ಲಿ ನಡೆಯುತ್ತಿರುವ ಜೀವ ಸಮಾಧಿಗಳನ್ನು ನಿಲ್ಲಿಸಲು ಎಲ್ಲರೂ ಜಾಗರೂಕತೆಯಿಂದ ವರ್ತಿಸಬೇಕಿದೆ.

ಬಿ. ಚಂದ್ರೇಗೌಡ



ಉತ್ತರ ಕನ್ನಡ ಬಿಜೆಪಿಯತ್ತ ನಿರ್ಗತಿಕ ಪುಢಾರಿಗಳ ಚಿತ್ತ!



ಉತ್ತರ ಕನ್ನಡದ ರಾಜಕೀಯ ಪಡಸಾಲೆಯಲ್ಲಿ "ಕಣ್ಣೇ ಕಟ್ಟೇ ಕಾಡೇ ಗೂಡೇ" ಆಟ ಆರಂಭವಾಗಿದೆ. ಕಾಂಗ್ರೆಸ್‌ನಲ್ಲಿ ಕದಲಿಕೆಯಾದರೆ, ಬಿಜೆಪಿಯಲ್ಲಿ ಬಾಂಬ್ ಬಿದ್ದಂತ ತಲ್ಲಣ. ಬಿಜೆಪಿಯಲ್ಲಿ ತಲ್ಲಣವಾದರೆ ಜೆಡಿಎಸ್‌ನಲ್ಲಿ ಅಲ್ಲೋಲಕಲ್ಲೋಲ ಆಗುತ್ತಿದೆ. ಅಸೆಂಬ್ಲಿ ಚುನಾವಣೆಗಿನ್ನೂ ಒಂದು ಮುಕ್ಕಾಲು ವರ್ಷವೇ ಬಾಕಿಯಿದೆ. ಅದಾಗಲೇ ಜಿಲ್ಲೆಯ ಮೂರು ಮಹತ್ವದ ಪಕ್ಷಗಳ ಪುಢಾರಿಗಳು ಪಕ್ಷಾಂತರ ಪಂಚಾಂಗ ಹಿಡಿದುಕೊಂಡು ಬಚಾವಿನ ನೆಗೆತಕ್ಕೆ ತಿಥಿ-ಮಿಥಿ-ಮುಹೂರ್ತ ಹುಡುಕುತ್ತಿದ್ದಾರೆ.

ಆಳುವ ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕರಿಗೇ ಟಿಕೆಟ್ ಬಹುತೇಕ ಖಾತ್ರಿಯೆಂಬ ಕಾರಣಕ್ಕೆ ಆ ಪಕ್ಷದಲ್ಲಿ ಅಂಥ ತುರುಸೇನೂ ಇಲ್ಲ. ಒಂಥರಾ ಸೂತಕದ ಕಳೆ ಕಾಂಗ್ರೆಸ್ ಆವರಿಸಿದೆ. ಕಾಂಗ್ರೆಸ್‌ಗೆ ಆಡಳಿತ ವಿರೋಧಿ ಅಲೆ ಅಪ್ಪಳಿಸುತ್ತದೆಂಬ ಅಂದಾಜಿನಿಂದ ಬಿಜೆಪಿ ಆಕರ್ಷಣೆಯ ತಾಣವಾಗಿ ಬಿಟ್ಟಿದೆ. ಹೀಗಾಗಿ ಜಿಲ್ಲಾ ಬಿಜೆಪಿಯಲ್ಲಿ ಒಳಗೊಳಗೇ ಗುದುಮುರಿಗೆ ಟೆನ್ಷನ್. ಬಿಜೆಪಿಗೆ ಜನಾಕರ್ಷಕ ಪ್ರಭಾವಳಿಯೇನೂ ಇಲ್ಲ. ವರ್ಚಸ್ವೀ ನಾಯಕರೂ ಇಲ್ಲ. ಆದರೆ ಮಜಾ ಎಂದರೆ, ಕಾಂಗ್ರೆಸ್‌ನ ದೋಷಪಾಂಡೆ ಗ್ಯಾಂಗಿನ ಆ್ಯಂಟಿ ಇನ್‌ಕಂಬೆನ್ಸಿಯೇ ಉತ್ತರ ಕನ್ನಡ ಬಿಜೆಪಿಯನ್ನು ಬೆಲ್ಲ ತುಂಬಿದ ಗೋಣಿಚೀಲದಂತೆ ಮಾಡಿಬಿಟ್ಟಿದೆ. ಕಾಂಗ್ರೆಸ್ ಮತ್ತು ಜೆಡಿಎಸ್‌ನ ನಿರ್ಗತಿಕ ನೊಣ, ಇರುವೆಗಳು ಈ ಮೂಟೆಯ ಸುತ್ತ ಗಿರಕಿ ಹೊಡೆಯುತ್ತಿವೆ.

ಜನರ ಕೈಗೆಟುಕದೆ ಕಳ್ಳಾಟದಲ್ಲಿ ಕಾಲ ಕಳೆವ ಸಂಸದನೆಂಬ ಕುಖ್ಯಾತಿಯ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿಯೇ ಈಗ ಜಿಲ್ಲಾ ಬಿಜೆಪಿಯ ಏಕಮೇವಾದ್ವಿತೀಯ ನಾಯಕಾಗ್ರೇಸ! ಹಿಂದೂತ್ವದ ಹೋರಾಟದಲ್ಲಿ ಜಖಂ ಆಗಿ ಆರೋಗ್ಯ ಕೆಟ್ಟಿದೆ ಎನ್ನುತ್ತ ತಲೆ ತಪ್ಪಿಸಿಕೊಳ್ಳುತ್ತಿದ್ದ ಅನಂತ್ಮಾಣಿಯನ್ನು ಯಾವಾಗ ಯಡ್ಡಿ ಮಹಾತ್ಮ ಉತ್ತರ ಕನ್ನಡ ಬಿಜೆಪಿಯ ಯಜಮಾನನೆಂದು ಘೋಷಿಸಿ ರಾಜ್ಯ ಬಿಜೆಪಿಯ ಉಪಾಧ್ಯಕ್ಷನನ್ನಾಗಿ ಮಾಡಿದರೋ, ಆ ಗಳಿಗೆಯಲ್ಲೇ ಮಾಣಿಯ ಆರೋಗ್ಯ ಭಾಗ್ಯ ಖುಲಾಯಿಸಿಬಿಟ್ಟಿದೆ. ಜನರ ಕೆಲಸ, ಕ್ಷೇತ್ರದ ಅಭಿವೃದ್ಧಿ ಬಗ್ಗೆ ಹೇಳಿದರೆ, ಅನಾರೋಗ್ಯದ ನೆಪಹೇಳಿ ಜೋಲು ಮೋರೆ ಹಾಕುತ್ತಿದ್ದ ಅನಂತ್ಮಾಣಿ ಈಗ ಜಿಲ್ಲಾ ಬಿಜೆಪಿ ಕಟ್ಟುವ ಉಮೇದಿಯಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಹಳಿಯಾಳದಿಂದ ಭಟ್ಕಳದವರೆಗೆ, ಸಿದ್ದಾಪುರದಿಂದ ಕಾರವಾರದತನಕ ಗಿರಗಿರನೆ ಓಡಾಡುತ್ತಿದ್ದಾನೆ.

ಯಡ್ಡಿಯ ಭಾವಿ ಸರ್ಕಾರದಲ್ಲಿ ಮಂತ್ರಿಯಾಗುವ ಹಿಡನ್ ಅಜೆಂಡಾ ಇಟ್ಟುಕೊಂಡು ಪುಟಿಪುಟಿದು ಹಾರುತ್ತಿರುವ ಅನಂತ್ಮಾಣಿಯ ಅವಾಂತರ ಕಂಡು ಸಂಘಪರಿವಾರದ ಪಕ್ಕಾ ಕಾರ್ಯಕರ್ತರೇ ಅಸಹ್ಯದಿಂದ ಚಡಪಡಿಸುತ್ತಿದ್ದಾರೆ. ಎಂಪಿಗಿರಿ ಕರ್ತವ್ಯ ನಿಭಾಯಿಸದೆ ಬರೀ ಖಾವಿ ಬರಡು ರಾಜಕಾರಣದಲ್ಲಿ ನಿರತನಾಗಿರುವ ಮಾಣಿಯ 'ಆರೋಗ್ಯದ ರಹಸ್ಯ' ಅರಿತ ಜನರು 'ಇವನೆಂಥ ಹಗಲುವೇಷದ ಪುಢಾರಿ ಮಾರಾಯ?" ಎಂದು ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಜಿಲ್ಲೆಯ ಮೂಲೆಮೂಲೆಯಲ್ಲಿ ಬಿತ್ತಿದರೆ ಬೆಳೆಯಾಗದ ಹೊಟ್ಟು, ಜೊಳ್ಳುಗಳನ್ನೆಲ್ಲ ಬಿಜೆಪಿ ಸೇರಿಸಿಕೊಳ್ಳುತ್ತಾ ಇದೇ ತನ್ನ ಮಹತ್ಸಾಧನೆ ಎಂಬಂತೆ ಪೋಸು ಕೊಡುತ್ತಿರುವ ಅನಂತ್ಮಾಣಿ ಬಾಯಿ ತೆರೆದರೆ ಮತ್ತದೇ ಗಲೀಜು ಮಾತುಗಾರಿಕೆ ಉದುರುತ್ತಿದೆ. ಸಾಬರನ್ನು, ಜಾತ್ಯತೀತರನ್ನು ಮತ್ತು ಮಾಧ್ಯಮದವರನ್ನೆಲ್ಲ ಬಾಯಿಗೆಬಂದಂತೆ ಬೈದು ಭಾಷಣ ಬಿಗಿಯುತ್ತಿರುವ ಮಾಣಿ ಒಂದೂವರೆ ದಶಕದ ತನ್ನ ಸಂಸದಗಿರಿಯ ಒಂದೇ ಒಂದು ಸಾಧನೆ ಹೇಳಲಾಗದ ನೈತಿಕ ಅಧಃಪತನದಲ್ಲಿ ಚಡಪಡಿಸುವುದು ಸಭಿಕರಿಗೆಲ್ಲ ಢಾಳಾಗಿ ಕಾಣಿಸುತ್ತಿದೆ.

ಅನಂತ್ಮಾಣಿ ಹೋದ-ಹೋದಲ್ಲೆಲ್ಲ ಹೇಳೋದು ಒಂದೇ ಒಂದು ಮಾತು. 'ಮೋದಿಯ ಆಕರ್ಷಣೆಗೆ ಬಿದ್ದಿರುವ ಜಿಲ್ಲೆಯ ಬೇರೆ-ಬೇರೆ ಪಾರ್ಟಿಯ ದೊಡ್ಡ-ದೊಡ್ಡ ನಾಯಕರು ಸದ್ಯವೇ ಬಿಜೆಪಿ ಸೇರ್ತಾರೆ. ನೋಡ್ತಾ ಇರಿ...' ಅಂತಾನೆ ಮಾಣಿ. ಕಳ್ಳ ಹಣದ ಸರ್ಕಾರಿ ಅಧಿಕಾರಿಗಳು, ಕಾಂಗ್ರೆಸ್, ಜೆಡಿಎಸ್‌ನಲ್ಲಿ ನೆಲೆ-ಬೆಲೆಯಿಲ್ಲದೆ ತ್ರಿಶಂಕು ಸ್ವರ್ಗದಲ್ಲಿ ನೇತಾಡುತ್ತಿರುವ ಸ್ವಯಂಘೋಷಿತ ಮುಖಂಡ ಮಾಣಿಗಳಿಗೆಲ್ಲ ಮಾಣಿ ಬಲೆ ಬೀಸಿ ಕುಂತಿದ್ದಾನೆ. ಜಿಲ್ಲೆಯ ಆರು ಕ್ಷೇತ್ರದಲ್ಲಿ ಐದರಲ್ಲಿ ತನ್ನ ಹಿಂಬಾಲಕರನ್ನೇ ಎಮ್ಮೆಲ್ಲೆ ಮಾಡ್ತೇನೆ, ಒಂದು ದೇವರಿಗೆ (ಕಾಗೇರಿಗೆ) ಬಿಡ್ತೇನೆಂದು ಗಹಗಹಿಸಿ ನಗುವ ಅನಂತ್ಮಾಣಿ ಹುಸಿ ಹಿಂದೂತ್ವದ ರಾಜಕಾರಣದಿಂದಾಗಿ ಜಿಲ್ಲಾ ಬಿಜೆಪಿಯಲ್ಲೀಗ ದೊಡ್ಡ ನೂಕುನುಗ್ಗಲೇ ನಡೆದಿದೆ! ಮೂಲ ನಿವಾಸಿ ನಿಷ್ಠಾವಂತರು ಮತ್ತು ವಲಸಿಗ ಇನ್‌ಸ್ಟಂಟ್ ನಾಯಕಮಣಿಗಳ ಮಧ್ಯೆ ಟಿಕೆಟ್‌ಗಾಗಿ ಘನಘೋರ ಕಾಳಗ ನಡೆಯುತ್ತಿದೆ.

ತನ್ನ ಆಜನ್ಮ ವೈರಿ ಮಾಜಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಶಿರಸಿ ಆದಿಯಾಗಿ ಜಿಲ್ಲೆಯ ಅಷ್ಟೂ ಅಸೆಂಬ್ಲಿ ಕ್ಷೇತ್ರದಲ್ಲಿ ಎಮ್ಮೆಲ್ಲೆ ಆಸೆಯ ತಂಡತಂಡ ತಯಾರಿಸುವ ಅನಂತ್ಮಾಣಿ ಹಿಂದೂತ್ವದ ಗೊಂದಲ ಗಲಾಟೆಯೇ ಗೆಲ್ಲಲು ತಾರಕ ತಂತ್ರವೆಂಬ ದುರ್ಬೋಧೆ ಮಾಡಿಬಿಟ್ಟಿದ್ದಾನೆ. ಅನಂತ್ಮಾಣಿ ಮೊಣಕೈಗೆ ಹಚ್ಚಿರುವ ತುಪ್ಪದ ಘಮಲಿನ ಅಮಲೇರಿಸಿ ಕೊಂಡಿರುವ ಶೂದ್ರ ಹುಡುಗರು ಹಿಂದೂತ್ವ ರಕ್ಷಣೆ, ಗೋರಕ್ಷಣೆ ಎನ್ನುತ್ತ ಕ್ರಿಮಿನಲ್ ಪಾಪಕೂಪಕ್ಕೆ ಬೀಳುತ್ತಿದ್ದಾರೆ. ಈ ಅನಂತ್ಮಾಣಿಯ ಅಡ್ನಾಡಿ ರಾಜಕಾರಣದಿಂದ ಜಿಲ್ಲಾ ಬಿಜೆಪಿಯಲ್ಲಿ ಅವಧಿ ಮೊದಲೇ ಶುರುವಾಗಿರುವ ಟಿಕೆಟ್ ತಳಮಳ ಪುಕ್ಕಟೆ ಮನರಂಜನೆ ಒದಗಿಸುತ್ತಿದೆ.

ಜಿಲ್ಲೆಯ ಪ್ರತಿ ತಾಲ್ಲೂಕಿನ ಬಿಜೆಪಿಯಲ್ಲಿ









ಶುರುವಾಗಿರುವ ಟಿಕೆಟ್ ಗ್ಯಾಂಗ್‌ವಾರ್ ಕುತೂಹಲಕರವಾಗಿದೆ. ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಅನಂತ್ಮಾಣಿಯ ಡಾರ್ಕ್‌ಹಾರ್ಸ್- ನಾಗರಾಜ ನಾಯಕನೆಂಬ ಹಣವಂತ ವಕೀಲ. ನಾಗರಾಜ್ ನಾಯಕ್ ಮೂಲ- ಸ್ವಾತಂತ್ರ್ಯ ಹೋರಾಟದ ಹೊತ್ತಲ್ಲಿ ಕರ್ನಾಟಕದ ಬಾರ್ಡೋಲಿ ಎಂದೇ ಹೆಸರಾಗಿದ್ದ ಅಂಕೋಲಾ. ಅಂಕೋಲಾ ಸಮಾಜವಾದಿಗಳ ನೆಲವೂ ಹೌದು. ದಿನಕರ ದೇಸಾಯಿ, ಪಿಕಳೆ, ನಾಡಕರ್ಣಿಗಳಂಥ ರೈತ-ಕೂಲಿಕಾರರ ಹೋರಾಟ ಕಟ್ಟಿದ ಕರ್ಮಯೋಗಿಗಳ ತವರಿದು. ಇಂಥ ಊರಿನ ನಾಗರಾಜ್ ನಾಯಕ್ ಎಮ್ಮೆಲ್ಲೆಗಿರಿಯ ಹಪಾಹಪಿಗೆ ಬಿದ್ದು ಕೋಮುವಾದಿ ಬಿಜೆಪಿ ಪಾಲಾದದ್ದು ಕಡಲತಡಿಯ ಮಂದಿಗಂತೂ ಹೇಸಿಗೆ ಹುಟ್ಟಿಸಿಬಿಟ್ಟಿದೆ! ಸ್ವಾತಂತ್ರ್ಯ ಸೇನಾನಿಗಳ ಬಾಸ್ಗೋಡದ ಮಣ್ಣಿನ ಮಗನಾದ ತಾನೊಬ್ಬನೇ ಸಂಭಾವಿತ-ಶಾಸಕನಾಗುವ ಅರ್ಹತೆಯವನೆಂಬ ಭ್ರಮೆಯ ನಾಗರಾಜ್ ಬಿಜೆಪಿಯ ದೊಡ್ಡವರ ಸೆಳೆಯಲೆಂದೇ 'ಪಹರೆ' ಎಂಬ ಸಂಘ ಕಟ್ಟಿಕೊಂಡು ಮೋದಿಯಂತೆ ಪೊರಕೆ ಹಿಡಿದು 'ಕ್ಲೀನ್ ಕಾರ್ವಾರ್... ಕ್ಲೀನ್ ಕಾರ್ವಾರ್....' ಎಂದು ಶೋ ಮಾಡುತ್ತಿದ್ದಾನೆ.

ಮೊನ್ನೆ-ಮೊನ್ನೆಯಷ್ಟೇ ಯಡ್ಡಿ ಮಾಮ-ಅನಂತ್ಮಾಣಿಯನ್ನು ಬಾಸ್ಗೋಡಿಗೆ ಕರೆಸಿ ಬಿಜೆಪಿ ಸೇರಿರುವ ನಾಗರಾಜ್‌ನ ಹಾವಳಿಗೆ ಮೂಲ ಬಿಜೆಪಿಗರೀಗ ಕೆರಳಿಕೆಂಡವಾಗಿದ್ದಾರೆ. ಭೂಗತ ರೌಡಿ ಬನ್ನಂಜೆ ರಾಜಾನಿಂದ ಹತನಾದ ಧನನಾಯಕ್ ಸುಪುತ್ರ ಮಯೂರ ನಾಯಕ್ ಗ್ಯಾಂಗನ್ನು ಸುಖಾಸುಮ್ಮನೆ ಕೆರಳಿಸಿ ಎದುರು ಹಾಕಿಕೊಂಡಿರುವ ಅನಂತ್ಮಾಣಿ ಪತರುಗುಟ್ಟಿ ಹೋಗಿದ್ದಾನೆ. "ಮೊನ್ನೆ-ಮೊನ್ನೆ ಕಣ್ಣುಬಿಟ್ಟವರು ಅದೆಷ್ಟು ಹಾರ್ತಾರೋ ನೋಡ್ಲೋಣ... ಮುಂದಿದೆ ಜಟಕನ ಹಬ್ಬ" ಎಂದಬ್ಬರಿಸಿದ್ದಾನೆ ಅನಂತ್ಮಾಣಿ.

ಇದಕ್ಕೆ ಸಮಾನಾಂತರವಾಗಿ ಅಧಿಕಪ್ರಸಂಗಿ ಆನಂದ ಅಸ್ನೋಟಿಕರ್ ತನ್ನ ಹಳೆಯ ಸಂಪರ್ಕಗಳನ್ನೆಲ್ಲ ಬಳಸಿ ಬಿಜೆಪಿ ಟಿಕೆಟ್ ತರಲು ಬೆಂಗಳೂರು-ದಿಲ್ಲಿ ಮಟ್ಟದಲ್ಲಿ ಕಟಿಪಿಟಿ ನಡೆಸಿದ್ದಾನೆ. ಈ ಆನಂದನ ಕಂಡರೆ ಅನಂತ್ಮಾಣಿಗೆ ಈಗ ಆಗುವುದಿಲ್ಲ. ಹಿಂದೆ ಆತ ಆಪರೇಷನ್ ಕಮಲಕ್ಕೆ ತುತ್ತಾಗಿ ಸಿಜರೀನ್ ಮಾಡಿಸಿಕೊಂಡಾಗ ಇದೇ ಅನಂತ್ಮಾಣಿಗೆ ಅಪಸ್ವರ ಎತ್ತದಂತೆ ಕಪ್ಪ ಕೊಟ್ಟೇ ಬಿಜೆಪಿ ಸೇರಿದ್ದ. ಈ ಆನಂದನಿಗೆ ಯಡ್ಡಿ-ಈಶ್ವರಿಯಂಥವರ ಸಖ್ಯ ಈಗಲೂ ಇದೆ. ನಾಗರಾಜ ನಾಯಕ್‌ಗಿಂತ ಹೆಚ್ಚು 'ಪರಿಚಿತ' ಈತ ಕ್ಷೇತ್ರದಲ್ಲಿ.

ಆದರೆ ನ್ಯಾಯವಾಗಿ ಬಿಜೆಪಿ ಟಿಕೆಟ್ ಏನಾದರೂ ಸಿಗುವಂತಿದ್ದರೆ, ಅದು ಕಾರವಾರ ನಗರಸಭೆಯ ಮಾಜಿ ಅಧ್ಯಕ್ಷ ಗಣಪತಿ ಉಳ್ವೇಕರ್‌ಗೇ ಸಿಗಬೇಕು. ಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮೀನುಗಾರ ಸಂಕುಲದ ಈ ಉಳ್ವೇಕರ್ ದೈತ್ಯ ಅಸ್ನೋಟಿಕರ್ ಎದುರೇ ನಿಂತು 27 ಸಾವಿರದಷ್ಟು ಮತ ಪಡೆದ ಧೀರ. ಈಚೆಗಷ್ಟೇ ಆಗಿರುವ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಎಲೆಕ್ಷನ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ದೊಡ್ಡ ಮೊತ್ತದ ಓಟು ಪಡೆದುಕೊಂಡಿದ್ದ. ಬಿಜೆಪಿಯ ಶಾಸಕ-ಸಂಸದರ ಸಹಕಾರ ಇಲ್ಲದೆ ಏಕಾಂಗಿಯಾಗಿ ಈತ ಪಡೆದ ಮತಗಳು ಆತನ ತಾಕತ್ತಿಗೆ ಸಂಕೇತದಂತಿದೆ! ಉಳ್ವೇಕರ್‌ಗೆ 'ಸದ್ಯಕ್ಕೆ ಪರಿಷತ್ತಿಗೆ ಸ್ಪರ್ಧಿಸು.... ಮುಂದೆ ಅಸೆಂಬ್ಲಿ ಟಿಕೆಟ್ ಕೊಡ್ತೇನೆ...' ಎಂದು ಬಿಜೆಪಿ ದಗಲುಬಾಜಿ ದೊಡ್ಡವರು ಹೇಳಿದ್ದರು. ಈಗ ವಂಚನೆಗೆ ಅದೇ 'ಹೈಕಮಾಂಡ್' ರೆಡಿಯಾಗಿದೆ.

ಖುದ್ದು ಅನಂತ್ಮಾಣಿಯೇ ಕಣ್ಣು ಹಾಕಿರುವುದರಿಂದ ಕುಮಟಾ ಕುತೂಹಲಕರ ಕ್ಷೇ... ಎಂದೆನಿಸಿಬಿಟ್ಟಿದೆ! ಬಿಜೆಪಿ ಟಿಕೆಟಿಗಾಗಿ ಇಲ್ಲಿರುವ ದೊಡ್ಡ ಸಾಲು ಇನ್ನೆಲ್ಲಿಯೂ ಇಲ್ಲ. ಕಳೆದ ಬಾ... ಹೀನಾಯವಾಗಿ ಸೋತ ಸೂರಜ್ ಸೋನಿ ಬಣ್ಣಗೆಟ್ಟಿದ್ದಾನೆ. 'ಬಂ'ಗೆ ಮಾಡಿದ ದ್ರೋಹಕ್ಕೆ ಈ ದುರಂತ ಸ್ಥಿತಿ ತಲುಪಿದ್ದಾನೆಂದು ದೀವ... ಚರ್ಚೆಗಳು ನಡೆದಿವೆ. ಒಣ ರುಬಾಬಿನ ಸೂ... ನಾಯ್ಕ್ ಅದೆಷ್ಟು ಹೈರಾಣಾಗಿದ್ದಾನೆಂದರೆ, ಹೆಂಡತಿಯನ್ನು ಜಿಲ್ಲಾ ಪಂಚಾಯತ್ ಕ್ಷೇತ್ರ... ಗೆಲ್ಲಿಸಿಕೊಳ್ಳಲು ಕಾಂಗ್ರೆಸ್ ಶಾಸಕಿ ಶಾರದಾ ... ಮಗ ರವಿಕುಮಾರನ ಕಾಲುಹಿಡಿಯಬೇಕಾಗಿ ಬಂದಿತ್ತು. ರವಿಕುಮಾರ್ ಶೆಟ್ಟಿ ತಾನೇ ನಿಲ್ಲಿಸಿ... ಸ್ವಪಕ್ಷದ ಅಭ್ಯರ್ಥಿಗೆ ದ್ರೋಹ ಮಾಡಿ ಸೂರಜ್‌ನ ಹೆಂಡತಿ ಗೆಲ್ಲಿಸಲು ನಡೆ... ಕಿತಾಪತಿಗೆ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ... ತನಗೆ ಸೂರಜ್‌ನ ದೀವರ ಪಡೆ... ನೆರವಾಗುತ್ತದೆಂಬ ದೂ(ದು)ರಾಲೋಚನೆಯೇ ಪ್ರೇರಣೆ!

ರವಿಕುಮಾರ್‌ಗೆ ಅಷ್ಟೇ ಅ... ಸ್ವತಃ ಸೂರಜ್‌ಗೂ ಗೊತ್ತಿದೆ, ಬಿಜೆಪಿಯ ಅನಂತ್ಮಾಣಿ ತನಗೆ ... ಸಲ ಟಿಕೆಟ್ ತಪ್ಪಿಸುತ್ತಾನೆಂಬುದು... ಆದರೂ ಆತ ರಾಜ್ಯ ಯುವ ಬಿಜೆ... ಅಧ್ಯಕ್ಷನೂ ಜಾತಿಬಂಧುವೂ ಆಗಿರುವ ಕಾರ್ಕಳದ ಶಾಸಕ ಸುನಿಲ್‌ಕುಮಾರ್ ಮೂ... ಸೋನಿ ಲಾಬಿ ಮಾಡಿಸುತ್ತಿದ್ದಾನೆ. ಯಡ್ಡಿಯ ಮೂಲದ ಗಾಯತ್ರಿ ಗೌಡ ಎಂಬ ಮಹತ್ವಾಕಾ... ಕನ್ಯಾಮಣಿ ಈ ಸಲ ತನಗೆ ಬಿಜೆಪಿ ಟಿಕೆಟ್ ಗ... ಎಂದು ಕನಸು ಕಾಣುತ್ತಿದ್ದಾರೆ. ಕಾಂಗ್ರೆಸ್‌ಲ್ಲಿ ... ಅಧಿಕಾರ ಅನುಭವಿಸಿ ತೃಪ್ತಿಯಾಗದೇ ಎಮ್ಮೆಲ್ಲೆ ... ತೆವಲಿಂದ ಬಿಜೆಪಿಗೆ ಹೋಗಿರುವ ಗಾಯತ್ರಿ ಗ... ಈ ಪುರೋಹಿತಶಾಹಿ ಪಕ್ಷದಲ್ಲಿ ಟಿಕೆಟ್ ಸಿಗು... ಕಷ್ಟ-ಕಷ್ಟ!

ಸಿಜರೀನ್ ಡಾಕ್ಟರ್ ಎಂದೇ ಕುಮಟೆಯಲ್ಲಿ ಸುಪ್ರಸಿದ್ಧರಾಗಿರುವ ಡಾ. ಜಿ.ಜಿ. ಹೆಗಡೆ ಕಾಂ... ಹಿರಿಯರು ಒಂದು ಪುಟಗೋಸಿ ಕಾರ್ಪೊರೇ... ಗೂಟದ ಕಾರೂ ಕೊಡಲಿಲ್ಲವೆಂದು ಬಿಜೆಪಿಗೆ ಹೋಗಿದ್ದಾರೆ. ಮನುಶಾಸ್ತ್ರಕ್ಕೆ ಬದ್ಧನಾಗಿರುವ ಡಾ. ಹೆಗಡೆಗೆ ಕಾಂಗ್ರೆಸ್ ಸಂಸ್ಕೃತಿ ಹೇಗೆ ಒಗ್ಗೀತು? ಯಾರೋ ಮೈತೊಳೆದಿಟ್ಟ ಗೋಮಿ... ಆರತಿ ಎತ್ತುವ ಈ ರಾಮಚಂದ್ರಾಪುರ ಮಠ... 'ಗೋಕಿಂಕರ' ಧಾರವಾಡದ ಎಂಪಿ ಪ್ರಹ್ಲಾದ ಜೋಷಿ, ರಾಘುಸ್ವಾಮಿ, ವಿಷ ಭಟ್ಟನ ತಾಕತ್ತು... ನಂಬಿಕೊಂಡಿದ್ದಾರೆ. ಬಿಜೆಪಿಯಲ್ಲೂ ಕುಮಟಾ... ಹವ್ಯಕ ಬ್ರಾಹ್ಮಣರಿಗೇ ಯೋಗ್ಯ ಕ್ಷೇತ್ರ ಎಂಬ ಮಂತ್ರವೂ ಮುನ್ನೆಲೆಗೆ ಬಂದಿವೆ. ಅನಂತ್ಮಾಣಿ... ತನಗಿಲ್ಲಿ ಚಾನ್ಸ್ ಇಲ್ಲವೆಂದು ಖಾತ್ರಿಯಾದರೆ ಜಾತಿಬಂಧು ಡಾ. ಹೆಗಡೆ ಪರವೇ ನಿಲ್ಲುವ ... ಗೋಚರಿಸುತ್ತಿದೆ.

ಎಮ್ಮೆಲ್ಲೆಯಾಗಿ ಎದುರಾಳಿ ಕಾಗೇರಿ ಮಂತ್ರಿಯಾಗದಂತೆ ಮಾಡಬೇಕೆಂಬ ಹಠಕ್ಕೆ ಬಿದ್ದಿರುವ ಅನಂತ್ಮಾಣಿ ಅಳೆದೂ-ಸುರಿದೂ ಅಂತಿಮವಾಗಿ ಆಯ್ಕೆ ಮಾಡಿಕೊಂಡಿರುವುದು ಕುಮಟಾ ಕ್ಷೇತ್ರ! ಆತನ ಲಿಸ್ಟ್‌ನಲ್ಲಿ ಶಿರಸಿ, ಭ... ಯಲ್ಲಾಪುರ ಮತ್ತು ಕುಮಟಾ ಇತ್ತು. ಶಿರಸಿ ಹಾಲಿ ಶಾಸಕ ಕಾಗೇರಿಯಿಂದ ಕಸಿದುಕೊಳ್ಳು... ಅಷ್ಟು ಸುಲಭವಲ್ಲ ಎಂಬುದು ಮನದಟ್ಟಾದ... ಹವ್ಯಕರೇ ಹೆಚ್ಚಿರುವ ಪಕ್ಕದ ಯಲ್ಲಾಪುರದ ನಷ್ಟದ ಲೆಕ್ಕಾಚಾರ ಮಾಣಿ ಹಾಕಿದ್ದ. ಆದರೆ ಕಾಂಗ್ರೆಸ್ ಶಾಸಕ-ಸ್ವಜಾತಿ ಬಂಧು ಶಿವರಾಮ... ಹೆಬ್ಬಾರ್‌ಗೆ ತೊಂದರೆ ಕೊಡುವುದು ಬೇಡ; ಹೇಗಿದ್ದರೂ ಕಾಗೇರಿಗೂ ವೈರಿ; ತನಗೆ ಲೋ...


ನಾಗ ಬಿಜೆಪಿ ಅಭ್ಯರ್ಥಿಯಾದರೆ ಆತನ ಸೋಲಿಸುವ ಸ್ಕೆಚ್ ಬಿಜೆಪಿಯಲ್ಲೇ ತಯಾರಾಗುತ್ತಿದೆ! ಮಯೂರನ ಅಪ್ಪ ಬಿಜೆಪಿಗೆ ತನು-ಮನ-ಧನ ಅರ್ಪಿಸಿಕೊಂಡಿದ್ದ. ಬದುಕಿದ್ದರೆ ಆತನೇ ಬಿಜೆಪಿ ಅಭ್ಯರ್ಥಿಯಾಗುವ ಚಾನ್ಸೂ ಇತ್ತು. ಇಂಥ ಅತಿರಥ ಮಹಾರಥನ ಮಗ ಮಯೂರ ಸಹಜವಾಗೇ ಅಭ್ಯರ್ಥಿಯಾಗುವ ಆಸೆಯಲ್ಲಿದ್ದ. ಇದಕ್ಕೆ ಕಾಗೇರಿ ನೀರು-ಗೊಬ್ಬರ ಹಾಕಿ ಪೋಷಿಸುತ್ತಲೂ ಇದ್ದ. ಈತ ಕಾಗೇರಿ ಶಿಷ್ಯನೆಂಬ ಸಿಟ್ಟು ಅನಂತ್ಮಾಣಿಗೆ. ಅಂಕೋಲಾ ಬಿಜೆಪಿ ಮೇಲೆ ಬಿಗಿಹಿಡಿತ ಹೊಂದಿರುವ ಮಯೂರನ ಪಟ್ಟಿಗೆ

ಎಸ್ ರಾಜಾಧಿರಾಜ ದೇವೇಗೌಡ ಮತ್ತು ಯುವರಾಜ ಸ್ವಾಮಿ 2018ರ ಅಸೆಂಬ್ಲಿ ಎಲೆಕ್ಷನ್ ತಂತ್ರಗಾರಿಕೆ ಶುರು ಡಿದ್ದಾರೆ. ಈ ಬಾರಿ ಎಲ್ಲ ಕ್ಷೇತ್ರಗಳಲ್ಲಿ ಜೆಡಿಎಸ್ ಗಳನ್ನು ಹಾಕಿ ವ್ಯರ್ಥ ಕಸರತ್ತು ಮಾಡುವ ಬದಲಿಗೆ ಗೆಲ್ಲುವ ಇರುವ 120 ಕ್ಷೇತ್ರದಲ್ಲಷ್ಟೇ ಹೋರಾಟ ನಡೆಸಲಿದೆಯಂತೆ! ಉತ್ತರ ಕನ್ನಡದ ಶಿರಸಿ ಮತ್ತು ಕುಮಟಾ ಎರಡೇ . ಹಳಿಯಾಳವಲ್ಲಿ ರಮೇಶ್ ಎಂಬ ಆಗಂತುಕ ಕಸರತ್ತು ದ್ದಾನಾದರೂ ವೈತ್ಯ ದೇಶಪಾಂಡೆ ಜತೆ ಕಾದಾಡುವ ಕಸುವು ಎಂಬುದು ಕುಮ್ಮಿಗೆ ಖಾತ್ರಿಯಾಗಿದೆ.

ಸಿಎಂ ರಾಮಕೃಷ್ಣ ಹೆಗಡೆಜೀಯ ದಾಯಾದಿ ಮೊಮ್ಮಗ ಹೆಗಡೆ ಸ್ವಂತ ವರ್ಚಸ್ಸಿನಿಂದ ಶಿರಸಿಯಲ್ಲಿ ಜೆಡಿಎಸ್‌ಗೆ ಉಸಿರು ಕೊಂಡಿದ್ದಾರೆ. ಕುಮಟಾದಲ್ಲಿ ಜೆಡಿಎಸ್ ಬಾವುಟ ಹಾರಾಡುತ್ತಿದ್ದರೆ ಜಿ ಶಾಸಕ ದಿನಕರ ಶೆಟ್ಟಿಯ ತಾಕತ್ತೇ ಕಾರಣ. ಈ ಶಶಿಭೂಷಣ ನಕರ ಶೆಟ್ಟಿಗೆ ಪಾರ್ಟಿ ವತಿಯಿಂದ ಬರುವ ಮತಗಳೇ ಇಲ್ಲ. ನವರಿಗೆ ಬಿಜೆಪಿಯತ್ತ ಸೆಳೆತ ಶುರುವಾಗಿದೆ. ಶಶಿಭೂಷಣ ಹೆಗಡೆ ಲ್ಲಿದ್ದಾಗ ಅನಂತ್ಮಾಣಿ ಕೊಟ್ಟ ಕಾಟ ಹೇಳತೀರದು. ಇದನ್ನು ಳ್ಳಲಾಗದೇ ಆತ ಜೆಡಿಎಸ್‌ಗೆ ಸೇರಿದ್ದ. ಮಂತ್ರಿಯಾಗಿದ್ದ ಕಾಗೇ- ಜಾತಿ ಮಾಣಿ ಬೆಳೆದರೆ ತನಗೆ ಪ್ರತಿಸ್ಪರ್ಧಿಯಾಗುತ್ತಾನೆಂದು ಶಶಿಗೆ ಹಾಕಿದ್ದರು.

ಕಾಗೇರಿ–ಶಶಿ ಬದ್ಧವೈರಿಗಳು. ವೈರಿಯ ವೈರಿ ಗೆಳೆಯನೆಂಬ

ಜೆಡಿಎಸ್ ತಂತ್ರಗಾರಿಕೆ



ರಾಜಕಾರಣದ ಸಯಮದಂತೆ ಅನಂತ್ಮಾಣಿಗೆ ಈಗ ಶಶಿ ಮೇಲೆ ಮಮತೆ ಹೆಚ್ಚಾಗಿದೆ. ವಾರಕ್ಕೆರಡು ಬಾರಿ ಇವರಿಬ್ಬರೂ ಫೋನಲ್ಲಿ ಲಲ್ಲೆಗರೆಯುತ್ತಾರೆ. "ನಂಗೆ ಕುಮಟಾ ಸೀಟು ಕೊಡಿಸಿ.... ಗೆದ್ದು ತೋರಿಸ್ತೇವೆ..." ಎಂದು ಶಶಿ ಸಂಸದ ಅನಂತ್ಮಾಣಿಯಲ್ಲಿ ಗೋಗರೆಯುತ್ತಿದ್ದಾನೆ. ಅನಂತ್ಮಾಣಿ "ಬೇಡ ನೀನು ಅಲ್ಲೇ ಇರು.... ಕಾಗೇರಿ ವಿರುದ್ಧ ಸ್ಪರ್ಧೆ ಮಾಡು. ನಿಂಗೆ ಹೆಲ್ಪ್ ಮಾಡ್ತೇನೆ..." ಎಂದು ಹುರಿದುಂಬಿಸುತ್ತಿದ್ದಾನೆ.

ಇದೇ ಹೊತ್ತಿನಲ್ಲಿ ಅನಂತ್ಮಾಣಿ ಕುಮಟೆಯ ದಿನಕರ ಶೆಟ್ಟಿಗೆ ಮಾತ್ರ ಜೆಡಿಎಸ್ ತೊರೆದು ಬಿಜೆಪಿ ಬರುವಂತೆ ಹೇಳುತ್ತಿದ್ದಾನೆ. ಆತ ಪಕ್ಷಕ್ಕೆ ಬಂದರೆ ತನಗೆ ಕುಮಟೆಯಲ್ಲಿ ಶಾಸಕನಾಗಲು ಅನುಕೂಲವೆಂಬ ಗಣಿತ ಮಾಣಿದು. ದಿನಕರ ಬಿಜೆಪಿ ಸೇರಲು ಸರ್ವಸಿದ್ಧತೆ ಮಾಡಿಕೊಂಡಿದ್ದಾರೆ. ಇದು ಕುಮ್ಮಿಗೆ ಗೊತ್ತಾಗಿದೆ. "ದಿನಕರ ಶೆಟ್ಟಿ ಬಿಜೆಪಿಗೆ ಹೋಗ್ಲಿ... ಅವ್ನ ಹ್ಯಾಂಗೆ ಸೋಲಿಸಬೇಕಂತ ನಂಗೆ ಗೊತ್ತಿದೆ.... ನೋಡ್ತಾ ಇರಿ..." ಎಂದು ಕುಮ್ಮಿ ಕುಮಟಾದ ಜೆಡಿಎಸ್ ಕಾರ್ಯಕರ್ತರಿಗೆ ಹೇಳಿಕಳಿಸಿದ್ದಾರೆ. ಜಿಪಂ ಸದಸ್ಯ– ಉತ್ತರ ಕನ್ನಡದ ಜನಾರ್ದನ ರೆಡ್ಡಿ ಎಂಬ ಬಿರುದಾಂಕಿತ ಪಾಟೀಲ್ ನಾಯ್ಕ ಎಂಬ ಚಿಪ್ಪಿ ಕಳ್ಳ ಜೆಡಿಎಸ್ ಕ್ಯಾಂಡಿಡೇಟಾಗಿ [illegible]

ಆದರೆ ಕುಮ್ಮಿ [illegible] ಕುಮಟಾದ ಜೆಡಿಎಸ್ [illegible] ಬೇರೆ. ದಿನಕರ ಶೆಟ್ಟಿ ಬಿಜೆಪಿ ಕ್ಯಾಂಡಿಡೇಟಾದರೆ ಆತನ ಸೋಲಿಸಿ ಮನೆಗಟ್ಟುವ ಪಣಕ್ಕೆ ಕುಮ್ಮಿ ಬಿದ್ದಿದ್ದಾರೆ. ಶಶಿಭೂಷಣ ಹೆಗಡೆಯನ್ನು ಕುಮಟಾದಲ್ಲಿ ಜೆಡಿಎಸ್ ಕ್ಯಾಂಡಿಡೇಟಾಗಿಸಿದರೆ ಬಹುಸಂಖ್ಯಾತ ಬ್ರಾಹ್ಮಣರ ಮತ ಬರುತ್ತದೆ. ಜತೆಗೆ ಬ್ರಾಹ್ಮಣರಷ್ಟೇ ಬಲಾಢ್ಯರಾದ ದೀವರನ್ನು ದಿನಕರ ಶೆಟ್ಟಿ ಎದುರು ಹಾಕಿಕೊಂಡಿರುವುದರಿಂದ ಆ ಮತಗಳೂ ಬರುತ್ತವೆ. ಮುಸ್ಲಿಮ್, ಕ್ರಿಶ್ಚಿಯನ್ ಮತ ಗೆಲ್ಲುವ ಅಭ್ಯರ್ಥಿಯೆಂದು ಶಶಿಗೇ ಸಿಗುತ್ತದೆ. ಆಗ ಅನಾಯಾಸವಾಗಿ ಜೆಡಿಎಸ್ ಕುಮಟೆಯಲ್ಲಿ ಗೆಲ್ಲುತ್ತದೆಂಬ ಗಣಿತ ಕುಮ್ಮಿ ಗ್ಯಾಂಗಿನದು.

ದಿನಕರ್‌ಗೆ ಬಿಜೆಪಿ ಟಿಕೆಟ್ ಕೊಡದೆ ಬಳಸಿಕೊಂಡರೆ ಆಗ ಪ್ರದೀಪ್ ನಾಯಕ್ ಜೆಡಿಎಸ್ ಹುರಿಯಾಳಾಗುತ್ತಾನೆ. ಶಶಿ ಶಿರಸಿಯಲ್ಲೇ ಕಸರತ್ತು ಮಾಡಬೇಕಷ್ಟೇ! ಇನ್ನು ಒಂದೂ ಮುಕ್ಕಾಲು ವರ್ಷದಲ್ಲಿ ಏನೇನಾಗುತ್ತಾದೋ? ಈಶ್ವರಿ ವಿನೋಧಕ್ಕೆ ಮಣಿದು ಹೈಕಮಾಂಡ್ ಯಡ್ಡಿ ಹಲ್ಲೇ ಕಿತ್ತುಬಿಟ್ಟರೆ ಜಿಲ್ಲೆಯಲ್ಲಿ ಅನಂತನ ಪಡೆಯ ಸ್ಥಿತಿ ಅಯೋಮಯವಾಗುತ್ತದೆ. ಸದ್ಯಕ್ಕಂತೂ ಜಿಲ್ಲಾ ಬಿಜೆಪಿಯಲ್ಲಿ ಅನಂತನೇ ಒಕ್ಕಲ! ಕಾಗೇರಿ ಕೆರಳಿದರೆ ಕ್ಲೈಮ್ಯಾಕ್ಸ್!!

ನಲ್ಲಿ ಹೆಲ್ಪ್ ಮಾಡಿದ್ದಾನೆ ಎಂಬ ಹಲವು ಾರಣದಿಂದ ಯಲ್ಲಾಪುರ ಮಾಣಿ ನೆ.

ಳದ ದೀವರ ಬಗ್ಗಾತನಿಗೆ ಭರವಸೆ ವ್ಯಕರೂ ಹೆಚ್ಚಿಲ್ಲ. ಮುಸ್ಲಿಮರೂ ದೊಡ್ಡ ಲ್ಲಿದ್ದಾರೆ. ಡಾ. ಚಿತ್ತರಂಜನ್ ಕೊಲೆ ತನಿಖೆ ರಿಯಾಗಿ ಮಾಡಿಸಿಲ್ಲ ಎಂಬ 'ಅನುಮಾನ' ಲ್ಲಿದೆ. ಹೀಗಾಗಿ ಇದು ಸುರಕ್ಷಿತವಲ್ಲವೆಂಬ ನಕ್ಕೆ ಬಂದ ಅನಂತ್ಮಾಣಿಗೆ ಅಂತಿಮವಾಗಿ ಯಕವಾಗಿ ಕಂಡಿದ್ದು ಕುಮಟಾ ಒಂದೇ! ಡಜನ್‌ಗಟ್ಟಲೆ ಟಿಕೆಟ್ ಆಕಾಂಕ್ಷಿಗಳ ಲ್ಲಿ ತಾನು ರಾಜಿ ಅಭ್ಯರ್ಥಿಯಾಗಿ ಬಹುದೆಂಬ ಯೋಚನೆ ಮಾಣಿಯದು. ಜಾತಿ ಹವ್ಯಕರು ಗಣನೀಯವಾಗಿದ್ದಾರೆ. ಲೀಡರ್ ದಿನಕರ ಶೆಟ್ಟಿಯನ್ನು ಾದರೂ ಆಮಿಷದಿಂದ ಬಿಜೆಪಿಗೆ ಂಡರೆ ತನ್ನ ಗೆಲುವು ನಿರಾಯಾಸ ಮಾಣಿ ಭಾವಿಸಿದ್ದಾನೆ. ಎಂಪಿಗಳಿಗೆ ಅಸೆಂಬ್ಲಿ ೂಡಕೂಡದೆಂಬ ಸೂತ್ರ ಹೈಕಮಾಂಡ್ ತುಂಬಲು ಯಡ್ಡಿ–ಶೋಭಾ ಕರಂದ್ಲಾಜೆ ಗಳು ಯಶಸ್ವಿಯಾದರೆ ಅನಂತ್ಮಾಣಿಯ ಕನಸಿಗೆ ಕಲ್ಲು ಬೀಳೋದು ಗ್ಯಾರಂಟಿ! ಟಾದಲ್ಲಿ ಬಿಜೆಪಿ ಕ್ಯಾಂಡಿಡೇಟ್ ಳ ಸಂಖ್ಯೆ ಹೆಚ್ಚಿಸಿ ಅವರ ಕಿತ್ತಾಟದ ಪಡೆಯುವ ಸ್ಕೆಚ್ ಹಾಕಿರುವ ಮಾಣಿ ಾಸಕ ದಿನಕರ ಶೆಟ್ಟಿಯನ್ನು ಜೆಡಿಎಸ್‌ನಿಂದ ಂಡು ಬರಲು ಪ್ರಯತ್ನಿಸುತ್ತಿದ್ದಾನೆ. ರ ಶೆಟ್ಟಿ ಕ್ಷೇತ್ರದ ಮೂಲೆಮೂಲೆ ಿರುವ ಜನನಾಯಕನೇನೋ ನಿಜ. ಣದ ಹಪಾಹಪಿ– ಭ್ರಷ್ಟಾಚಾರ–









ಂದಾಗಿ ಆತನಿಗೀಗ ಜೆಡಿಎಸ್‌ನಂಥ ಯಿಲ್ಲದ ಪಾರ್ಟಿಯಿಂದ ಮತ್ತೆ ಗೆದ್ದು ಸ್ಥೈರ್ಯವಿಲ್ಲದಾಗಿದೆ. ಹಾಗಾಗಿ ಆತ ಮಂತ್ರಿ ಸದಾನಂದಗೌಡರ ಪ್ರಭಾವದಿಂದ ಬರಲು ಹವಣಿಸುತ್ತಿದ್ದಾನೆ. ಆದರೆ ಅಸೆಂಬ್ಲಿ ಖಾತ್ರಿಯಾಗದೇ ಆತ ಜೆಡಿಎಸ್ ಬಿಡಲಾರ. ಅಷ್ಟೂ ಟಿಕೆಟ್ ಆಕಾಂಕ್ಷಿಗಳಿಗಿಂತ ಶೆಟ್ಟಿ ಸ್ಟ್ರಾಂಗ್ ಎಂಬುದು ಪಕ್ಕಾ. ಆದರೆ ಯ ಶಾಸಕಗಿರಿ ಕಟಿಪಿಟಿ ದಿನಕರ್‌ಗೆ ಾಗಿಲ್ಲಿ ಎಡವಿ ಬೀಳುವಂತೆ ಮಾಡಿದೆ. ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲೇ ಫೇಮಸ್ ಎಂದರೆ ನಾಗರಾಜ ನಾಯಕ್ ದ್ದಂಡ ಭ್ರಷ್ಟ ನಿವೃತ್ತ ಅರಣ್ಯಾಧಿಕಾರಿ! ಆಗಿದ್ದಾತ. ಹಾಸನದಲ್ಲಿರುವಾಗ ಇಲಾಖೆಯ ಕೂಲಿಗಾಗಿ ಕಾಳು

ಮಾರಿ ತಿಂದು ಐದಾರು ತಿಂಗಳು ಜೈಲು ಪಾಲಾಗಿದ್ದಾತ. ಈತ ಅದ್ಯಾವ ಪರಿ ಸರ್ಕಾರಿ ಹಣ ಹೊಡೆದಿದ್ದಾನೆಂದರೆ ಎರಡೆರಡು ಸಾಫ್ಟ್‌ವೇರ್ ಕಂಪನಿ ಬೇನಾಮಿಯಾಗಿ ಬೆಂಗಳೂರಲ್ಲಿ ತೆರೆದಿದ್ದ. ಶೋಭಾ ಕರಂದ್ಲಾಜೆ–ಯಡ್ಡಿ ಟಿಕೆಟ್ ಭರವಸೆ ಕೊಟ್ಟದ್ದಾರೆನ್ನುತ್ತ ಬಿಜೆಪಿ ಸೇರಿರುವ ಈ 'ಅಕ್ಕಿಕಳ್ಳ' ಕ್ಷೇತ್ರದಾದ್ಯಂತ ಲಕ್ಷ–ಲಕ್ಷ ರೂ. ದಾನ ಮಾಡುತ್ತಿದ್ದಾನೆ. 'ಬೆಳಕು' ಎಂಬ ಸಮಾಜ ಸೇವಾ ಟ್ರಸ್ಟ್ ಅಂಗಡಿ ತೆರೆದು ಕುಮಟೆಯಲ್ಲಿ ಕುಂತಿರುವ ಈ ನಾಗರಾಜ್ ನಾಯಕ್ ಎಲೆಕ್ಷನ್‌ಗಾಗಿ ಮಾಡುತ್ತಿರುವ ಗಿಮಿಕ್ ನೋಡಿ ಜನರು ಬಿದ್ದು-ಬಿದ್ದು ನಗುತ್ತಿದ್ದಾರೆ. ಜಿಲ್ಲಾ ಬಿಜೆಪಿ ಕಿಂಗ್ ಅನಂತ್ಮಾಣಿಗಂತೂ ಈ ನಾಗನಿಗೆ ಟಿಕೆಟ್ ಕೊಡುವ ಮನಸ್ಸು ಒಂಚೂರೂ ಇಲ್ಲ. ಬಿಜೆಪಿಯೊಳಗಿನ 'ಗರ್ಭಗುಡಿ' ರಾಜಕಾರಣದಿಂದ ಈಗೀಗ ಹತಾಶನಾಗಿರುವ ನಾಗನಿಗೂ ಟಿಕೆಟ್ ಸಿಗುವ ನಂಬಿಕೆ ಇಲ್ಲದಾಗಿದೆ, ಪಾಪ!

ಶಿರಸಿ ಹಾಗು ಹಳಿಯಾಳದ ಬಿಜೆಪಿಯಲ್ಲಿ ಟಿಕೆಟ್ ತುರುಸು ಇಲ್ಲ. ಕಾಗೇರಿಗೆ ಶಿರಸಿ ಟಿಕೆಟ್ ತಪ್ಪಿಸುವ ತಾಕತ್ತು ತನಗಿಲ್ಲವೆಂಬ ಅರಿವು ಅನಂತ್ಮಾಣಿಗಿದೆ. ಆದರೂ ತನ್ನ ಕಮ್ಯುನಲ್ ಕ್ರಿಮಿನಲ್ ಕಾರ್ಯಾಚರಣೆಗಳ ಪುರಾತನ ಮಿತ್ರ ಕೃಷ್ಣ ಎಸಳೆ ಹೆಸರನ್ನು ಮಾಣಿ ಕೇಶವಕೃಪಾದಲ್ಲಿ- ಯಡ್ಡಿ ತಲೆಯಲ್ಲಿ ತೇಲಿ ಬಿಡುತ್ತಲೇ ಇದ್ದಾನೆ. ಹಳಿಯಾಳದಲ್ಲಿ ಜನತಾದಳದಿಂದ ವಲಸೆ ಬಂದಿರುವ ಮಾಜಿ ಶಾಸಕ ಸುನಿಲ್ ಹೆಗಡೆ ಬಿಟ್ಟರೆ ಬೇರೆ ಗತಿ ಬಿಜೆಪಿಗಿಲ್ಲ. ಯಲ್ಲಾಪುರದಲ್ಲಿ ಮಾಜಿ ಶಾಸಕ ವಿ.ಎಸ್. ಪಾಟೀಲ್‌ಗೆ ಮತ್ತೆ ಚಾನ್ಸ್ ಸಿಗಬಾರದೆಂಬ ಇರಾದೆ ಅನಂತ್ಮಾಣಿಯದು. ಈ ಪಾಟೀಲರ ಕಂಡರೆ ಮಾಣಿಗೆ ಹಿಂದಿನಿಂದಲೂ ಆಗದು. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಆತನನ್ನು ಸೋಲಿಸಲು ಮಾಣಿ ದೊಡ್ಡ ತಂತ್ರವನ್ನೇ ಮಾಡಿ ಯಶಸ್ವಿಯೂ ಆಗಿದ್ದಾನೆ.

ಪಾಟೀಲರಿಗೆ ಈ ಬಾರಿ ಟಿಕೆಟ್ ತಪ್ಪಿಸುವ ಕಿತಾಪತಿಗೆ ಕೈಹಾಕದಂಥ ಸಂದಿಗ್ಧದಲ್ಲಿ ಮಾಣಿ ಬಿದ್ದಿದ್ದಾನೆ. ಈ ಪಾಟೀಲ ಸಾಕ್ಷಾತ್ ಯಡ್ಡಿ ಮಹಾರಾಜ್‌ರ ಅತ್ಯಾಪ್ತ ಜಾತಿಬಂಧು, ಹೀಗಾಗಿ ಯಡ್ಡಿ ಎದುರಾಡುವ ದಮ್ ಮಾಣಿಗಿಲ್ಲದಾಗಿದೆ. ಆದರೆ ನಿಧಾನಕ್ಕೆ "ಈ ಪಾಟೀಲ್‌ಗೆ ಗೆಲ್ಲುವ ಯೋಗ್ಯತೆಯಿಲ್ಲ; ಬದಲಿ ಸಮರ್ಥ ಕ್ಯಾಂಡಿಡೇಟ್‌ನ್ನು ತಯಾರು ಮಾಡೋಣ... ಸಾರ್...." ಎಂದು ಯಡ್ಡಿ ಕಿವಿಯೂದುವ ಬೇಧೋಪಾಯ ಅನಂತ್ಮಾಣಿ ಮಾಡುತ್ತಿದ್ದಾನೆ. ಕಳೆದ ವಿಧಾನ ಪರಿಷತ್ ಎಲೆಕ್ಷನ್‌ನಲ್ಲಿ ಬಂಡಾಯವೆದ್ದು ಸ್ಪರ್ಧಿಸಿ ಕಾಂಗ್ರೆಸ್‌ನಿಂದ ಹೊರದಬ್ಬಿಸಿಕೊಂಡಿರುವ ರವೀಂದ್ರನಾಥ ಎನ್. ನಾಯ್ಕ ಎಂಬ ಅರಣ್ಯ ಅತಿಕ್ರಮಣದಾರರ ಸಂಘಟಕ ಅನಂತ್ಮಾಣಿಗೆ ದುಂಬಾಲು ಬಿದ್ದಿದ್ದಾನೆ. ಈ ರವಿ–ಅನಂತ್ಮಾಣಿ ಕತ್ತಲೆಯ ಮಿತ್ರರೆಂದೇ ಶಿರಸಿ ಸೀಮೆಯಲ್ಲಿ ಜನಜನಿತ. ಆದರೆ ರವಿ ಕಂಡರೆ ಶಾಸಕ ಹೆಬ್ಬಾರ್‌ಗೆ ಆಗದು. ರವಿ ಬಿಜೆಪಿ ಅಭ್ಯರ್ಥಿಯಾದರೆ ತನಗೆ ಗಂಡಾಂತರ ಎಂದರಿತಿರುವ ಹೆಬ್ಬಾರ್‌ಗೆ ಕಾಂಗ್ರೆಸ್ ಟಿಕೆಟ್ ಸಿಗುವುದೇ ಖಾತ್ರಿ ಇಲ್ಲದಂತಾಗಿದೆ.

ದೇಶಪಾಂಡೆಯನ್ನು ಅಡಿಗಡಿಗೆ ಅಟಕಾಯಿಸಿ ಆತನ ಕೆಂಗಣ್ಣಿಗೆ ಹೆಬ್ಬಾರ್ ತುತ್ತಾಗಿದ್ದಾರೆ. ಎಚ್.ಟಿ. ಪಾಟೀಲ್ ಎಂಬ ರಂಗ್‌ರಂಗೀಲಾ ಮರಾಠ ಮುಖಂಡನನ್ನು ಹೆಬ್ಬಾರ್ ಎದುರಾಗಿ ದೇಶಪಾಂಡೆ ತಯಾರು ಮಾಡುತ್ತಿದ್ದಾರೆ. ಕಳೆದ ಬಾರಿಯೇ ಕಾಂಗ್ರೆಸ್ ಕ್ಯಾಂಡಿಡೇಟಾಗಲು ಹವಣಿಸಿದ್ದ ಪಾಟೀಲ್‌ಗೆ ಈ ಬಾರಿ ಟಿಕೆಟ್ ಕೊಡಿಸಲು ದೇಶಪಾಂಡೆ ಪ್ರಯತ್ನ ನಡೆಸಿದ್ದಾರೆ. ಹೀಗಾಗಿ ಹೆಬ್ಬಾರ್ ಬಿಜೆಪಿ ಕ್ಯಾಂಡಿಡೇಟಾಗುವ ಕರಾಮತ್ತು ಮಾಡುತ್ತಿದ್ದಾರೆ. ಹೆಬ್ಬಾರ್ ಕಾಂಗ್ರೆಸ್ ಕ್ಯಾಂಡಿಡೇಟಾದರೆ ರವಿಗೆ ಬಿಜೆಪಿ ಟಿಕೆಟ್ ಅನಂತ್ಮಾಣಿ ಕೊಡಿಸಲು ಸಾಧ್ಯವೇ ಇಲ್ಲ. ಹೆಬ್ಬಾರ್–ಮಾಣಿ ದೋಸ್ತಿಯ ಮಹಿಮೆಯೇ ಹಾಗಿದೆ. ಅಕಸ್ಮಾತ್ ಪಾಟೀಲ್ ಕಾಂಗ್ರೆಸ್ ಅಭ್ಯರ್ಥಿಯಾದರೆ ಹೆಬ್ಬಾರ್ ಬಿಜೆಪಿ ಹುರಿಯಾಳು. ವಿ.ಎಸ್. ಪಾಟೀಲ್ ಬಿಜೆಪಿ ಅಭ್ಯರ್ಥಿಯಾಗುವ ಯೋಗ ಬರಬೇಕೆಂದರೆ ಹೆಬ್ಬಾರರೆ ಕಾಂಗ್ರೆಸ್ ಕ್ಯಾಂಡಿಡೇಟಾಗಬೇಕು. ಆಗ ಮತ್ತೆ ಅನಂತ್ಮಾಣಿ ವಿ.ಎಸ್. ಪಾಟೀಲರ ಸೋಲಿಸಲು, ಅಂದರೆ ಆಪ್ತ ಹೆಬ್ಬಾರ್ ಮಾಮನ ಗೆಲ್ಲಿಸಲು ಶಕ್ತಿಮೀರಿ ಸಾಹಸ ಮಡೋದಂತೂ ಖಂಡಿತ.

ಭಟ್ಕಳ ದೀವರ ಮೀಸಲು ಕ್ಷೇತ್ರ ಎಂದೇ ಜನಜನಿತ. ಆದರೆ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಇಲ್ಲೊಂದು ಪವಾಡವಾಯ್ತು. ಮೀನುಗಾರ ಸಂಕುಲದ ಮಂಕಾಳು ವೈದ್ಯ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ಅಚ್ಚರಿ ಮೂಡಿಸಿದ್ದ. ಈ ಗೆಲುವು ಸ್ವತಃ ಮಂಕಾಳನನ್ನೇ ಬೆಚ್ಚಿಬೀಳಿಸಿತ್ತು. ದೀವರ ಏಕಸ್ವಾಮ್ಯದ ವಿರುದ್ಧ ಹಿಂದೂ ಸಮುದಾಯದ ದೀವರೇತರರನ್ನು ಮಂಕಾಳು ಧ್ರುವೀಕರಣ ಮಾಡುವ ಸ್ಟ್ರೇಟಜಿ ಯಶಸ್ವಿಯಾಗಿ [illegible]ನಿಂದ ಸ್ಪರ್ಧಿಸಿದ್ದ ಇನಾಯಿತುಲ್ಲಾ ಸ್ವಬಂತಿ ಮುಸ್ಲಿಮರ ಓಟನ್ನೆಲ್ಲಾ ಬುಟ್ಟಿಗೆ ಹಾಕಿಕೊಂಡಿದ್ದು ಕಾಂಗ್ರೆಸ್‌ಗೆ ಮಾರಕವಾಯ್ತು. ಕೆಜೆಪಿಯಿಂದ ಸ್ಪರ್ಧಿಸಿದ್ದ ಮಾಜಿ ಮಂತ್ರಿ ಶಿವಾನಂದ ನಾಯ್ಕ ಬಿಜೆಪಿಗೆ ಮುಳುವಾಗಿದ್ದರು.

ಮಂಕಾಳು ಅಚಾನಕ್ ಗೆದ್ದ ಮರುಗಳಿಗೆಯೇ ದೀವರೆಲ್ಲ ಮುಂದಿನ ಬಾರಿ ಭಟ್ಕಳದಲ್ಲಿ ತಮ್ಮವನೇ ಶಾಸಕನಾಗಬೇಕೆಂಬ ಶಪಥ ಮಾಡಿದ್ದರು. ಆಗಿಂದಲೇ ವ್ಯವಸ್ಥಿತವಾಗಿ ಸಂಘಟಿತರಾಗತೊಡಗಿದ್ದರು. ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಅನಂತ್ಮಾಣಿ ಹವಣಿಸುತ್ತಿದ್ದಾನೆ. ಶೂದ್ರರ ದೀವರನ್ನೇ ಮೂರ್ನಾಲ್ಕು ಗುಂಪುಗಳಾಗಿ ಒಡೆದು ಆ ಗ್ಯಾಂಗಿನ ಮುಖಂಡನಿಗೆ ಬಿಜೆಪಿ ಟಿಕೆಟ್ ಕೊಡುವ ಆಮಿಷ ಒಡ್ಡಿದ್ದಾನೆ. ಮಾಜಿ ಮಂತ್ರಿ ಶಿವಾನಂದ ನಾಯ್ಕ್, ಕಾಂಗ್ರೆಸ್‌ನ ಮಾಜಿ ಶಾಸಕ ಜೆ.ಡಿ. ನಾಯ್ಕ, ಕಳೆದ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಗೋವಿಂದ ನಾಯ್ಕ್, ಕಾಸ್ಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಕಳಪೆ ಕಂಟ್ರಾಕ್ಟರ್ ಈಶ್ವರ ನಾಯ್ಕ ಮತ್ತು ಹುಂಬ ಹುಡುಗ ಸುನಿಲ್ ನಾಯ್ಕ್ ಬಿಜೆಪಿ ಎಮ್ಮೆಲ್ಲೆಯಾಗುವ ಹುಚ್ಚಿಗೆ ಬಿದ್ದು ಹಾರಾಡುತ್ತಿದ್ದಾರೆ.

ಅನಂತ್ಮಾಣಿಯ ಶೂದ್ರ ವಿರೋಧಿ ಕಾಟ ತಾಳಲಾಗದೆ ಬಿಜೆಪಿ ಬಿಟ್ಟೇ ಹೋಗಿದ್ದ ಶಿವಾನಂದ ನಾಯ್ಕಗೆ ಆ ನಂತರ ರಾಜಕೀಯ, ಆರೋಗ್ಯ ಎರಡೂ ಕೈಕೊಟ್ಟಿತು. ಜೆಡಿಎಸ್‌ಗೆ ಹೋಗಿ ಅಳುತ್ತ ಹೊರಗೋಡಿ ಬಂದಿದ್ದ ನಾಯ್ಕ ಕೆಜೆಪಿಯಿಂದ ಅಸೆಂಬ್ಲಿಗೆ ನಿಂತರೂ ಭರ್ಕತ್ತಾಗಲಿಲ್ಲ. ಅದೇ ಹೊತ್ತಿಗೆ ರಾಜಕೀಯವೇ ಬೇಡ ಎಂಬಷ್ಟು ಅನಾರೋಗ್ಯ ಬಾಧಿಸಿತು. ಯಡ್ಡಿ ಸಂಗಡ ಬಿಜೆಪಿ ಮರಳಿದರೂ ಸ್ಥಳೀಯ ಬಿಜೆಪಿಯಲ್ಲಿನ ಬ್ರಾಹ್ಮಣ ಲಾಬಿ ಮೇಲೇಳಲು ಬಿಡಲಿಲ್ಲ. ಇದೆಲ್ಲ ಕಾರಣದಿಂದ ನೇಪಥ್ಯಕ್ಕೆ ಸರಿದಿದ್ದ ನಾಯ್ಕ ರಾಜಕೀಯ ನಿವೃತ್ತಿಯೆಂದೇ ಸುದ್ದಿ ಹಬ್ಬಿತ್ತು. ಆದರೆ ಈಗೀಗ ಆತನ ಆರೋಗ್ಯ ಸುಧಾರಿಸಿದೆ. ಹೀಗಾಗಿ ಮತ್ತೊಂದು ಕೈನೋಡುವ ಉಮೇದು ಬಂದಿದೆ.

ಹಿಂದೂ ಜಾಗರಣಾ ವೇದಿಕೆಯ ಫಂಟರ್ ಗೋವಿಂದ ನಾಯ್ಕ ಅನಂತ್ಮಾಣಿ ಶಿಷ್ಯನಾದರೂ ಇಡೀ ಕ್ಷೇತ್ರದಲ್ಲಿ ಮುಖಬೆಲೆ ಗಿಟ್ಟಿಸುವ ವರ್ಚಸ್ಸು ಆತನಿಗಿಲ್ಲ. ಹೀಗಾಗಿ ಆತನ ಎತ್ತಿ ಕಟ್ಟುತ್ತಲೇ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುನಿಲ್ ನಾಯ್ಕ್ ಎಂಬ ಸದ್ದು–ಗುದ್ದಿನ ಯುವಕನನ್ನು ಕಾಂಗ್ರೆಸ್‌ನಿಂದ ಮಾಣಿ ಎಳೆದುತಂದಿದ್ದಾನೆ. ಈ ಸುನಿಲ್ ನಾಯ್ಕ ಕಾಂಗ್ರೆಸ್‌ನಲ್ಲಿರುವಾಗಲೇ ಶಾಸಕತ್ವದ ತೆವಲಿಗೆ ಬಿದ್ದು ಒದ್ದಾಡುತ್ತಿದ್ದ. ಇದನ್ನು ಗುರುತಿಸಿದ ಅನಂತ್ಮಾಣಿ ಹಿಂದೂತ್ವದ ದೀಕ್ಷೆ ಆತನಿಗೆ ಕೊಟ್ಟಿದ್ದಾನೆ. ಬಿಜೆಪಿ ಟಿಕೆಟ್ ಪಡೆಯಬೇಕು ಮತ್ತು ಗೆಲ್ಲಲೂ ಬೇಕೆಂದರೆ ಭಟ್ಕಳದಲ್ಲಿ ಕಮ್ಯುನಲ್ ಟೆನ್‌ಶನ್ ಚಾಲೂ ಇರಬೇಕೆಂಬ ತತ್ವಕ್ಕೀತ ಬದ್ಧನಾಗಿದ್ದಾನೆ. ಹೀಗಾಗಿ ಉದಯಗೊಂಡನಂಥ ಪಾಪದ ಬುಡಕಟ್ಟು ಹುಡುಗರ ಕೈಗೆ ಕಾಸು ಕೊಟ್ಟು ಗೋಮಾಂಸ, ಗೋರುಂಡ ದೇವಸ್ಥಾನದಲ್ಲಿ ಬೀಳುವ 'ಪವಾಡ' ನಡೆಸುತ್ತಿದ್ದಾನೆ.


ಕಳಪೆ ಕಂಟ್ರಾಕ್ಟರಿಕೆಯಿಂದ ಕೊಪ್ಪರಿಗೆ ಕಪ್ಪು ಕಾಸು ಮಾಡಿರುವ ಈಶ್ವರ ನಾಯ್ಕ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದಿರುವುದೇ ಎಮ್ಮೆಲ್ಲೆಯಾಗುವ ಹಠದಿಂದ. ಕಾಂಗ್ರೆಸ್‌ನಲ್ಲಿ ಇದ್ದೂ ಇಲ್ಲದಂತಿರುವ- ಮಾನಸಿಕವಾಗಿ 'ಹಿಂದೂತ್ವ'ಕ್ಕೆ ಅಡಿಕ್ಟ್ ಆಗಿರುವ ಮಾಜಿ ಶಾಸಕ ಜೆ.ಡಿ. ನಾಯ್ಕ ಬಿಜೆಪಿಯಲ್ಲಿ ಒಂದು ಕಾಲಿಟ್ಟು ಅದ್ಯಾವುದೋ ಕಾಲವಾಗಿದೆ. ನಿಗಮ–ಮಂಡಳಿಯ ಕಿಂಗ್‌ಗಳ ಆರಿಸುವಾಗ ತನಗೇನಾದರೂ ಚಾನ್ಸ್ ಸಿಗಬಹುದೆಂದು ಕಾಂಗ್ರೆಸ್‌ಲ್ಲಿ ಉಳಿದಿರುವ ಈತ ಅಸೆಂಬ್ಲಿ ಚುನಾವಣೆ ಹೊತ್ತಲ್ಲಿ ಬಿಜೆಪಿ ಟಿಕೆಟ್ ಸಿಕ್ಕರೆ ಗ್ಯಾರಂಟಿ ಅಲ್ಲಿರ್ತಾರೆ. ಜೆ.ಡಿ. ನಾಯ್ಕ ಮತ್ತು ಅನಂತ್ಮಾಣಿ ನಡುವೆ ಅನಾದಿಕಾಲದ ಬಾಂಧವ್ಯವಿದೆ.

13ನೇ ಪುಟದತ್ತ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಕೊಡಗು: ದನದ ವ್ಯಾಪಾರಿ ಮೇಲೆ

ಚೆಡ್ಡಿಗಳ ಗುಂಡೇಟು



ಕೊಡಗಿನಲ್ಲಿಯೂ ಗೋರಕ್ಷಕರ ಆಟಾಟೋಪ ಹೆಚ್ಚಾಗಿದೆ. ಇಲ್ಲಿಯವರೆಗೆ ಗೌಪ್ಯವಾಗಿ ನಡೆಯುತ್ತಿದ್ದ ಈ ರಕ್ಷಣಾ ದಂಧೆ ಈಗ ಗುಂಡಿನ ದಾಳಿ ನಡೆಸುವವರೆಗೂ ತಲುಪಿದೆ.

ವಿರಾಜಪೇಟೆ ತಾಲೂಕಿನ ಕೊಂಡಂಗೇರಿ ಎಂಬ ಪ್ರದೇಶದಲ್ಲಿ ಕೃಷಿ ಉತ್ಪನ್ನಗಳ ಖರೀದಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಪಿ.ಎ.ಬಷೀರ್ ಎಂಬಾತ ಆ ಭಾಗದಲ್ಲಿ ಇರುವ ರೈತರೆಲ್ಲರಿಗೂ ಚಿರಪರಿಚಿತ. ರೈತರು ಬೆಳೆಸುವ ಬಾಳೆ, ತೆಂಗು, ಮಾವು, ಅಡಿಕೆ ಮುಂತಾದ ಪದಾರ್ಥಗಳನ್ನು ಬಷೀರ್ ಖರೀದಿಸಿ ಮಾರಾಟ ಮಾಡುತ್ತಿದ್ದ. ದೈನಂದಿನ ಜೀವನ ಸಾಗಿಸಲು ಆತನಿಗೆ ಇದ್ದ ಮಾರ್ಗ ಇದಾಗಿತ್ತು.

ಈತ ಕಗ್ಗೋಡು ಗ್ರಾಮದಲ್ಲಿ ವ್ಯಾಪಾರ ಮಾಡುತ್ತಿದ್ದಾಗ, ಈತನ ಬಳಿ ದಲ್ಲಾಳಿಯೊಬ್ಬ ಬಂದು "ಗಣಪತಿ ಎಂಬುವವರ ಬಳಿ ಒಂದು ದನ ಇದೆ. ಅದನ್ನು ಮಾರಾಟ ಮಾಡಬೇಕಿದೆ. ಯಾರಾದರೂ ಖರೀದಿದಾರರು ಇದ್ದರೆ ತಿಳಿಸು" ಎಂದು ಕೋರಿದ್ದ. ಅದರಂತೆ ಬಷೀರ್ ಆ ದನವನ್ನು 18,000 ರೂಪಾಯಿಗೆ ಖರೀದಿಸುತ್ತೇನೆಂದು ಹೇಳಿ 500 ರೂಪಾಯಿಗಳನ್ನು ಮುಂಗಡವಾಗಿ ಪಾವತಿಸಿದ್ದ. ಜೊತೆಗೆ 500 ರೂಪಾಯಿಗಳನ್ನೂ ದಲ್ಲಾಳಿಗೆ ನೀಡಿದ್ದ. ಬಷೀರ್ ಈ ರೀತಿಯ ವ್ಯವಹಾರ ಕುದುರಿಸಿದ್ದು ಇದೇ ಮೊದಲೇನೂ ಅಲ್ಲ. ಆತ ಹೀಗೆ ಖರೀದಿಸಿ ಅದಕ್ಕೆ ಗಿರಾಕಿಗಳನ್ನು ಹುಡುಕಿ ಮಾರಾಟ ಮಾಡಿದರೆ, 500 ಅಥವ 1000 ರೂಪಾಯಿ ಆತನಿಗೆ ಮಿಕ್ಕುತ್ತಿತ್ತು. ಹಾಗಾಗಿ ಬಾಳೆ ಖರೀದಿಯ ಜೊತೆಯಲ್ಲಿ ಅಪರೂಪಕ್ಕೊಮ್ಮೆ ಇಂತಹ ವಹಿವಾಟನ್ನೂ ಮಾಡುತ್ತಿದ್ದ.

ಗಣಪತಿಯ ಬಳಿ ವ್ಯಾಪಾರ ಕುದುರಿಸಿದ ನಂತರ ಮುಂಗಡ ಹಣ ನೀಡಿದ್ದಕ್ಕೆ ಅವರಿಂದ ರಸೀದಿಯನ್ನು ಪಡೆದಿದ್ದ. ಶನಿವಾರ ಸಂಜೆಯ ವೇಳೆಗೆ ದನವನ್ನು ತೆಗೆದುಕೊಂಡು ಹೋಗುವುದಾಗಿ ಬಷೀರ್ ಹೇಳಿದಾಗ "ಸಂಜೆ ಬೇಡ, ಬೆಳಗ್ಗಿನ ಜಾವ ತೆಗೆದುಕೊಂಡು ಹೋಗಿ" ಎಂದು ಗಣಪತಿ ತಿಳಿಸಿದ್ದ. ಹಾಗಾಗಿ ಬಷೀರ್ ಆ ದನವನ್ನು ಅಲ್ಲಿಯೇ ಬಿಟ್ಟು ಮನೆಗೆ ಹಿಂತಿರುಗಿದ್ದ. ಮಾರನೆ ದಿನ ತೆಗೆದುಕೊಂಡು ಹೋಗುವುದಾಗಿ ತಿಳಿಸಿದ್ದ.

ಗಣಪತಿಯಿಂದ ಕರೆ

ಗಣಪತಿ ಭಾನುವಾರ ಬೆಳಗ್ಗಿನ ಜಾವ 4-45ಕ್ಕೆ ಬಷೀರ್‌ನ ಮೊಬೈಲಿಗೆ ಕರೆ ಮಾಡಿದ. ಆಗ ಬಷೀರ್ ನಮಾಜ್‌ಗೆ ತೆರಳಿದ್ದ ಕಾರಣ ಬಷೀರ್‌ನ ಪತ್ನಿ ಸೌರ ಗಣಪತಿಯೊಂದಿಗೆ ಮಾತನಾಡಿದರು. ಬಷೀರನಿಗೆ ಕೂಡಲೇ ಬಂದು ದನವನ್ನು ತೆಗೆದುಕೊಂಡು ಹೋಗಲು ತಿಳಿಸಬೇಕೆಂದು ಗಣಪತಿ ಹೇಳಿದ್ದ. ಗಂಡ ನಮಾಜ್ ಮುಗಿಸಿದನಂತರ ಆತನಿಗೆ ವಿಚಾರವನ್ನು ಸೌರ ತಿಳಿಸಿದರು. ಕೂಡಲೇ ಸಲಾಂ ಎಂಬ ಪಿಕಪ್ ವಾಹನ ಇಟ್ಟುಕೊಂಡಿರುವ ವ್ಯಾಪಾರಿಗೆ ವಿಚಾರ ತಿಳಿಸಿ ಬಷೀರ್ ಕೂಡಲೇ ದನವನ್ನು ತೆಗೆದುಕೊಂಡು ಬರುವ ವಿಚಾರವನ್ನು ತಿಳಿಸಿದ.

ಅದರಂತೆ ಸುಮಾರು 5-45ರ ವೇಳೆಗೆ ಗಣಪತಿಯವರಲ್ಲಿಗೆ ಬಷೀರ್ ಮತ್ತು ಸಲಾಂ ತೆರಳಿದಾಗ, ಗಣಪತಿ ಮತ್ತು ಅವರ ಪುತ್ರ ದನವನ್ನು ವಾಹನಕ್ಕೆ ಹತ್ತಿಸಿದರು. ಹಣವನ್ನು ಕೂಡ ಪಡೆದರು. ಅಲ್ಲಿಂದ ಸುಮಾರು 6 ಗಂಟೆಯ ವೇಳೆಗೆ ವಾಹನದಲ್ಲಿ ಬರುವಾಗ ಒಂದು ಕೆಂಪು ಬಣ್ಣದ ಮಾರುತಿ ವಾಹನ ರಸ್ತೆಗೆ ಅಡ್ಡವಾಗಿ ನಿಂತಿತ್ತು. ಬಷೀರ್ ಮತ್ತು ಸಲಾಂ ಇಳಿದುನೋಡಿದಾಗ, ಸುಮಾರು 20ರಿಂದ 25 ಮಂದಿ ಕೈಯಲ್ಲಿ ದೊಣ್ಣೆ, ಕಲ್ಲುಗಳನ್ನು ಇಟ್ಟುಕೊಂಡು ಅವರ ಬಳಿ ಬಂದರು. ಅಷ್ಟುಹೊತ್ತಿಗೆ ಅಪಾಯದ ಅರಿವು ಸಲಾಂಗೆ ಆಗಿತ್ತು. ಕೂಡಲೇ ಅವರು ಪಿಕಪ್ ಜೀಪನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ಯತ್ನಿಸಿದಾಗ ಒಂದು ಗುಂಪು ವಾಹನಕ್ಕೆ ಬಡಿಯಿತು. ವಾಹನದ ಗಾಜು ಒಡೆಯಿತು. ತಮ್ಮ ಮೇಲೆ ಕೋವಿ ಹಾಗೂ ದೊಣ್ಣೆಗಳಿಂದ ಹಲ್ಲೆ ನಡೆಯುತ್ತದೆ ಎಂಬುದು ಸಲಾಂಗೆ ಮನವರಿಕೆ ಆಗಿತ್ತು. ಅವರು ಅಲ್ಲಿಂದ [illegible]. ಆದರೆ ಬಷೀರ್ ದಾಳಿಕೋರರ ಕೈಗೆ ಸಿಕ್ಕಿಬಿದ್ದಿದ್ದ. ಆತನ ತೊಡೆ ಮತ್ತು ಹೊಟ್ಟೆಯ ಮೇಲೆ ದೊಣ್ಣೆಗಳಿಂದ ಮಾರಣಾಂತಿಕ ಹಲ್ಲೆಯನ್ನು ದಾಳಿಕೋರರು ನಡೆಸಿದರು.

ತನ್ನ ತಲೆಗೆ ಗಾಜಿನ ಪೆಟ್ಟು ಆಗಿದ್ದರೂ, ಕಾಲಿಗೂ ಪೆಟ್ಟಾಗಿದ್ದರೂ ಸಲಾಂ ಅಲ್ಲಿಂದ ತಪ್ಪಿಸಿಕೊಂಡರು. ಸುಮಾರು 10ರಿಂದ 12 ಕಿ.ಮೀ. ನಡೆದುಕೊಂಡೇ ಬಂದು ರಸ್ತೆ ಸೇರಿ ನಡೆದ ವಿಚಾರವನ್ನು ತಮ್ಮ ಗ್ರಾಮಸ್ಥರಿಗೆ ತಿಳಿಸಿದರು. ದಾಳಿಯನಂತರ ಗೋರಕ್ಷಕರು ಬಷೀರ್‌ನನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾದರು. ಈಗ



...ಗುಂಡೇಟಿಗೆ ಒಳಗಾದ ಪಿಕಪ್ ಜೀಪು, ಬಡಕಲು ದನಗಳೊಂದಿಗೆ.

ಅವರನ್ನು ಮಂಗಳೂರ್‍ನ ಯಾನಪೋಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಕಾಲಿನ ಮೂಳೆಗಳು ಮತ್ತು ಶ್ವಾಸಕೋಶಕ್ಕೆ ಪೆಟ್ಟಾಗಿರುವುದರಿಂದ ಚಿಕಿತ್ಸೆ ನೀಡಲಾಗುತ್ತಿದೆ.

ಪೂರ್ವ ನಿಯೋಜಿತ ಕೃತ್ಯ


ಈ ಘಟನೆ ಖಂಡಿತವಾಗಿಯೂ ಪೂರ್ವ ನಿಯೋಜಿತ ಕೃತ್ಯ ಎಂಬುದು ಮನದಟ್ಟಾಗುತ್ತದೆ. ಗಣಪತಿಯವರ ನಿವಾಸದಿಂದ ಸುಮಾರು 5 ಕಿ.ಮೀ ದೂರದಲ್ಲಿ 20ರಿಂದ 30 ಜನರು ಬೆಳಗ್ಗಿನ ಜಾವ ಸೇರಿದ್ದರು ಎಂದರೆ, ಇದರ ಹಿಂದೆ ದೊಡ್ಡದೊಂದು ಷಡ್ಯಂತ್ರ ನಡೆದಿದೆ. ಸಂಜೆ ದನಗಳನ್ನು ಸಾಗಾಟ ಮಾಡಲು ಅನುಮತಿ ನೀಡದೆ, ಮುಂದಿನ ದಿನ ಬರುವಂತೆ ಹೇಳಿದ್ದಲ್ಲದೆ, ಬೆಳಗ್ಗೆ 4-45ಕ್ಕೆ ಕೂಡಲೇ ಬರುವಂತೆ ತಿಳಿಸಿ, ವಾಹನದಲ್ಲಿ ದನವನ್ನು ಸಾಗಾಟ ಮಾಡುತ್ತಿದ್ದಾಗ ದಾಳಿ ನಡೆಯಿತು ಎಂದರೆ, ಖಂಡಿತವಾಗಿಯೂ ಇದರ ಹಿಂದೆ ಸಂಘ ಪರಿವಾರ ಕೆಲಸ ಮಾಡಿದೆ.

ಗೋರಕ್ಷಕರು ಈಗ ಗಣಪತಿಯವರಿಂದ ಬಷೀರ್ ಮತ್ತು ಸಲಾಂ ವಿರುದ್ಧ ಪೊಲೀಸರಿಗೆ ದೂರು ಕೊಡಿಸಿದ್ದಾರೆ. ಗಣಪತಿಯವರ ಕೊಟ್ಟಿಗೆಯಿಂದ ಇವರಿಬ್ಬರೂ ದನವನ್ನು ಕದ್ದು ತಮ್ಮ ವಾಹನದಲ್ಲಿ ತೆಗೆದುಕೊಂಡು ಹೋಗಿದ್ದಾರೆ ಎಂದು ಆರೋಪಿಸಿದ್ದಾರೆ. ಗೋರಕ್ಷಕ ಬಣಕ್ಕೆ ಸೇರಿದ ಪೊಲೀಸರು ಕೂಡಲೇ ಮೊಕದ್ದಮೆ ದಾಖಲಿಸಿದ್ದಾರೆ. ಆದರೆ ಗುಂಡೇಟು ಆಗಿದ್ದು ಮತ್ತು ಮಾರಣಾಂತಿಕ ಹಲ್ಲೆ ನಡೆದದ್ದರ ಬಗ್ಗೆ ಪೊಲೀಸರಿಗೆ ದೂರು ನೀಡಿದರೆ, ಪೊಲೀಸರು ಪ್ರಕರಣವನ್ನು ದಾಖಲಿಸಲು ಮೀನಾ-ಮೇಷ ಎಣಿಸಿ, ಕೊನೆಗೆ ಒತ್ತಡಕ್ಕೆ ಮಣಿದು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ಪೊಲೀಸರು ದೂರು ನೀಡಿದ ಗಣಪತಿಯನ್ನು ಬೆಳಗ್ಗಿನ ಜಾವ 6 ಗಂಟೆಯ ವೇಳೆಗೆ ನಿಮ್ಮ ಮನೆಯಿಂದ 5 ಕಿ.ಮೀ. ದೂರದಲ್ಲಿ ದನಗಳ ಸಾಗಾಟವನ್ನು ತಡೆಯಲು 20-30 ಮಂದಿ ಹೇಗೆ ಸೇರಿದ್ದರು ಎಂದು ಪ್ರಶ್ನಿಸಿಲ್ಲ. ಯಾಕೆ ಗಣಪತಿಯೇ ಬಷೀರನಿಗೆ ಫೋನ್ ಮಾಡಿದ್ದು ಎಂದೂ ಕೇಳಿಲ್ಲ. ಯಾಕೆಂದರೆ ಪೊಲೀಸರಿಗೆ ಇಂತಹ ಪ್ರಶ್ನೆಗಳನ್ನು ಕೇಳುವ ಅಗತ್ಯತೆಯೂ ಇಲ್ಲ. ಪೊಲೀಸ್ ಇಲಾಖೆ ಕೊಡಗು ಜಿಲ್ಲೆಯ ಮಟ್ಟಿಗೆ ಸಂಘ ಪರಿವಾರದ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದೆ ಎಂಬುದು ಇದರಿಂದ ಖಾತ್ರಿಯಾಗುತ್ತದೆ.


ಕೊಡಗು ಸೇರಿದಂತೆ ದಕ್ಷಿಣ ಕನ್ನಡದ ಗಡಿಭಾಗದಲ್ಲಿ ಗೋರಕ್ಷಕರ ಇಂತಹ ಕೃತ್ಯಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಆದರೆ ಗುಂಡಿನ ದಾಳಿ ನಡೆದದ್ದು ಕೊಡಗಿನ ಮಟ್ಟಿಗೆ ಇದು ಮೊದಲನೆ ಬಾರಿ.

ಸಾಧಾರಣವಾಗಿ ತಮ್ಮ ದನಗಳನ್ನು ಮಾರಾಟ ಮಾಡಿದ ನಂತರ, ಅದನ್ನು ವಾಹನಗಳಲ್ಲಿ ತೆಗೆದುಕೊಂಡು ಹೋಗುವಾಗ, ಗೋರಕ್ಷಕರ ಹೆಸರಿನಲ್ಲಿ ಇರುವ ಕೆಲವು ಖಾಲಿಪೋಲಿ ಹುಡುಗರಿಗೆ ವಿಷಯವನ್ನು ಮುಟ್ಟಿಸಿ, ವಾಹನವನ್ನು ತಡೆದು ವಾಹನದಲ್ಲಿರುವ ದನದ ರಕ್ಷಣೆಯ ಹೆಸರಿನಲ್ಲಿ ಅವುಗಳನ್ನು ವಾಹನದಿಂದ ಬಿಚ್ಚಿ ಬಿಡುವುದು ನಡೆಯುತ್ತದೆ. ಇದರ ಉದ್ದೇಶ ಸ್ಪಷ್ಟ. ಕಟ್ಟಿದ ಹಗ್ಗವನ್ನು ಕಳಚಿದರೆ ದನವನ್ನು ನೆಟ್ಟಗೆ ತನ್ನ ಮಾಲಿಕನ ಮನೆಗೆ ವಾಪಸ್ ಆಗುತ್ತದೆ. ತನ್ನನ್ನು ತನ್ನ ಮಾಲಿಕ ಮಾರಾಟ ಮಾಡಿದ್ದಾನೆ ಎಂದು ದನಕ್ಕೆ ತಿಳಿಯುವುದಿಲ್ಲ. ಹಾಗಾಗಿ ಹಣವೂ ಬಂತು, ದನವೂ ತಮ್ಮ ಬಳಿಯೇ ಉಳಿಯಿತು. ಇದು ಈ ಭಾಗದಲ್ಲಿ ಕೆಲವರು ನಡೆಸುತ್ತಿರುವ ಗೋ ದಂಧೆಯ ಶೈಲಿ.



ಬಷೀರ್ ಪ್ರಕರಣದಲ್ಲಿ ಬಕ್ರೀದ್ ಹಬ್ಬದ ಆಸುಪಾಸಿನಲ್ಲಿ ದನಗಳನ್ನು ಸಾಗಾಟ ಮಾಡಿದ್ದರಿಂದ, ಅವನ್ನು ಬಕ್ರೀದ್‌ಗಾಗಿ ಕೊಂಡೊಯ್ಯುತ್ತಿದ್ದರು. ಅವನ್ನು ತಾವು ರಕ್ಷಿಸಿದ್ದೇವೆ ಎಂದು ಈಗ ಕೊಚ್ಚಿಕೊಳ್ಳುತ್ತಿದ್ದಾರೆ.

ಈ ಬಗ್ಗೆ ಬಷೀರ್‌ನ ಪತ್ನಿ ಸೌರರನ್ನು ವಿಚಾರಿಸಿದಾಗ "ನನ್ನ ಪತಿಯ ಮೇಲೆ ಈಗ ಗಣಪತಿ ಕಳವು ಆರೋಪವನ್ನು ಮಾಡಿದ್ದಾರೆ. ಆದರೆ ನನ್ನ ಬಳಿಯೇ ಗಣಪತಿ ಮೊಬೈಲ್‌ನಲ್ಲಿ ಮಾತನಾಡಿದ್ದು. ಬೇಗನೆ ಬಂದು ದನವನ್ನು ತೆಗೆದುಕೊಂಡು ಹೋಗಲು ತಿಳಿಸಿದ್ದು. ಅಲ್ಲಿ ಸೇರಿದವರು ಕೋವಿಯಿಂದ ನನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದಾರೆ. ಜೊತೆಯಲ್ಲಿ ಬಷೀರ್‌ನ ಬಾಯಿಗೆ ಸೆಗಣಿಯನ್ನು ಕೂಡ ಬಲವಂತವಾಗಿ ತುರುಕಿ ಅಮಾನವೀಯವಾಗಿ ವರ್ತಿಸಿದ್ದಾರೆ" ಎಂದು ಸೌರ ಹೇಳಿದರು.




"ನನ್ನ ಪತಿ ಇದು ಮೊದಲನೆಯ ಬಾರಿ ದನವನ್ನು ಖರೀದಿಸಿ ಮಾರಾಟ ಮಾಡಿದ್ದಲ್ಲ. ಈ ಹಿಂದೆಯೂ ಸಾಕಷ್ಟು ಬಾ... ಖರೀದಿಸಿದ್ದಾರೆ. ನಮಗೆ ಖಂಡಿತವಾಗಿಯೂ... ಬಡತನವಿದೆ. ನಮಗೆ ವಾಸಕ್ಕೆ ಯೋಗ್ಯವಾ... ಮನೆಯೂ ಇಲ್ಲ. ಆದರೆ ಎಂದೂ ನನ್ನ ಪ... ಕಳವು ಮಾಡಿಲ್ಲ. 100 ರೂಪಾಯಿ ಬೇಕಿದ್ದ... ಪಡೆಯುತ್ತಿದ್ದರೇ ವಿನಹ, ಖಂಡಿತವಾಗಿಯ... ಕಳವನ್ನು ಮಾಡಿಲ್ಲ. ಈಗ ತಮ್ಮನ್ನು ತಾವು ... ರಕ್ಷಿಸಿಕೊಳ್ಳಲು ನನ್ನ ಪತಿಯ ಮೇಲೆ ಕಳ್ಳತ... ಸುಳ್ಳು ಆರೋಪವನ್ನು ಗಣಪತಿಯವರು ಯಾರದೋ ಒತ್ತಡಕ್ಕೆ ಮಣಿದು ಮಾಡುತ್ತಿ... ಎಂದು ಆಕೆ ಹೇಳಿದರು. ಕೈಯಲ್ಲಿ 8 ತಿಂಗ... ಹಸುಗೂಸನ್ನು ಹೊತ್ತುಕೊಂಡು ಇದ್ದ ಸೌರ... ಬದುಕಿಗೆ ಏನು ಮಾಡುವುದು ತಿಳಿಯುತ್ತಿಲ್ಲ... ಯಾರೂ ನಮ್ಮನ್ನು ಮಾತನಾಡಿಸುತ್ತಿಲ್ಲ. ಅಲ್ಪಸಂಖ್ಯಾತರ ರಕ್ಷಣೆಯನ್ನು ಮಾಡುತ್ತೇವೆ... ಎನ್ನುವ ಕಾಂಗ್ರೆಸಿಗರು ಕೂಡ ನಡೆದ ವಿಚಾ... ತಿಳಿಯಲು ಪ್ರಯತ್ನಿಸಿಲ್ಲ. ಪತಿಯ ಬದುಕು... ಅಪಾಯದಲ್ಲಿ ಇದೆ. ಶಸ್ತ್ರ ಚಿಕಿತ್ಸೆಯ ನಂತ... ಅವರು ಗುಣಮುಖರಾಗಲು ಕ... ಆರು ತಿಂಗಳಾದರೂ ಬೇಕಾಗ... ಅಲ್ಲಿಯವರೆಗೆ ಜೀವನ ನಿರ್ವಹ... ಹೇಗೆ ಎಂಬುದೇ ನಮಗೆ ತಿಳಿಯ... ಎಂದು ಆಕೆ ಆತಂಕ ವ್ಯಕ್ತಪಡಿಸಿ...

"ದನಗಳನ್ನು ಬಕ್ರೀದ್‌ಗೆ ಬ... ಖರೀದಿಸಲಾಗಿತ್ತೇ?" ಎಂದು ... ಪ್ರಶ್ನಿಸಿದಾಗ, ಆಕೆಯೂ ಸೇರಿದ... ಇದ್ದ ಹಲವರು "ಬಕ್ರೀದ್ ಸಂ... ಬಲಿ ಕೊಡುವುದಿದ್ದರೆ, ಉತ್ತಮ ... ಗುಣಮಟ್ಟದ ಎತ್ತನ್ನು ಬಲಿಕೊ... ಹಸುಗಳನ್ನು ಹಬ್ಬಕ್ಕೆ ಕಡಿಯುವ... ಎಂದರು.


ಸಲಾಂ ಈಗ ಚಿಕಿತ್ಸೆ ಪಡೆದ... ಹಿಂದಿರುಗಿದ್ದಾರೆ. ಅವರ ಮನೆ... ವಾತಾವರಣವನ್ನು ನೋಡಿದರೆ ಸಾಕಷ್ಟು ಅನುಕೂಲಸ್ಥರಾಗಿದ್ದು, ಕಳ್ಳತನ ಮಾಡುವ ಅಗತ್ಯವಿಲ್ಲ. ಅವರು ಕೃಷಿ ಉತ್ಪನ್ನಗಳನ್ನು ಸಗಟಾಗಿ ಖ... ಮಾಡುವ ವ್ಯಾಪಾರಿಯಾಗಿದ್ದಾರೆ. ಅವರ ಸ... ಪೊಲೀಸರಿಗೆ ಪುಕಾರು ನೀಡಿ ಸುಮಾರು 1... ಮಂದಿಯ ಹೆಸರುಗಳನ್ನು ನೀಡಿದ್ದಾರೆ. ಆದ... ಪೊಲೀಸರು ಕೇವಲ 4 ಮಂದಿಯ ಮೇಲ... ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ಕಳವು ಮಾಡಿದ್ದು ಯಾ...

ಬಷೀರ್ ದನಗಳನ್ನು ತೆಗೆದುಕೊಂಡು ಬರಲು ಹೋದಾಗ, ಆತನ ಬಳಿ



ಕಳ್ಳತನ ಆರೋಪಿ ಸಲಾಂನ ಮನೆ



...ಸಿಮೆಂಟು ಹಾಕದ...

11 ನೇ ಪುಟದಿಂದ

...ಪಿಯತ್ತ ನಿರ್ಗತಿಕ ...ಾರಿಗಳ ಚಿತ್ತ!

...ಗಿಲಗೆ ನಿಂತಾಗೆಲ್ಲ ಈ ಜಗಳಗಂಟ ...ಯ್ಕ ಕಾಂಗ್ರೆಸ್ ಅಭ್ಯರ್ಥಿ ಮ್ಯಾಗಿಗೆ ...ಮಾಡಿದ್ದ ದೊಡ್ಡ ಇತಿಹಾಸವೇ ಇದೆ. ...ರುದ್ಧಿ ಭಟ್ಕಳಕ್ಕೆ ಬಂದಾಗ ಶಾಲು ...ಅಪ್ಪಿ ಮುದ್ದಾಡಿರುವ ಜೆ.ಡಿ. ನಾಯ್ಕ ...ಸಾಧಿಸುತ್ತಿದ್ದಾನೆ. ಈ ಐವರಲ್ಲಿ ...ಯಾರಿಗೆ ಖುಲಾಯಿಸಲಿದೆ ಎಂಬುದು ...ಸರ್ವಶಕ್ತ ಅನಂತ್ಮಾಣಿಗೂ ...ಸಲಾಗುತ್ತಿಲ್ಲ.

...ಜಿಲ್ಲಾ ಬಿಜೆಪಿ ಕಬ್ಜಾ ಮಾಡಿಕೊಂಡ ...ಯಲ್ಲಿ ಅನಂತ್ಮಾಣಿ ತುಂಡು ಗುಪ್ಪಳ ...ನೆ; ಶಿವಾನಂದ ನಾಯ್ಕನನ್ನು ...ವೃತ್ತಿಗೆ ತಳ್ಳಿದಂತೆ ಕಾಗೇರಿ ...ಖತಂ ಮಾಡುವ ಮಸಲತ್ತು ...ದ್ದಾರೆ. ಸದ್ಯಕ್ಕೆ ಅನಂತ್ಮಾಣಿ ಆರ್ಭಟ ...ಯಿ ಬಿಟ್ಟುಕೊಂಡು ಕಾಗೇರಿ ...ರುವಂತೆ ನಟಿಸುತ್ತಿದ್ದಾರೆ. ಆತ ...ನ್ನೂ ಶುರು ಮಾಡಿಲ್ಲ. ಕೇಂದ್ರ ...ನಂತಕುಮಾರ್ ಶಾಸ್ತ್ರಿ, ರಾಜ್ಯ ...ಾಜಿ ಅಧ್ಯಕ್ಷನೂ ಎಂಪಿಯೂ ...ಪ್ರಹ್ಲಾದ ಜೋಶಿ, ಕೇಶವಕೃಪಾದ ...ಬ್ರಿಗೇಡ್‌ನ ಸಖ್ಯದ ಕಾಗೇರಿ ಬಿಜೆಪಿ ...ಲ್ಲಿ ಅನಂತ್ಮಾಣಿಗಿಂತಲೂ ಶಕ್ತಿಶಾಲಿ. ...ಜೂಕಿನ ಕಾಗೇರಿ ಎಲ್ಲರಿಗೂ ಸಹ್ಯ ...ಮ! ಪಾರ್ಟಿಯ ಹಿರಿಯರೂ ...ಡದ, ಕಂಡ-ಕಂಡವರ ...ೋಳೇರಿಸಿಕೊಂಡು ಹೋಗುವ, ...ಯನ್ನು ಸರಿಯಾಗಿ ನಿಭಾಯಿಸದೇ ...ಡ್ಯಾಮೇಜು ಮಾಡಿದ ಒಂಥರಾ ...ಂಡ ಅನಂತ್ಮಾಣಿ ಬಗ್ಗೆ ಸಂಘ ...ದಲ್ಲಿ ತಾತ್ಸಾರವಿದೆ.




...ಬುದ್ಧಿಯ ಕಾಗೇರಿ ಸರಿಯಾಗಿ ...ದ್ದರೆ ಅನಂತ್ಮಾಣಿಯಿಂದ ...ಆಗದೆಂದು ಕಾಗೇರಿ ಸ್ವಭಾವ ...ಪಿಸುಗುಡುತ್ತಿದ್ದಾರೆ. ಡಾ. ...ರ್ಕಿಯಂಥ ವಜನಿನ ಹಿರಿಯ ...ನ್ನೇ ಮುರಿದೆಸೆದ ಕಾಗೇರಿಗೆ ...ಅನಂತ್ಮಾಣಿ ಯಾವ ಲೆಕ್ಕವೂ ...ವಿಶ್ಲೇಷಣೆ ಚೆಡ್ಡಿ ಬಿಡಾರದಲ್ಲಿ ...ತ್ತಿದೆ. ತನ್ನ ಮಂತ್ರಿ ಆಸೆಗೆ ಡಾ. ...ತ್ರಿಯಾಗುತ್ತಾರೆಂದು ಆತನಿಗೆ ...ಟಿಕೆಟ್ಟೇ ಸಿಗದಂತೆ ಮಾಡಿದ್ದ ...ಪಾಂತರಕಾರಿ ಅನಂತ್ಮಾಣಿಗೆ ...ಾಗಲು ಅಥವಾ ಶಾಸಕನಾಗಲು ...ಬಿಟಾ? ಕಾಗೇರಿ ಅಖಾಡಕ್ಕೆ ...ಅನಂತ್ಮಾಣಿಗೆ ರಣವೀಳ್ಯ ಕೊಡುವ ...ಹಿತವಾಗಿದೆ.

...ಜಿಲ್ಲಾ ಬಿಜೆಪಿಯಲ್ಲಿ ಜಟಕನ ...ತ್ತು ಮಾರಿಹಬ್ಬ ಎರಡೂ ...ಹಾಗೇ ನಡೆಯುವ ಸೂಚನೆ ...ಪ್ರಾರಂಭಿಸಿದೆ!!

ವರದಿಗಾರ

ಅನಂತನ ಕುಲಬಾಂಧವರ
ಬ್ಲಡ್ ಅನಾಲಿಸಿಸ್‌ನ ಒರಿಜಿನಲ್ ರಿಪೋರ್ಟ್



ಕೋಮುಸೂಕ್ಷ್ಮ ಪ್ರದೇಶಗಳಲ್ಲಿ ಸಹಜವಾಗಿ ಮಾತನಾಡುವಾಗಲೇ ಬಹಳಷ್ಟು ಜಾಗರೂಕರಾಗಿರಬೇಕು. ಅಂತಹದ್ದರಲ್ಲಿ ಅಲ್ಲಿನ ಜವಾಬ್ದಾರಿಯುತ ಸಂಸದನಾಗಿ ಅಲ್ಲಿನ ಜನಪ್ರತಿನಿಧಿಯೆಂದು ಗುರುತಿಸಿಕೊಂಡಂತಹ ಅನಂತ ಕುಮಾರ ಹೆಗಡೆ ತನ್ನ ಕೊಳಕು ಮಾತಿನ ಮೂಲಕ ತನ್ನ ಮನೆಹಾಳ "ರಕ್ತ ಗುಣ" ಎಂಥಾ ನೀಚತನದ್ದೆಂದು ಮತ್ತೆ ಮತ್ತೆ ಸಾಬೀತುಪಡಿಸುತ್ತಿದ್ದಾನೆ. (ಇದು ಆತನ ಬಿಡಲಾಗದ ಚಾಳಿ. ಇಂತಹ ಮಾತನ್ನು ಆತನ ಕೊಳಕು ಬಾಯಿ "ಕೋಮು ಬಿಲ್ಡಪ್"ಗಾಗಿ ಆಗಾಗ ಉಗುಳುತ್ತಲೇ ಇರುತ್ತದೆ. ಸಂಸದನಾಗಿ ಏನೂ ಹೇಳಿಕೊಳ್ಳುವಂತಹ ಸಾಧನೆ ಮಾಡಲಾಗದ ಟೊಳ್ಳುತನವನ್ನು ಈ ಮೂಲಕ ಆತ ಮುಚ್ಚಿಕೊಂಡು ಮರೆಯುವ ತಂತ್ರವಷ್ಟೆ.)

ಭಟ್ಕಳದಲ್ಲಿ ಉತ್ತರ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಸಭೆಯೊಂದರಲ್ಲಿ ಮಾತನಾಡುತ್ತಾ ಆತ "ಕಾಂಗ್ರೆಸಿನದ್ದು ಘಿಯಾಸುದ್ದೀನ್ ರಕ್ತವಾದರೆ ನಮ್ಮದು ಮಾತ್ರ ಶುದ್ಧ ಹಿಂದೂ ರಕ್ತ"ವೆಂದು ಒದರಿಕೊಂಡಿದ್ದಾನೆ. ಇನ್ನೂ ಮುಂದುವರೆದು ನರಿಯ ಹೊಟ್ಟೆಯಲ್ಲಿ ನರಿ ಹಾಗು ಸಿಂಹದ ಹೊಟ್ಟೆಯಲ್ಲಿ ಸಿಂಹ ಹುಟ್ಟುವಂತೆ ಮೋದಿಯಂತಹ ಪ್ರಧಾನಿಯನ್ನು ನಮ್ಮಿಂದಷ್ಟೇ ಕೊಡಲು ಸಾಧ್ಯವೆಂದು ಹೇಳಿದ್ದಾನೆ.

ಅಯ್ಯಾ ಸಗಣಿ ಅನಂತು, ಆ ರಕ್ತ ಈ ರಕ್ತಗಳ ಮನೆ ಹಾಳಾಗಲಿ ಮಾರಾಯ ಮೊದಲು ಈ ನಿನ್ನ ಹಿಂದೂ ಧರ್ಮ ಎಂದರೆ ಏನಯ್ಯ? ಅದನ್ನು ಮೊದಲು ಒದರಯ್ಯ. ನಿನ್ನ ಹಿಂದೂ ರಕ್ತದ ಕೊಡುಗೆಯಾದ ಕೆಳಜಾತಿಯ ಗಾಣಿಗ ಮೋದಿಗೂ ನೀನು ಉದ್ಭವಿಸಿ ಬಂದ ವೈದಿಕ ಬ್ರಾಹ್ಮಣ ಕುಲಕ್ಕೂ ಎತ್ತಣಿಂದೆತ್ತ ಸಂಬಂಧವಯ್ಯಾ..!!? ಇದೇ ಮೋದಿ ಒಂದು ವೇಳೆ ಶೂದ್ರರ ಬ್ರೈನ್ ವಾಷಿಂಗ್ ಕಾರ್ಖಾನೆಯಾದ ಆರೆಸೆಸ್ ಗರಡಿಯಲ್ಲಿ ಪಳಗದೇ ಸಾಮಾನ್ಯನಂತೆ ಬೆಳೆದು ಜಾತ್ಯತೀತನಾಗಿದ್ದರೆ ಈ ನಿನ್ನ ಬಾಯಿ ಆತನನ್ನು ಹಿಂದೂ ರಕ್ತಕ್ಕೆ ಲಿಂಕ್ ಮಾಡುತಿತ್ತಾ? ಹಿಂದೂ ರಕ್ತ-ಮುಸಲ್ಮಾನ ರಕ್ತ-ಕಿರಿಸ್ತಾನರ ರಕ್ತ- ಶೂದ್ರ ರಕ್ತ ಅನ್ನೋದೆಲ್ಲ ನಿಜಕ್ಕೂ ಇದ್ದಿದ್ದರೆ ಬ್ಲಡ್ ಗ್ರೂಪುಗಳಲ್ಲಿ ಮತ್ತಷ್ಟು ಸಬ್ ಗ್ರೂಪುಗಳು ಹುಟ್ಟಿ ಹಿಂದೂ ಎ ಪಾಸಿಟಿವ್, ಮುಸ್ಲಿಮ್ ಎ ಪಾಸಿಟಿವ್ ಅಂತ ನೂರಾರು ವಿಭಾಗಗಳಾಗಿ ರಕ್ತದಾನ ಮಾಡದ ನಿನ್ನಂತಹ ಅನೇಕ ದೊಡ್ಡ ಜನಗಳ ಜೀವಕ್ಕೇ ತೊಂದರೆ ಬರುತಿತ್ತು. (ಗಮನಿಸು, ನಿನ್ನ ಕುಟುಂಬದ ಯಾವುದೋ ವ್ಯಕ್ತಿಗೆ ಆಪರೇಷನ್ ಅಥವ ಹೆರಿಗೆಯ ಸಿಜೇರಿಯನ್ ನಂತಹ ವೈದ್ಯಕೀಯ ಚಿಕಿತ್ಸಾ ವೇಳೆಯಲ್ಲಿ ಕೊಟ್ಟಂತಹ ರಕ್ತ ಮುಸಲ್ಮಾನನದ್ದೇ ಆಗಿರುವ ಸಾಧ್ಯತೆ ಹೆಚ್ಚೇ ಹೊರತು ಬ್ರಾಹ್ಮಣನದ್ದಲ್ಲ ಕಣಯ್ಯ.)

ರಕ್ತದ ವೈಜ್ಞಾನಿಕ ವಿಶ್ಲೇಷಣೆ ಆಯ್ತು ಇನ್ನು ಐತಿಹಾಸಿಕ ವಿಚಾರಕ್ಕೆ ಬರೋಣ. "ಬ್ರಾಹ್ಮಣಾ ಭೋಜನ ಪ್ರಿಯಃ.." ಎನ್ನುವುದು ಸಂಸ್ಕೃತ ಸಾಹಿತ್ಯದಲ್ಲೇ ಕಾಣಿಸಿಕೊಳ್ಳುವಂತಹ ಪ್ರಸಿದ್ಧ ಮಾತು. ಈ ಭೋಜನ ಎನ್ನುವುದಕ್ಕೆ ಹಲವಾರು ಅರ್ಥಗಳಿವೆ (ಲಂಚವನ್ನು ತಿನ್ನಲಾಗದಿದ್ದರೂ ಲಂಚ "ತಿನ್ನುವುದು" ಎನ್ನುವಂತೆ). ಒಟ್ಟಾರೆ ತಿನ್ನುವುದು, ಸುಖಿಸುವುದು, ಆರಾಮವಾಗಿ ಸುಖಪುರುಷರಾಗಿ ಬದುಕುವುದೇ ಈ "ಭೋಜನ"ದ ಹಿಂದಿರುವ ಅರ್ಥ. ಶಂಕರಾಚಾರ್ಯನ ಮಸಲತ್ತು ಹಾಗು ಮನುಧರ್ಮ ಶಾಸನಗಳ ಮುಖಾಂತರ ಬ್ರಾಹ್ಮಣರ ಮಹೋನ್ನತೆಯನ್ನು ರಾಜ ಪುರೋಹಿತರ ಮೂಲಕ ರಾಜಮಹಾರಾಜರುಗಳ ತಲೆಯಲ್ಲಿ ತುಂಬಿದ ಪರಿಣಾಮವಾಗಿ (ಕೌಟಿಲ್ಯನ ಅರ್ಥ ಶಾಸ್ತ್ರದಲ್ಲೇ ಬ್ರಾಹ್ಮಣನಿಲ್ಲದ ರಾಜ್ಯದಲ್ಲಿ ಒಂದು ಕ್ಷಣವೂ ನಿಲ್ಲಬೇಡ; ಅದೊಂದು ಅವಲಕ್ಷಣದ ಪ್ರದೇಶ ಎಂಬಂತಹ ಉಲ್ಲೇಖವಿದೆ) ಇಂದಿಗೂ ಕೂಡ ಅನೇಕ ಬ್ರಾಹ್ಮಣರು ವಾಸಿಸುತ್ತಿರುವುದು ಇಂತಹ ನಂಬಿಕೆಯ ಹಿನ್ನೆಲೆಯಲ್ಲಿ ಸಿಕ್ಕ ಎಕ್ರೆಗಟ್ಟಲೆ ಉಂಬಳಿ ಜಮೀನಿನಲ್ಲೇ. (ಬೆಳ್ತಂಗಡಿಯ ನೆರಿಯ ಹೆಬ್ಬಾರರ ಪ್ರಸಿದ್ಧ ತೊಂಬತ್ತು ಸಾವಿರ ಎಕರೆಯ ನೆರಿಯ ಎಸ್ಟೇಟ್ ಜಮೀನು ಅವರ ಹಿರಿಯರಿಗೆ ಉಂಬಳಿಯಾಗಿ ಸಿಕ್ಕಂತ ಭೂಮಿ.)

ಬ್ರಾಹ್ಮಣ ರಹಿತವಾಗಿರುವ ದಕ್ಷಿಣ ಭಾರತದ ಕೆಲ ರಾಜರುಗಳಲ್ಲೂ ಆಕಾಶದಿಂದ ಉದುರಿದ "ಭೂಸುರ"ರೆಂದೇ ಬಿಂಬಿತವಾದ ಬ್ರಾಹ್ಮಣ ಸಖ್ಯದ ಹುಚ್ಚು ಆರಂಭಗೊಂಡಿತು. ಇಂತಹ ರಾಜರುಗಳಲ್ಲಿ ಒಬ್ಬನಾದ ಕದಂಬರ ಲೋಕಾದಿತ್ಯ ಉತ್ತರದ ಅಹಿಚ್ಛತ್ರದಿಂದ ಭಾರೀ ಭೂರಿ "ಭೋಜನ"ದ ಆಸೆ ಹುಟ್ಟಿಸಿ ತನ್ನ ರಾಜ್ಯಕ್ಕೆ ಬ್ರಾಹ್ಮಣರನ್ನು ಹಿಂಡುಹಿಂಡಾಗಿ ಕರೆಸಿಕೊಂಡಿದ್ದ.

ಆದರೆ ಸರಿಯಾದ ರಸ್ತೆ ಅಥವ ವಾಹನ ವ್ಯವಸ್ಥೆಗಳಿಲ್ಲದ ಬಹು ದೂರದ ಕುದುರೆ ಸವಾರಿಯ ಅಂದಿನ ಕಠಿಣ ಪರಿಸ್ಥಿತಿಯಲ್ಲಿ ರಾಜ ತೋರಿದ ಭಾರೀ ಆಸೆಗೆ ಮರುಳಾಗಿ ಬ್ರಾಹ್ಮಣರು ಬಂದರಾದರೂ ಯಾವ ಕಾರಣಕ್ಕೂ "ನ ಸ್ವಾತಂತ್ರ್ಯಂ ಅರ್ಹತಿ.." ಎಂದು ಕುಳ್ಳಿರಿಸಲ್ಪಟ್ಟ ತಮ್ಮ ಹೆಂಡತಿಯಾಗಲೀ ಮಗಳನ್ನಾಗಲೀ ದೂರದ ಈ ಅಪರಿಚಿತ ನಾಡಿಗೆ ಕರೆತರಲೇ ಇಲ್ಲ. ಯಾವುದೋ ಹಳೆಯ ಫಿಲಮ್‌ನಲ್ಲಿ ರಮೇಶ್ ಅರವಿಂದ್ ಬ್ರಹ್ಮಚಾರಿ ದತ್ತಣ್ಣನನ್ನು "ಅಲ್ಲಾ ಸಾರ್., ಅದಕ್ಕೇನ್ ಮಾಡ್ತೀರಿ..?" ಅಂತ ಕೀಟಲೆ ಮಾಡುವ ಸೀನೊಂದಿದೆ. ಅದೇ ರೀತಿ ಲೋಕಾದಿತ್ಯ ರಾಜ ಇಲ್ಲಿಗೆ ಕರೆತಂದ ಬ್ರಾಹ್ಮಣರಿಗೆ ತಾನು ಹೇಳಿದಂತೆ (ಥೈಲ್ಯಾಂಡಿನಲ್ಲಿ ದೈವ ಸಂಭೂತವೆಂದು ನಂಬುವ ಬಿಳಿಯಾನೆಯನ್ನು ಕೆಲಸ ಕೊಡದೇ ಕಾಳಜಿವಹಿಸಿ ಸಾಕುವಂತೆ) ಸುಖದ 'ಭೋಜನ'ವನ್ನೇ ಕೊಟ್ಟನಾದರೂ ಒಂದಕ್ಕಂತೂ ಕೊರತೆ ಯಾವಾಗಲೂ ಕಾಡುತಿತ್ತು. ಅದೇ ಮಾನವ ಬಯಸುವ ನಿದ್ರಾಹಾರ ಮೈಥುನದಲ್ಲಿನ ಮೂರನೇ ವಿಚಾರದ ಸಮಸ್ಯೆ. ದೂರದ ಸ್ವಂತ ನೆಲೆಗೂ ಮರಳಲಾಗದೇ ಇಲ್ಲೂ ಏಗಲಾಗದೇ ಚಡಪಡಿಸುತ್ತಿದ್ದ ಇಂತಹ ಬ್ರಾಹ್ಮಣರು ಕೊನೆಗೆ ಶರಣಾದದ್ದು "ಆಪದ್ಧರ್ಮ ಸೂತ್ರ"ಕ್ಕೆ ಅಂ-ದರೆ ಕಠಿಣ ಸಂದರ್ಭದಲ್ಲಿನ ಧಾರ್ಮಿಕ ತಿದ್ದುಪಡಿಗೆ.

ಎಲ್ಲಾ ಸುಖವಿದ್ದು ಪತ್ನಿವಿಹೀನರಾದ ಆಗಮಿತ ಬ್ರಾಹ್ಮಣರು ಒಮ್ಮತದಿಂದ ಕೊನೆಗೊಂದು ಅನಿವಾರ್ಯ ನಿರ್ಧಾರಕ್ಕೆ ಬಂದರು. ಅದುವೇ ಸ್ಥಳೀಯ ಹೆಣ್ಣುಗಳೊಂದಿಗಿನ ವಿವಾಹ. ಯಾವುದೇ ಜಿಗುಟು ಕಟ್ಟುಪಾಡುಗಳಿಲ್ಲದೇ ಸಹಜವಾಗಿ ಬದುಕುತ್ತಿದ್ದ ಸ್ಥಳೀಯರ ಮನವೊಲಿಸಿ ಕೆಲ ಸಾಂಪ್ರದಾಯಿಕ ವಿಧಿಗಳ ಹೆಸರಲ್ಲಿ ಕೆಲ ಅಬ್ರಾಹ್ಮಣ ಸಮುದಾಯವನ್ನು ಬ್ರಾಹ್ಮಣೀಕರಿಸಲಾಯಿತು. ಈ ಮೂಲಕ ಆಗಮಿತ ಬ್ರಾಹ್ಮಣರು ಕೊನೆಗೂ ಬ್ರಾಹ್ಮಣ ವಧುವನ್ನೇ ವಿವಾಹವಾಗುವಂತಾಯಿತು. ಇದು ಲೋಕಾದಿತ್ಯ ಆಳಿದ ಪರಿಸರದಲ್ಲೇ ಇರುವ ರಕ್ತಪಿಪಾಸು ಅನಂತನ ಜಾತಿಯ "ಶುದ್ಧ ರಕ್ತ"ದ ಮೂಲ ಚರಿತ್ರೆ.

ಇಂದಿಗೂ ಕರಾವಳಿ ಕರ್ನಾಟಕದ ಕೆಲ ಸಮುದಾಯ ಹಾಗು ಬ್ರಾಹ್ಮಣ ಸಮುದಾಯಗಳ ಮನೆತನದ ಹೆಸರುಗಳು, ಪದ್ಧತಿಗಳು ಈ ಚಾರಿತ್ರಿಕ ಸತ್ಯಕ್ಕೆ [illegible] ಪಾನೀಡ [illegible] ಸಂಪ್ರದಾಯ, ವಾದಿರಾಜರ ಉಡುಪಿಯ ಗುಳ್ಳದ ಕಥೆ, ಜಾತಿಯಿಂದ ಬ್ರಾಹ್ಮಣರಾದರೂ ಕೆಲ ಮನೆತನಕ್ಕೆ ಸಹಪಂಕ್ತಿಯಲ್ಲಿ ಸ್ಥಾನ ಇಲ್ಲದಿರುವಿಕೆಗಳೆಲ್ಲವೂ ಇಂತಹ ಅ-ಶುದ್ಧರಕ್ತದ ಅಸಲಿಯತ್ತಿನೆಡೆಗೇ ಬೆರಳು ತೋರುತ್ತದಲ್ಲವೇ? (ಮೊನ್ನೆ ಡೆಲ್ಲಿಯ ಮಾಜಿ ಸಿಎಂ ಶೀಲಾ ದೀಕ್ಷಿತ್ "ಪಂಜಾಬಿಯಾದ ನಾನು ಬ್ರಾಹ್ಮಣನನ್ನು ವಿವಾಹವಾಗಿ ಬ್ರಾಹ್ಮಣಳಾಗಿದ್ದೇನೆ" ಎಂದಿದ್ದರಂತೆ. ಶುದ್ಧ ಬ್ರಾಹ್ಮಣ ರಕ್ತ, ಶುದ್ಧ ಹಿಂದೂ ರಕ್ತ ಎನ್ನೋದೇ ಬಕ್ವಾಸ್ ವಾದ.)

ಸದಾ ಮುಸಲ್ಮಾನರ ವಿರುದ್ಧ ವಿಷ ಕಾರಿ ತನ್ನ ಬೇಳೆ ಬೇಯಿಸಿಕೊಳ್ಳಲು ನೋಡುವ ಅನಂತ ಮಾಣಿ ಇತ್ತೀಚೆಗೆ ವಾಟ್ಸಾಪ್ಪಿನಲ್ಲಿ ಯಾರೋ ಹರಿಬಿಟ್ಟ ನೆಹರು ಕುಟುಂಬದ ಕುರಿತಾದ ಕಟ್ಟುಕಥೆ (ಇಂದಿರಾ ಗಾಂಧಿಯ ಹೆಸರು ಮೈಮುನಾ ಬೇಗಮ್ ಅಂತೆ, ಜವಾಹರಲಾಲ್ ನೆಹರೂ ತಾತ ಘೋರಿಯಾ ಖಾನ್‌ಗೆ ಮೂರು ಹೆಂಡಂದಿರಂತೆ, ಫಾರೂಖ್ ಅಬ್ದುಲ್ಲಾ ತಂದೆ ಶೇಖ್ ಅಬ್ದುಲ್ಲಾ ಮತ್ತು ಪಾಕ್ ಪಿತಾಮಹ ಜಿನ್ನಾ ಕೂಡ ಆತನ ಮಕ್ಕಳಂತೆ. ಅಂದರೆ ನೆಹರೂವಿನ ಹತ್ತಿರ ಸಂಬಂಧಿ)ಯ ಆಧಾರದಲ್ಲಿ ಈ 'ಘಿಯಾಸುದ್ದೀನ್ ರಕ್ತ' ದ ಬಗ್ಗೆ ಮಾತನ್ನಾಡಿದ್ದಾನೆ.

ಅಲ್ಲಯ್ಯಾ ನೆಹರೂ ತಂದೆ ಹಾಗೆ, ಅಜ್ಜ ಹಾಗೆ, ಪಿಜ್ಜ ಹಾಗೆ, ಮಗಳು ಮೊಮ್ಮಗ ಎಲ್ಲರೂ ಹಾಗೆ; ಅಷ್ಟೇ ಅಲ್ಲ ನೆಹರೂ ಮೌಂಟ್‌ಬ್ಯಾಟನ್ ಹೆಂಡತಿಗೇ ಕಣ್ಣು ಹಾಕಿದ್ದ ಎಂದೆಲ್ಲಾ ಕೀಳಾಗಿ ಹಬ್ಬಿಸುವ ನೀವುಗಳು ಇವೆಲ್ಲ ಈ ನೆಹರೂ ಒಬ್ಬ ಬ್ರಾಹ್ಮಣನಾಗಿಯೂ ಜಾತ್ಯತೀತನಾಗಿದ್ದ ಎಂಬ ದ್ವೇಷ ಸಾಧನೆಯ ಕಾರಣಕ್ಕಾಗಿಯಷ್ಟೇ ಅಲ್ಲವೇ? ಒಂದುವೇಳೆ ಈ ನೆಹರೂ ಮೋದಿಯಂತೆ ಹಿಂದೂವಾದಿಯಾಗಿದ್ದರೆ ಇದೇ ನೆಹರು ನಮ್ಮವನು ಹಿಂದೂ ಧರ್ಮ ರಕ್ಷಕ ಎಂದು ಛತ್ರಪತಿ ಶಿವಾಜಿಯ ಲೆವೆಲ್ಲಿಗೆ ನೆಹರೂವನ್ನು ಮೆರೆಸುತ್ತಿದ್ದೀರಲ್ಲವೇ? ಥೂ ನಿಮ್ಮ ಮನೆ ಹಾಳ ಬುದ್ಧಿಗಿಷ್ಟು.


ಅಧಿಕಾರ ಬಳಸಿಕೊಂಡು ಜನ ಮೆಚ್ಚುವ ಕಾರ್ಯ ಮಾಡುವ ಬದಲು ಹಂದಿ ತಲೆ, ದನದ ತಲೆ, ಆ ರಕ್ತ, ಈ ರಕ್ತ ಎಂದು ದ್ವೇಷ ಬಿತ್ತುವ ನಿನ್ನಂಥವರು ಮೊನ್ನೆ ಗಣೇಶೋತ್ಸವದಲ್ಲಿ ತೆಪ್ಪ ಮಗುಚಿ ನೀರಿಗೆ ಬಿದ್ದಾಗ ಸಹಕರಿಸಿದ್ದು ಇದೇ ಮುಸಲ್ಮಾನರು ಎಂಬುದನ್ನು ಮರೆತೇ ಬಿಟ್ಟಿರಲ್ಲಯ್ಯ. ಹಾಗೆಯೇ ಮುಸಲ್ಮಾನ ಜಿಲ್ಲಾಧಿಕಾರಿಯ ಹೆಸರು ಪುತ್ತೂರು ಮಹಾಲಿಂಗೇಶ್ವರ ಜಾತ್ರೆಯ ಆಹ್ವಾನಪತ್ರಿಕೆಯಲ್ಲಿದ್ದದ್ದಕ್ಕೆ ರಂಪಾಟ ಮಾಡಿ ಕೊನೆಗೆ ಇತ್ತೀಚೆಗೆ ಅವರಿಗಾದ ಅಪಘಾತಕ್ಕೂ ಅದನ್ನು ಲಿಂಕ್ ಮಾಡಿ ಸಂಭ್ರಮಿಸಿದವರು ನಿನ್ನಂತವರು. ಆದರೆ ಕೋಮು ಸೂಕ್ಷ್ಮ ಪುತ್ತೂರಿನ ಅದೇ ಊರ ದೇವರ ಜಾತ್ರೆಯಲ್ಲಿ ನದಿಪಾಲಾದ ಮಕ್ಕಳ ಶವವನ್ನು ಜೀವದ ಹಂಗು ಬಿಟ್ಟು ಮುಳುಗಿ ಹುಡುಕಿ ಹೊರತೆಗೆದದ್ದು ಇದೇ ಮುಸಲ್ಮಾನರು ಎಂಬುವುದನ್ನು ಮರೆತೇ ಬಿಟ್ಟಿರಲ್ಲಯ್ಯ. (ಮುಸಲ್ಮಾನರ ಜಾಗತಿಕ ಕಾಣ್ಕೆಗಳ ಕುರಿತಾದ ಗೌರಿಯವರ ಕಳೆದ ಸಂಚಿಕೆಯ ಅಂಕಣವನ್ನು ಈ ಅಶುದ್ಧ ರಕ್ತದ ಮಹಾನುಭಾವ ಓದೋದೊಳ್ಳೆಯದು.)

ಯಾವ ಯಾವುದೋ ಬಡ ಶೂದ್ರರನ್ನು ಅನ್ಯಮತೀಯರ ವಿರುದ್ಧ ಎತ್ತಿ ಕಟ್ಟಿ ಯಾರನ್ನೋ ದೂಡಿ ಬಾವಿಯ ಆಳ ನೋಡುವ ನಿಮ್ಮ ಕುಟಿಲ ಬುದ್ಧಿ "ರಕ್ತಗುಣ" ಅತ್ಯಂತ ನಾಚಿಕೆಗೇಡಿನ ಸಂಗತಿಯೇ ವಿನಹ ಹೆಮ್ಮೆಯಿಂದ ಹೇಳಿಕೊಳ್ಳುವ ಯಾವ ಹೆಗ್ಗಳಿಕೆಯನ್ನೂ ಹೊಂದಿಲ್ಲ. ಬಾಬ್ರಿ ಘಟನೆಯ ಬಳಿಕ ಚಿಗಿತುಕೊಂಡ ವಿಷಬೀಜಗಳಷ್ಟೆ ನೀವೆಲ್ಲ. ಈ ರಕ್ತ ಗುಣ ಬದಲಾಗುವುದಾದರೂ ಹೇಗೆ?

ಅವಿನಾಶ್ ಎಮ್.ಎಸ್, ನೆಲ್ಲಿಕಾರ್

ಕೊಡಗು: ದನದ ವ್ಯಾಪಾರಿ ಮೇಲೆ ಚೆಡ್ಡಿಗಳ ಗುಂಡೇಟು..

...23,500 ರೂಪಾಯಿ ಇತ್ತು. ಗಣಪತಿಗೆ ...ರೂಪಾಯಿ ಪಾವತಿಸಿ, ವಾಹನದ ...ವನ್ನು ನೀಡಿದರೆ ಸುಮಾರು ಮೂರು ...ಹೆಚ್ಚು ಹಣ ಅವರಲ್ಲಿ ಬಾಕಿ ಇತ್ತು. ...ವರ ಮೇಲೆ ದಾಳಿ ನಡೆಸಿದವರು ...ದ್ದಾರೆ. ಮಾತ್ರವಲ್ಲ, ಬಷೀರ್ ಬಳಿ ...ವನ್ನು ಕಿತ್ತುಕೊಂಡಿದ್ದಾರೆ. ತಾನು ...ದನಗಳನ್ನು ಖರೀದಿಸಿದ್ದಾಗಿ ಬಷೀರ್ ...[illegible] ಅದನ್ನೂ ಅವರಿಂದ



ಬಲವಂತವಾಗಿ ಕಿತ್ತುಕೊಂಡಿದ್ದಾರೆ.

ಕೆಲವೇ ದಿನಗಳ ಹಿಂದೆ ಕುಶಾಲನಗರದ ಬಳಿ ಪ್ರವೀಣ್ ಪೂಜಾರಿ ಎಂಬ ವ್ಯಕ್ತಿಯ ಕೊಲೆ ನಡೆದಾಗ, ಸಂಘ ಪರಿವಾರದವರು ಅಲ್ಲಿಗೆ ಭೇಟಿ ನೀಡಿದ್ದಾರೆ. ಅವರೊಂದಿಗೆ ಪೈಪೋಟಿಗೆ ಬಿದ್ದವರಂತೆ ಕಾಂಗ್ರೆಸಿಗರು ಕೂಡ ಅಲ್ಲಿಗೆ ತೆರಳಿದ್ದರು. ಉಸ್ತುವಾರಿ ಸಚಿವರಾದ ಸೀತಾರಾಂ ಅವರು ಪೂಜಾರಿ ಸಂಸಾರಕ್ಕೆ 5 ಲಕ್ಷ ರೂಪಾಯಿ ಪರಿಹಾರವನ್ನು ಘೋಷಿಸಿದರು. ಆದರೆ ಬಷೀರ್ ಘಟನೆ ನಡೆದು ಸುಮಾರು [illegible] ಕಳೆದರೂ ಯಾವುದೇ ಕಾಂಗ್ರೆಸ್ ನಾಯಕರು [illegible] ಭೇಟಿ [illegible] ಎಂದೂ ಕೇಳಿಲ್ಲ. ಇದರಿಂದ ಬೇಸರಗೊಂಡಿರುವ ಸ್ಥಳೀಯರು "ಕಾಂಗ್ರೆಸ್‌ಗೆ ನಾವು ಓಟ್ ನೀಡುವ ಯಂತ್ರಗಳು ಆಗಿದ್ದೇವೆ" ಎನ್ನುತ್ತಿದ್ದಾರೆ.

ಕರ್ನಾಟಕ ಮತ್ತು ಕೊಡಗಿನಲ್ಲಿ ಯಾರ ಸರಕಾರ ಇದೆ ಎಂಬ ಪ್ರಶ್ನೆ ಈಗ ಉದ್ಭವಿಸಿದೆ. ಕಾಂಗ್ರೆಸಿಗರು ಇದು ತಮಗೆ ಸಂಬಂಧಪಡದ ವಿಚಾರ ಎಂದು ಹೇಳಿಕೊಂಡು ಮೌನವಾಗಿದ್ದಾರೆ. ಎಸ್.ಡಿ.ಪಿ.ಐ. ಇದರ [illegible] ಮುಸುಮುಸ ನಗುತ್ತಿದ್ದಾರೆ.

ಬಿ.ಎನ್. ಮನುಶೆಣೈ

ಅರ್ಧನಾರೀಶ್ವರ
ಇಂಡಿಯಾದ ಮರುಹುಟ್ಟಿನ ಧ್ವನಿ

ಪುಸ್ತಕ ವಿಮರ್ಶೆ

ಕೃತಿ : ಅರ್ಧನಾರೀಶ್ವರ
ಮೂಲ : ಪೆರುಮಾಳ್ ಮುರುಗನ್
ಕನ್ನಡಕ್ಕೆ : ಕೆ. ನಲ್ಲತಂಬಿ
ಪ್ರಕಾಶನ : ಲಂಕೇಶ್ ಪ್ರಕಾಶನ
ಬೆಲೆ : ರೂ.150


'ಮಾದೋರುಬಾಗನ್' ಇದು ಪೆರುಮಾಳ್ ಮುರುಗನ್ ಅವರ ತಮಿಳು ಕಾದಂಬರಿ. ಇದನ್ನು 'ಅರ್ಧನಾರೀಶ್ವರ' ಹೆಸರಿನಲ್ಲಿ ನಲ್ಲತಂಬಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕಾದಂಬರಿಯಲ್ಲಿ ಬರುವ 'ಕಲೆ ಕರಗತವಾದವನಿಗೆ ಬದುಕಲು ಊರು ಸಿಗದೇನು?' ಎನ್ನುವ ಮಾತು ಅಕ್ಷರಶಃ ಮುರುಗನ್ ಅವರಿಗೆ ಸಲ್ಲುತ್ತದೆ. ಏಕೆಂದರೆ ಪೆರುಮಾಳ್ ಮುರುಗನ್ ಈ ಕಾದಂಬರಿಯಿಂದಾಗಿ ಬರಹಕ್ಕೆ ತಿಲಾಂಜಲಿ ಇಡಲೊರಟ ನೊಂದ ಲೇಖಕ. ತನ್ನ ಬರಹಕ್ಕಾಗಿ ಸವರ್ಣೀಯ ಸೋದರರಿಂದ ಜೀವ ಬೆದರಿಕೆಯನ್ನು ಎದುರಿಸಿದ ಈ ಲೇಖಕ ಬರಹವನ್ನೇ ನಿಲ್ಲಿಸಿದ ಗಟ್ಟಿಗ. ಇನ್ನು ಮುಂದೆ 'ಪೆರುಮಾಳ್ ಎನ್ನುವ ಲೇಖಕ ಸತ್ತ' ಎಂದು ಸ್ವಘೋಷಿಸಿಕೊಂಡು ಬರಹ ನಿಲ್ಲಿಸಿದ ಈ ಲೇಖಕನಿಗೆ ದೇಶದಾದ್ಯಂತ ಭರವಸೆಯ ಮಹಾಪೂರವೇ ಹರಿದುಬಂದಿತ್ತು. 'ಲೇಖಕನೊಬ್ಬ ಭಯದಲ್ಲಿ ಬದುಕಬಾರದು' ಎನ್ನುವಂತೆ ತೀರ್ಪಿತ್ತ ಹೈಕೋರ್ಟ್ ಮತ್ತೆ ಲೇಖಕನ ಅಭಿವ್ಯಕ್ತಿಗೆ ಜೀವ ತುಂಬಿದೆ. ಮತ್ತೆ ಬರವಣಿಗೆ ಆರಂಭಿಸಿರುವ ಈ ಲೇಖಕನಿಗೆ ಅಭಿನಂದನೆ ಹೇಳುತ್ತಲೇ ಅವರ 'ಅರ್ಧನಾರೀಶ್ವರ' ಕೃತಿಯ ಬಗ್ಗೆ ಒಂದಿಷ್ಟು ಪರಿಚಯ.

ಸ್ವಾತಂತ್ರ್ಯ ಪೂರ್ವದ ಘಟನೆಗಳನ್ನು ಆಧರಿಸಿರುವ ಈ ಕಾದಂಬರಿಯನ್ನು ಪಿತೃಪ್ರಧಾನ ಸಂಸ್ಕೃತಿಯ ಕೇಂದ್ರ ಪ್ರಜ್ಞೆಯಾಗಿ ಸುಲಭಕ್ಕೆ ಗ್ರಹಿಸಿಬಿಡಬಹುದು. ಇದಿಷ್ಟೇ ಆಗಿದ್ದರೆ ಮಾತ್ರ ಸಂಸ್ಕೃತಿಯ ಅರಿವಿನ ಹಿನ್ನೆಲೆಯಲ್ಲಿ ಇದಕ್ಕೊಂದು ವಿಶ್ಲೇಷಣೆಯ ಮಾದರಿಯನ್ನೂ ರೂಪಿಸಬಹುದಿತ್ತು. ಆದರೆ ಇವೆರಡರ ಆಚೆಗೂ ಇದೊಂದು ಇವತ್ತಿನ ಮಣ್ಣಿಗೆ ಅನುಗುಣವಾಗಿ ರೂಪಿಸಲ್ಪಡುತ್ತಿರುವ ಬ್ರಾಹ್ಮಣಿಕೆಯ ಬೇರುಗಳನ್ನೂ ಇದು ಅಲುಗಾಡಿಸಿಬಿಡುತ್ತದೆ. ಇಡೀ ಕಾದಂಬರಿಯ ಉದ್ದಕ್ಕೂ ಪಿತೃಪ್ರಧಾನ ಮತ್ತು ಬ್ರಾಹ್ಮಣಿಕೆಯ ಪದಗಳು ಗೋಚರವಾಗದಿದ್ದರೂ ಅಂತರಾಳದಲ್ಲಿ ಇವುಗಳ ಸುತ್ತಲೇ ಸುತ್ತುತ್ತಿರುವಂತೆ ಭಾಸವಾಗುತ್ತದೆ.

ನೈತಿಕತೆ ಮತ್ತು ಅನೈತಿಕತೆ ಎಂಬ ಪದಗಳು ಮಾನವನ ಇಹಪರವನ್ನೇ ಆವರಿಸಿಕೊಂಡಿವೆ. ಅದರಲ್ಲೂ ಗಂಡು ಮತ್ತು ಹೆಣ್ಣಿನ ವಿಷಯದಲ್ಲಿ ಇವು ಇನ್ನೂ ಜೀವಂತಿಕೆಯನ್ನು ಪಡೆದುಕೊಳ್ಳುತ್ತವೆ. ತನ್ನಾಳದಲ್ಲಿರುವ ಕರ್ಣನನ್ನು ಎಂದೂ ಬಿಟ್ಟುಕೊಡದ ದ್ರೌಪದಿ, ಕೇವಲ ಸಂಗೀತಕ್ಕೆ ಮರುಳಾದಳೆ? ಎನ್ನುವ ಸಂಶಯವನ್ನು ಇಂದಿಗೂ ಬಿತ್ತಿ ನೆಳೆಯೂರಿರುವ ಜನ್ನನ ಅಮೃತಮತಿ. ಇಂದಿನಂತೆ ನನಗೆ ಬುದ್ಧಿ ಇದ್ದ-ರೆ ದುಷ್ಯಂತನೊಂದಿಗೆ ಹೋಗಲು ಬಯಸುತ್ತಿರಲಿಲ್ಲ ಎನ್ನುವ ಮೂಲಕ ಮರುಹುಟ್ಟು ಪಡೆದಿರುವ ಶಾಕುಂತಲೆ, ಲಂಕೆಯನ್ನು ಗೆದ್ದು ರಾಮನು ನೋಡಲು ಬರುತ್ತಾನೆಂದು ಕಾತರಿಸಿದ್ದ ಸೀತೆ ಹನುಮಂತನನ್ನು ಕಂಡಾಗ ಬೀರಿದ ತೀಕ್ಷ್ಣನೋಟ ಇವೆಲ್ಲಾ ಅಂದಿನಿಂದ ಇಂದಿನವರೆಗೂ ಅದರೊಳಗಿಂದಲೇ ಹೊಸ ಪ್ರಪಂಚವನ್ನು ಕಾಣಬೇಕೆಂಬ ತೀವ್ರತೆಯನ್ನು ಹುಟ್ಟಾಕುತ್ತಲೇ ಮುನ್ನಡೆಯುತ್ತಿವೆ.

ಮೇಲಿನ ಈ ಎಲ್ಲ ಪಾತ್ರಗಳೊಂದಿಗೆ ಅರ್ಧನಾರೀಶ್ವರದ ಪೊನ್ನಾಳ ಪಾತ್ರವೂ ಎರಡು ದಾರಿಯ ಕವಲಿನಲ್ಲಿ ಸಿಕ್ಕಿಕೊಂಡಂತೆ ಮನಸ್ಸಿನಾಳದಲ್ಲಿ ನಿಂತುಬಿಡುತ್ತದೆ. ಪ್ರಕೃತಿ ಕಾಣುವ ಸಮಾನತೆ ಮನುಷ್ಯ ಪ್ರಪಂಚದಲ್ಲಿ ಇಲ್ಲ. ಬಿತ್ತಿದರೆ ಬೆಳೆಯಬಲ್ಲ, ಬೆಳೆದರೆ ಹಸಿವ ನೀಗಿಸಬಲ್ಲ ಭೂತಾಯಿಯಷ್ಟೇ ಶ್ರೇಷ್ಠಳಾದವಳು ಪೊನ್ನಾ. ಆದರೆ ತನಗೊಂದು ಮಗುವಿಲ್ಲ ಎಂಬ ಕೊರತೆ ಅವಳನ್ನು ಸದಾ ಕಾಡಿಸುತ್ತಲೇ ಇರುತ್ತದೆ. ಈ ಮಗುವಿನಿಂದ ಅವಳಿಗೆ ತಾಯ್ತನದ ಅನುಭವವೂ ಬೇಕಿತ್ತು; ಇದಕ್ಕಿಂತ ಹೆಚ್ಚಾಗಿ ಊರವರ ಹೀಯಾಳಿಸುವ ಮಾತಿನಿಂದ ತಪ್ಪಿಸಿಕೊಳ್ಳಬೇಕೆಂಬ ಹಂಬಲವೂ ಹೆಚ್ಚಾಗಿತ್ತು. ಈ ಹಂಬಲಗಳೇ ಪೊನ್ನಾಳ ಮನದಲ್ಲಿ ತನ್ನಿಚ್ಛೆಗೆ ವಿರುದ್ಧವಾಗಿ ದೇವರ ಜೊತೆ ಕೂಡುವ ಮನಸ್ಥಿತಿಯನ್ನೂ ರೂಪಿಸಿಬಿಡುತ್ತದೆ.

ಮಹಾಭಾರತದ ಕೊನೆಗೆ ತನ್ನ ಐವರು ಮಕ್ಕಳನ್ನು ಕಳೆದುಕೊಂಡ ದ್ರೌಪದಿ ತನ್ನ ಅಳಲಿನಲ್ಲಿ ತನ್ನೈವರು ಗಂಡಂದಿರ ಪಾತ್ರವೂ ಇರಬೇಕೆಂದು ಹಂಬಲಿಸುತ್ತಾಳೆ.



ಆದರೆ ಐವರು ಗಂಡರೂ ಕೂಡ ದ್ರೌಪದಿಯ ದುಃಖದಲ್ಲಿ ದುಃಖಿಗಳಾಗುವ ಬದಲು ದೂರದಲ್ಲಿ ಕನಿಕರವೇ ಮೈವೆತ್ತಂತೆ ನಿಂತಿರುತ್ತಾರೆ. ಈ ಐವರಿಗೂ ತನ್ನ ಮಗ ಯಾರೆಂಬುದು ಗೊಂದಲ. ಯಾಕೆಂದರೆ ಯಾರಿಗೂ ತಲೆಗಳಿಲ್ಲ. ಇದು ಇವತ್ತಿನ ಸಮಾಜಕ್ಕೆ ಚಾಚೂತಪ್ಪದೆ ಅನ್ವಯಿಸುತ್ತದೆ. ಮಕ್ಕಳಿಲ್ಲದವರಿಗೆ ಮಕ್ಕಳಾಗದಿರುವುದೇ ದೊಡ್ಡ ಶಾಪ. ಎನ್ನುವಂತೆ ಆಡಿಕೊಂಡು ನಗುತ್ತಾರೆ. ಒಂದುವೇಳೆ ಮಕ್ಕಳಾದರೆ ಆ ಮಕ್ಕಳು ಅಡ್ಡ ದಾರಿ ಹಿಡಿದರೆ ಅದಕ್ಕೂ ನಮಗೂ ಸಂಬಂಧವಿಲ್ಲವೆಂದು ಸುಮ್ಮನಿದ್ದುಬಿಡುತ್ತಾರೆ. ಬಹುಶಃ ಕಾಳಿ ಪೊನ್ನಾಳ ನಡುವಿನ ಬಿರುಕಿಗೆ ಈ ಸಮಾಜದ 'ಮಕ್ಕಳ ಚಿಂತಕರು' ಇದೇ ರೀತಿಯ ಜಾಣಮೌನವನ್ನು ವಹಿಸುತ್ತಾರೆನೋ!

ಕಾಳಿ ಪುರುಷಪ್ರಧಾನತೆಯ ಸಂಕೇತದಂತೆ ಮೇಲ್ನೋಟಕ್ಕೆ ಕಂಡುಬಂದರೂ ಕೂಡ ಆಳದಲ್ಲಿ ಅವನೊಬ್ಬ ತಾಯಿ ಹೃದಯದ ಪ್ರೇಮಿ. ಮಕ್ಕಳ ಬಗ್ಗೆ ಅದಮ್ಯ ಆಕಾಂಕ್ಷೆ ಇದ್ದರೂ ಹೆಂಡತಿಯ ಬಗ್ಗೆ ಒಂದೇ ಒಂದು ಕೊಂಕನ್ನೂ ಆಡದ ಪ್ರಾಮಾಣಿಕ. ಮನೆ ಮುಂದೆ ಹೂವರಸಿನ ಗಿಡ ನೆಟ್ಟು ಮನೆಯ ಅಂಗಳವನ್ನೇ ನೆರಳಾಗಿಸಬಲ್ಲ ಹೂಮನಸ್ಸಿನ ಕಾಳಿ ತೊಂಡುದೊಡ್ಡಿಯನ್ನೆ ನಂದನವನವನ್ನಾಗಿಸುವ ಕಲೆಗಾರ.. ಕಾಡು ಪೊದರುಗಳ ನಡುವೆ ಅರಳಿದ ಮಲ್ಲಿಗೆ ಹೂಗಳನ್ನು ಅರಸಿ ತರುವುದರಲ್ಲಿ ನಿಸ್ಸೀಮ; ಇದಲ್ಲದಿದ್ದರೆ ಕತ್ತಾಳೆ ಹೂವನ್ನಾದರೂ ಹೆಂಡತಿಗಾಗಿ ತರಬಲ್ಲ ರಸಿಕ. ಹೂವಿಗಾಗಿ ಅಲೆಯುವುದನ್ನು ತಪ್ಪಿಸಲು ಕನಕಾಂಬರ ಮತ್ತು ಮಲ್ಲಿಗೆಯ ಗಿಡವನ್ನು ನೀರಿನ ಕಾಲುವೆ ಪಕ್ಕ ನೆಟ್ಟು ಹೂವಿನ ಮಳೆಯೇ ಮೈವೆತ್ತಲು ಕಾರಣನಾದವನು ಕಾಳಿ. ತನ್ನ ತೊಂಡುದೊಡ್ಡಿಯಲ್ಲಿ ತಾಳೆಮರವನ್ನು ಬೆಳೆಸಿ ಅದರಲ್ಲಿ ಕಜಾಣ ಗೂಡುಕಟ್ಟುವಂತೆ ಮಾಡಿ ಅದರ ಮೂಲಕ ಕೋಳಿ ಮತ್ತು ಅದರ ಮರಿಗಳಿಗೆ ಕಾವಲು ಕಾಯುವಂತೆ ಮಾಡುವ ತಂತ್ರದ ಗುರು ಇವನು. ಇಷ್ಟೆಲ್ಲ ಜೀವನ ಪ್ರೀತಿ ಇರುವ ಇವನಿಗೆ ಮಕ್ಕಳಾಗದಿರುವ ಕೊರತೆಯೊಂದನ್ನು ಬಿಟ್ಟರೆ ಉಳಿದ ಯಾವುದಕ್ಕೂ ಕೊರತೆಯಿಲ್ಲದವನು.

ಪೊನ್ನಾ ಕೂಡ ಇವನಿಗಿಂತ ಭಿನ್ನವಾಗೇನೂ ಇಲ್ಲ. 'ಹತ್ ಮಕ್ಕಾದ್ರೂ ಸರಿ ನಂಗೆ ಮೊದಲ್ನೇ ಮಗ ಅವ್ನೇ' ಎನ್ನುವುದರ ಮೂಲಕ ಗಂಡನನ್ನು ಜತನದಿಂದ ಕಾಳಜಿ ಮಾಡುವವಳು. ಇವಳು ನೆಟ್ಟ ಗಿಡಕ್ಕೆ ಸಾವಿಲ್ಲ, ಬಿತ್ತಿದ ಬೀಜಕ್ಕೆ ಮೋಸವಿಲ್ಲ. ಇವಳಿಗಿರುವ ಕೊರತೆ-ಯೂ ಕೂಡ ತನ್ನ ಹೊಟ್ಟೆಯಲ್ಲಿ ಒಂದು ಮಗು ಜನಿಸಿದರೆ ಸಾಕೆಂಬುದೇ ಆಗಿತ್ತು.

ಒಂದು ಕಡೆ ಮಗುವಿಲ್ಲದಿದ್ದರೆ ಸ್ವರ್ಗದ ಬಾಗಿಲು ತೆರೆಯುವುದಿಲ್ಲ ಎನ್ನುವ ಮೌಢ್ಯವನ್ನು ಈ ದೇಶದಲ್ಲಿ ಬಿತ್ತಿ ಬೆಳೆಯಲಾಗಿದೆ. ಇನ್ನೊಂದು ಕಡೆ ಗಂಡನಲ್ಲದೆ ಪರಪುರುಷನ ಸಂಗ ಪಾತಿವ್ರತ್ಯಕ್ಕೆ ಧಕ್ಕೆ ಎನ್ನುವುದನ್ನೂ ನಂಬಿಸಲಾಗಿದೆ. ಇದರ ಜೊತೆಯಲ್ಲೇ ದೇವರ ಹೆಸರಿನಲ್ಲಿ ಇನ್ನೊಬ್ಬನೊಂದಿಗೆ ಸಂಬಂಧವೇರ್ಪಡಿಸಿಕೊಳ್ಳುವ ಅನಿವಾರ್ಯತೆಯನ್ನೂ ಈ ಸಮಾಜ ಸೃಷ್ಟಿಸಿದೆ. ಇದೆಲ್ಲದರ ವ್ಯಂಗ್ಯ ನೋಟ ಕಾದಂಬರಿಯಲ್ಲಿ ಹಾಸುಹೊಕ್ಕಾಗಿ ನಿಂತಿದೆ.

'ನಮಗ್ಯಾವ್ ಕೊರ್ತೆ? ಸಂತೋಸ್ವಾಗ್ ಇರಾಣಾ, ಮಗು ಇಲ್ದಿದ್ರೆ ಅಷ್ಟೇ ಹೋಯ್ತು. ಊರಲ್ಲಿರೋ ಶಾಟದಪ್ಪಗಳ್ ಇನ್ನೆಷ್ಟ್ ದಿನಾ ಕೇಳ್ತಾರೆ?' ಎನ್ನುವ ಕಾಳಿಯ ಮಾತುಗಳು ಇಂಡಿಯಾದ ಬಹುಪಾಲು ಮಕ್ಕಳಿಲ್ಲದವರ ಮಾತುಗಳು ಸಹ ಆಗಿವೆ. ಮಕ್ಕಳಾಗದಿದ್ದರೆ ಒಂದು ರೀತಿ, ಗಂಡು ಮಗುವಾಗದಿದ್ದರೆ ಮತ್ತೊಂದು ರೀತಿ ಕಾಣುವ ಈ ಸಮಾಜ ದಾಂಪತ್ಯದ ಅರಿವಿನ ವಿಸ್ತಾರತೆಯನ್ನೇ ನುಂಗಿ ನೀರು ಕುಡಿದು ಬಿಡುತ್ತದೆ. ಮಕ್ಕಳಿದ್ದರೆ ಸ್ವರ್ಗ ಎಂದು ನಂಬಿಸಿರುವ ಈ ಜಗತ್ತು ಮಕ್ಕಳಿಲ್ಲದವರಿಗೆ ನೈತಿಕಶಕ್ತಿಯನ್ನು ತುಂಬುವ ಯಾವ ಪ್ರಯತ್ನಗಳನ್ನೂ ಮಾಡುವುದಿಲ್ಲ. ಏಕೆಂದರೆ ಇದು ಇಂಡಿಯಾ. ಇಲ್ಲಿ ನಂಬಿಕೆ ಹುಟ್ಟಿಸುವುದು ಗೊತ್ತೇ ಹೊರತು, ಅದರಿಂದ ಅಳಿವವರ ಬದುಕನ್ನು ಹಿಡಿದಿಡಲು ಮುಂದಾಗುವುದೇ ಇಲ್ಲ.

ಇಡೀ ಕಾದಂಬರಿಯ ಉದ್ದಕ್ಕೂ ಮತ್ತೆ ಮತ್ತೆ ತಾಳೆಮರ ಬಂದೂ ಬಂದೂ ಹೋಗುತ್ತದೆ. ಇದರೊಂದಿಗೆ ಹೆಂಡದ ರುಚಿಯೂ ಅಲ್ಲಲ್ಲಿ ನುಸುಳಿ ಮಾಯವಾಗುತ್ತದೆ. ಇದರೊಂದಿಗೆ ತೊಂಡುದೊಡ್ಡಿ, ಕಾಡು, ಕೃಷಿ ಮುಂತಾದವುಗಳ ಮೂಲಕ ಶ್ರಮ ಸಂಸ್ಕೃತಿಯ ಅನಿವಾರ್ಯ ನೆಲೆಗಳ ಅನಾವರಣ ಗಟ್ಟಿಯಾಗಿ ಈ ಕಾದಂಬರಿಯಲ್ಲಿ ನೆಲೆ ನಿಂತಿದೆ.


ಇಂಡಿಯಾದ ಅನೇಕ ಕಡೆ ದೇವರ ಹೆಸರಿನಲ್ಲಿ ನಡೆಯುವ ವ್ಯಭಿಚಾರ ಸುದ್ದಿಯಾಗುವುದಿಲ್ಲ. ಇದೆಲ್ಲವೂ ಒಪ್ಪಿತ ನೆಲೆಯಲ್ಲಿ ನಡೆದಂತೆ ಭಾಸವಾಗುತ್ತದೆ. ದೇವದಾಸಿ ಪದ್ಧತಿ, ಅಜಲು ಪದ್ಧತಿ, ಮುತ್ತು ಕಟ್ಟುವ, ಬಸವಿ ಬಿಡುವ ಪದ್ಧತಿ ಹೀಗೆ ಒಂದೆ ಈ ದೇಶದಲ್ಲಿ ಸರ್ವೇಸಾಮಾನ್ಯವಾಗಿ ನಡೆಯುತ್ತಿದ್ದವು. ಇಂದು ಇವುಗಳ ಕಡಿಮೆಯಾದರೂ ನಿಂತಿರುವುದರ ಬಗ್ಗೆ ... ಇಂತಹದೇ ಒಂದು ಪದ್ಧತಿ ಕಾದಂಬರಿಯ ಸಂಗೊಟ್ಟಯ ಮತ್ತು ಪಾವಾತ್ತಾ ದೇ... ಅದರಲ್ಲೂ ದೇವರು ಬೆಟ್ಟಕ್ಕೆ ಮರಳುವ ಹ... ದಿನದ ಜಾತ್ರೆ ಬಹಳ ವಿಶೇಷವಾದುದು. ಮ... ಮಕ್ಕಳಿಗಾಗಿ ದೇವರೊಂದಿಗೆ ಕೂಡುವ ಸಂಪ್ರದಾಯ ನೈತಿಕತೆ ಅನ್ನುವುದನ್ನು ... ಮಾಡಿ ಅಗೋಚರವಾದ ಸಂಬಂಧದ ಸೃಷ್ಟಿಸಿಬಿಡುತ್ತದೆ.

"ನನ್ನ ಗಂಡನಿಗೆ ಮನಃಪೂ... ಸಮ್ಮತಿಯಿಲ್ಲ. ನನ್ನ ಅಣ್ಣ ಒಪ್ಪಿಕೊ... ನಿನ್ನಂತೆ ಅವನು ನನ್ನನ್ನು ತನ್ನ ದೇ... ಸಮಾಗಮಿಸಿ ಇಟ್ಟುಕೊಳ್ಳಲು ಬಯ... ಕಿತ್ತು ಮತ್ತೊಬ್ಬರಿಂದ ಹಂಚಿಕೊಳ್ಳಲು ... ಒಮ್ಮೆಯೂ ಬಯಸನು. ಆದರೂ ... ಹುಡುಕಿಕೊಂಡು ಬರುತ್ತಿರುವೆನು. ನಾಲ್ಕು ... ಅವನ ತಲೆ ಎತ್ತಿರಬೇಕು. ತೊಂಡುದೊ... ಅಡಗಿಹೋಗಿರುವ ಅವನ ಉತ್ಸಾಹ ಮ... ಅವನ ಅಪ್ಪುಗೆಯಲ್ಲಿ ಮೊದಲಿಗಿಂತ ಪ್ರೇಮ... ಎಲ್ಲರಂತೆ ನಾವು ಎಲ್ಲಕಡೆ ಹೋಗಲು ... ಭಾಗವಹಿಸಲು ನೀನೇ ಸಹಾಯ ... ಅಪ್ಪಾ ಸಂಗೋಟ್ಟಯಾ.... ಅಮ್ಮಾ ಪಾ... ಎಂದು ದೇವರಲ್ಲಿ ಬೇಡಿಕೊಳ್ಳುವ ... ಮಾತಿನಲ್ಲಾಗಲೀ, ಮನದಲ್ಲಾಗಲೀ ... ಸುಳಿವು ಎಳ್ಳಷ್ಟೂ ಮುಖದೋರದು. ... ವ್ಯವಸ್ಥೆಯ ಬಲಿಪಶುವಾಗಿ ಪೊನ್ನಾ ಈ ... ಆಯ್ಕೆ ಮಾಡಿಕೊಳ್ಳುತ್ತಾಳೆ. ಇದು ... ತಂದೊಡ್ಡಬಹುದಾದ ಯಾವ ಭೀಕರತೆ... ಇಲ್ಲದೆ ತನ್ನನ್ನು ತಾನು ಅರ್ಪಿಸಿಕೊಂಡು...

ತಮಿಳುನಾಡಿನ ದೈವ ಮತ್ತು ಜನತೆ... ಕೊಂಡಿಯಾಗಿ ಕಾದಂಬರಿ ಮೂಡಿ... ಓದುತ್ತಾ ಹೋದಂತೆಲ್ಲಾ ನಮ್ಮ... ನಡೆಯುತ್ತಿರುವ ಸಂಗತಿಯಾಗಿ ನಿರೂಪಿತ... ಗಂಡುಹೆಣ್ಣಿನ ಸಂಬಂಧ, ಇಂಡಿಯಾದ ... ನೆಲೆಗಳ ವೈರುಧ್ಯ, ನೈತಿಕತೆಯ ... ಮರೆಮಾಚಿರುವ ಸತ್ಯಾಸತ್ಯಗಳ ... ದೈವ ಮತ್ತು ಜನತೆಯ ನಡುವಿನ ... ಮುಖಾಮುಖಿ ಇವೆಲ್ಲಾ ಸೇರಿ ಕಾದಂಬರಿ... ಮುಖವಾಣಿಯಂತೆ ಬಿಂಬಿತಗೊಂಡಿದೆ... ಅತ್ಯುತ್ತಮ ಕಾದಂಬರಿಯನ್ನು ಬರೆದ ... ಮುರುಗನ್ ಅವರು, ಇದನ್ನು ಅಷ್ಟೇ ... ಕನ್ನಡಕ್ಕೆ ಅನುವಾದಿಸಿದ ನಲ್ಲತಂಬಿ ಮ... ಪ್ರಕಟಿಸಿ ಜನತೆಯ ಓದುಗ ವಲಯಕ್ಕೆ ... ಲಂಕೇಶ್ ಪ್ರಕಾಶನ ಎಲ್ಲರೂ ಅಭಿನಂದ...

✍ ಡಾ. ಹೆಚ್.ಡಿ. ಉಮಾ...

ಸವಕಲೇ ಆದ್ಯತೆ ಆದಾಗ...



ವಿವಾದ ಹುಟ್ಟು ಹಾಕುವ ಸಂಭವನೀಯ ಸಾಧ್ಯತೆಗಳುಳ್ಳ ಹೇಳಿಕೆಗಳ ಚುಂಗು ಹಿಡಿದು ಜೋರು ದನಿಯಲ್ಲಿ ಕೂಗಾಡುವುದು ರಾಜಕೀಯ ಪಕ್ಷ ಮತ್ತದರ ಹಿಂಬಾಲಕರ ಪಾಲಿಗೆ ಈ ಪರಿಯ ಆದ್ಯತೆಯ ವಿಷಯವಾಗಬೇಕೆ ಮತ್ತದು ಸಮಾಜಕ್ಕೆ ಯಾವೆಲ್ಲ ಸಂದೇಶ ರವಾನಿಸುತ್ತಿರಬಹುದು?

ಜನರ ದೈನಂದಿನ ಬದುಕಿನೊಂದಿಗೆ ತಳುಕು ಹಾಕಿಕೊಂಡಿರುವ ಸಮಸ್ಯೆಗಳ ಕುರಿತು ಸೊಲ್ಲೆತ್ತುವ ಬದಲಿಗೆ, ತಮ್ಮ ಪೂರ್ವಗ್ರಹಗಳಿಗೆ ಪೂರಕವಲ್ಲದ ಹೇಳಿಕೆಗಳಿಗೆ ವಿವಾದದ ಬಣ್ಣ ಬಳಿಯುವ ಮೂಲಕವೇ ರಾಜಕೀಯ ಲಾಭ ಕುದುರಿಸಿಕೊಳ್ಳಲು ಹೊರಟಿರುವವರಿಗೆ ಪಲಾಯನವಾದವೇ ತಮ್ಮೆದುರು ಇರುವ ಸುಲಭ ದಾರಿ ಎಂದು ಮನವರಿಕೆಯಾಗಿ ಬಿಟ್ಟಿದೆಯೇ?

ಮಳೆ ಅಭಾವದಿಂದ ಒಂದೆಡೆ ರೈತರು, ಜನಸಾಮಾನ್ಯರು ಪರಿತಪಿಸುತ್ತಿದ್ದರೆ, ಮತ್ತೊಂದೆಡೆ ಪ್ರವಾಹದಿಂದಾಗಿ ಹಲವರ ಬದುಕು ಮೂರಾಬಟ್ಟೆಯಾಗಿದೆ. ಲಾಭದಾಯಕ ಕಸುಬಾಗಿ ಉಳಿಯದ ಬೇಸಾಯದಿಂದ ವಿಮುಖರಾಗಿ ಮಹಾನಗರಗಳತ್ತ ದೌಡಾಯಿಸುತ್ತಿರುವ ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಭರವಸೆ ನೀಡಿ ಅಧಿಕಾರಕ್ಕೆ ಏರಿದವರೆಲ್ಲ ಇದೀಗ ಹೂಡಿಕೆದಾರರನ್ನು ಸೆಳೆಯುವ ಕಾಯಕದಲ್ಲಿ ತಲ್ಲೀನರಾಗಿದ್ದಾರೆಯೇ ವಿನಾ, ಬಂಡವಾಳ ಹೂಡಿಕೆಗೂ ಉದ್ಯೋಗ ಸೃಷ್ಟಿಗೂ ನಡುವಿದ್ದ ಕೊಂಡಿಯಲ್ಲಿ ಮೂಡುತ್ತಿರುವ ಬಿರುಕುಗಳನ್ನು ಕಂಡರೂ ಕಾಣದವರಂತೆ ವರ್ತಿಸುತ್ತಿದ್ದಾರೆ. ನಮ್ಮ ಜೀವನ ಮಟ್ಟ ಸುಧಾರಿಸುವ ಆಶ್ವಾಸನೆ ನೀಡಿ, ಅದನ್ನು ಈಡೇರಿಸಲಾಗದೆ ಸೋಲುತ್ತಿರುವ ಮಹಾನುಭಾವರು ಹೂಡುತ್ತಿರುವ ದೇಶಭಕ್ತಿ, ಧರ್ಮ, ಗೋರಕ್ಷಣೆಯಂತಹ ಅಸ್ತ್ರಗಳಿಗೆ ನಾವು ಸುಲಭವಾಗಿ ತುತ್ತಾಗುತ್ತಿದ್ದೇವೆಯೇ ಎನ್ನುವ ಅನುಮಾನ ನಿಜವಾಗುವ ಲಕ್ಷಣಗಳು ಗೋಚರಿಸುತ್ತಿವೆ.

ಮಹದಾಯಿ ಮತ್ತು ಕಾವೇರಿ ವಿಚಾರದಲ್ಲಿ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ನೋಡಿದ, ಅಮ್ನೆಸ್ಟಿ ವಿರುದ್ಧ ಹೋರಾಟ ರೂಪಿಸಲು, ಮಾಜಿ ಸಂಸದೆ ರಮ್ಯಾ ಅವರು ನೀಡಿದ ಅಷ್ಟೇನೂ ಮಹತ್ವವಿರದ ಹೇಳಿಕೆಯನ್ನೇ ಮುಂದಿಟ್ಟುಕೊಂಡು ರಾಜಕೀಯದ ಬೇಳೆ ಬೇಯಿಸಿಕೊಳ್ಳಲು ಇನ್ನಿಲ್ಲದ ಹುರುಪಿನೊಂದಿಗೆ ಮುನ್ನುಗ್ಗಿದ ರಾಜ್ಯದ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಯ ಸೈದ್ಧಾಂತಿಕ ವಿಪರ್ಯಾಸವನ್ನು ಇವೆಲ್ಲ ತೋರುತ್ತವೆ.

ಜನಸಾಮಾನ್ಯರನ್ನು ಇನ್ನಿಲ್ಲದಂತೆ ಬಾಧಿಸುವ ಸಮಸ್ಯೆ... ಸರಿಸಿ, ಜಾತಿ ಮತ್ತು ಧರ್ಮದ ಧ್ರುವೀಕರಿಸುವ ಕಸರತ್ತನ್ನು ಪಕ್ಷಗಳ ನಾಯಕರು ... ರಾಷ್ಟ್ರದಾದ್ಯಂತ ದೇಶಭಕ್ತಿಯ ನಿರ್ದಿಷ್ಟ ಧರ್ಮವೊಂದರ ಆ... ನಂಬಿಕೆಗಳನ್ನು ಎತ್ತಿ ಹಿಡಿ... ಢಾಳಾಗಿ ಗೋಚರಿಸುತ್ತಿದೆ. ತಾ... ಬಂದರೆ ವಿದೇಶಗಳಲ್ಲಿರುವ ಕಪ್ಪು... ಭಾರತಕ್ಕೆ ವಾಪಸ್ ತಂದು ಜ... ಹಸನುಗೊಳಿಸುವ ... ಹೂಡುತ್ತೇವೆ. ಬೆಲೆ ಏರಿಕೆಗೆ ... ವಿಧಿಸುತ್ತೇವೆ. ಆರ್ಥಿಕ ಚ... ಉತ್ತೇಜನ ನೀಡುವ ಮೂಲ...



ಜಿಯೊ ಜಾಹೀರಾತಿನ ಒಳಗುಟ್ಟೇನಿರಬಹುದು?


ಟ

...ಗೆ ದೇಶದಾದ್ಯಂತ ಭಾರಿ ಸುದ್ದಿ ...ಡಿದ ವಿದ್ಯಮಾನವೆಂದರೆ ರಿಲಾಯನ್ಸ್‌ನ ...ಜಿಟಲ್ ಲೈಫ್ ಬಿಡುಗಡೆ ಕಾರ್ಯಕ್ರಮ ...ರುದಿನ ಮಾಧ್ಯಮಗಳಲ್ಲಿ ಪ್ರಕಟವಾದ ಜಾಹೀರಾತು. ಜಾಹೀರಾತಿನ ಶೇಕಡಾ ...ವಿಸ್ತೀರ್ಣವನ್ನು ನರೇಂದ್ರ ಮೋದಿಯ ...ತ್ರವೊಂದೇ ಆಕ್ರಮಿಸಿಕೊಂಡಿತ್ತು. ಈ ...ಸಾಕಷ್ಟು ಚರ್ಚೆಗಳಿಗೆ ಗ್ರಾಸವಾಯಿತು. ...ಧಾನಮಂತ್ರಿಯ ಸ್ಥಾನದಲ್ಲಿರುವ ವ್ಯಕ್ತಿ ಈ ...ಸಗಿ ಕಂಪೆನಿಯೊಂದರ ಜಾಹೀರಾತಿನಲ್ಲಿ ...ಸ್ಳುವುದು ಎಷ್ಟರಮಟ್ಟಿಗೆ ಸರಿ? ಐಟಿಬಿಟಿ ...ಹಲವಾರು ಪೈಪೋಟಿಗಾರರಿರುವಂತಹ ...ಲ್ಲಿ ಹೀಗೆ ಮಾಡಿರುವುದು ಪಕ್ಷಪಾತದ ... ಎಂಬಿತ್ಯಾದಿ ಪ್ರಶ್ನೆಗಳೆದ್ದವು. ...ಉತ್ತರ ಕಂಡುಕೊಳ್ಳಲು ಹೆಚ್ಚೇನೂ ...ಕಾದ ಅವಶ್ಯಕತೆ ಇಲ್ಲ. ಮೊತ್ತಮೊದಲಾಗಿ ...0ರ ಲಾಂಛನಗಳು ಮತ್ತು ಹೆಸರುಗಳು ... ತಡೆ) ಕಾಯ್ದೆಯ ಉಲ್ಲಂಘನೆ. ...ಯ್ದೆಯಲ್ಲಿ 'ಕೇಂದ್ರ ಸರಕಾರ ವಿಧಿಸುವ ...ಗೆ ಅನುಗುಣವಾಗಿರುವ ಸಂದರ್ಭಗಳನ್ನು ...ಡಿಸಿ........, ಸರಕಾರದ ಅನುಮತಿ ಇಲ್ಲದೆ ...ಹೆಸರು ಅಥವಾ ಲಾಂಛನವನ್ನು ವಾಣಿಜ್ಯ ...ಗಾಗಿ ಬಳಸಕೂಡದು' ಎಂದು ಸ್ಪಷ್ಟವಾಗಿ ...ಾಗಿದೆ. ಇದರರ್ಥ ಪ್ರಧಾನಮಂತ್ರಿ ಕಚೇ–...ತ ಅನುಮತಿ ಇಲ್ಲದೆ ಪ್ರಧಾನಿ ಚಿತ್ರವನ್ನು ...ಎಲ್ಲೂ ಬಳಸುವಂತಿಲ್ಲ. ಯಾರಾದರೂ ...ಯಾ ಉದ್ದೇಶಪೂರ್ವಕವಾಗಿ ಬಳಸಿದಾಗ ...ಧಾನಿ ಕಚೇರಿ ಗಮನಕ್ಕೆ ಬಂದ–... ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ. ...ಗೆ, ಇದೇ ಏಪ್ರಿಲ್‌ನಲ್ಲಿ ಮೋದಿ ಮತ್ತು ...ಮುಖ್ಯಮಂತ್ರಿ ಫಡ್ನಾವಿಸ್ ಚಿತ್ರಗಳಿದ್ದ ...ಗಳನ್ನು ಬಿಡುಗಡೆಗೊಳಿಸಿದ್ದ ಪುಣೆ–...ಲ್ ಎಸ್ಟೇಟ್ ಸಂಸ್ಥೆ ಮೇಪಲ್ ಬಳಿಕ ಆ ...ಗಳನ್ನು ವಾಪಸ್ ಪಡೆದುಕೊಳ್ಳಬೇಕಾಗಿ ...ಗಿರುವಾಗ ಖುದ್ದು ತಾನೇ ಅಥವಾ ತನ್ನ ...ಮೂಲಕ ಪ್ರತಿಯೊಂದು ಸಂಗತಿಯನ್ನೂ ... ಗಮನಿಸುವ ಮೋದಿಗೆ ರಿಲಾಯನ್ಸ್‌ನ ...ರಾತಿನಲ್ಲಿ ತನ್ನ ಛಾಯಾಚಿತ್ರವನ್ನು ... ಬಗ್ಗೆ ತಿಳಿದಿರಲಿಲ್ಲ ಎಂದರೆ ಅದನ್ನು ...ವುದಿಲ್ಲ. ಇದಲ್ಲದೆ ಮೋದಿ ಧರಿಸಿದ್ದ ...ಬಣ್ಣವೂ ಜಿಯೊನ ಲೋಗೊ ಬಣ್ಣವೂ ...ಗಿರುವುದನ್ನೂ – ಕಡು ನೀಲಿ – ...ಯುವೆನ್ನಲು ಸಾಧ್ಯವೆ?

...ರಿಂದ ರಿಲಾಯನ್ಸ್ ಜಾಹೀರಾತಿನಲ್ಲಿ ... ಚಿತ್ರವನ್ನು ಮುದ್ರಿಸಲು ಒಪ್ಪಿಗೆ ...ಕೆಂದು ಊಹಿಸಿದರೆ ತಪ್ಪಾಗಲಾರದೆಂದು ... ಇಲ್ಲಿ ಎರಡು ವಿಷಯಗಳಿವೆ. ಒಂದು, ...ೋದಿ ಬರೀ ಒಂದು ಸೂತ್ರದ ಗೊಂಬೆ; ...ಆಡಿಸುತ್ತಾ ಕುಣಿಸುವವರು ಆರೆಸ್ಸೆಸ್ ... ಮತ್ತು ಅಂಬಾನಿ, ಅದಾನಿ ಮೊದಲಾದ ...ಟ್ ಕುಳಗಳು. ಎರಡನೆಯದಾಗಿ ಜಿಯೊ ... ಸಮಯ ಮತ್ತು ಜಾಹೀರಾತಿನ ಚಿತ್ರಕ್ಕೂ ರಿಲಾಯನ್ಸ್‌ನ 11,000 ಕೋಟಿ ರೂಪಾಯಿಗಳಿಗೂ ಮಿಕ್ಕಿದ ಅನಿಲ ಹಗರಣಕ್ಕೂ ಸಂಬಂಧವಿರುವಂತೆ ತೋರುತ್ತದೆ. ಬನ್ನಿ, ಈ ಅನಿಲ ಹಗರಣದ ಕುರಿತು ಒಂದಿಷ್ಟು ತಿಳಿದುಕೊಳ್ಳೋಣ.

ರಿಲಾಯನ್ಸ್ ಗುಂಪು ಬಂಗಾಲ ಕೊಲ್ಲಿಯಲ್ಲಿ ಕೃಷ್ಣಾ–ಗೋದಾವರಿ ನದಿಮುಖಜ ಪ್ರದೇಶದಲ್ಲಿ ನೈಸರ್ಗಿಕ ಅನಿಲ ಶೋಧನೆ ಮತ್ತು ಉತ್ಪಾದನೆಯ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವ ವಿಚಾರ ನಿಮಗೆಲ್ಲ ತಿಳಿದಿರಬಹುದು. ವಾಸ್ತವದಲ್ಲಿ ರಿಲಾಯನ್ಸ್ ಇದನ್ನು ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೋರೇಷನ್‌ನಿಂದ (ಜಿಎಸ್‌ಪಿಸಿ) ಗುತ್ತಿಗೆಗೆ ವಹಿಸಿಕೊಂಡಿದೆ (ನರೇಂದ್ರ ಮೋದಿ ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಮೆರೆಯುತ್ತಿದ್ದ ಕಾಲದಲ್ಲಿ ಜಿಎಸ್‌ಪಿಸಿಯ ಈ ಸಮಗ್ರ ಮಹತ್ವಾಕಾಂಕ್ಷಿ ಯೋಜನೆಯ ಕುರಿತು ಜನರಿಗೆ ಮಂಕುಬೂದಿ ಎರಚಲಾಗಿರುವ ವಿಚಾರದ ಕುರಿತು ಹಿಂದಿನ ಒಂದು ಅಂಕಣದಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ). ರಿಲಾಯನ್ಸ್ ಸಂಸ್ಥೆ ನೈಸರ್ಗಿಕ ಅನಿಲ ಶೋಧನೆ ಮತ್ತು ಉತ್ಪಾದನೆಯ ಕಾರ್ಯವನ್ನು ನಿಕೊ ರಿಸೋರ್ಸಸ್ ಎಂಬ ವಿದೇಶೀ ಕಂಪೆನಿ ಜೊತೆ ಸೇರಿಕೊಂಡು ಮಾಡುತ್ತಿದೆ. ಪ್ರಸಕ್ತ ಕಥಾನಕ ಪ್ರಾರಂಭವಾಗುವುದು ಜುಲೈ 2013ರಿಂದ. ನೈಸರ್ಗಿಕ ಅನಿಲ ಉತ್ಪಾದನೆಗೆ ಸಂಬಂಧಪಟ್ಟ ವಿವಾದವೊಂದು ಭಾರಿ ಸುದ್ದಿ ಮಾಡಿದ ಕಾಲದಿಂದ. ರಿಲಾಯನ್ಸ್ ಮತ್ತು ಸಾರ್ವಜನಿಕ ವಲಯದ 'ತೈಲ ಮತ್ತು ನೈಸರ್ಗಿಕ ಅನಿಲ ನಿಗಮ'ದ (ಒಎನ್‌ಜಿಸಿ) ಅನಿಲ ಭಂಡಾರಗಳ ನಡುವೆ ಸಂಪರ್ಕ ಇದೆ ಎಂಬುದೆ ವಿವಾದದ ವಸ್ತುವಾಗಿತ್ತು. ಒಎನ್‌ಜಿಸಿ ಅಂದು ಹೈಡ್ರೋಕಾರ್ಬನ್ಸ್ ಮಹಾನಿರ್ದೇಶಕರಿಗೆ (ಹೈಡ್ರೋಕಾರ್ಬನ್ಸ್ ಮಹಾನಿರ್ದೇಶಕರು ತೈಲ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಕೈಕೆಳಗೆ ಕಾರ್ಯಾಚರಿಸುತ್ತಿದ್ದು ದೇಶದಲ್ಲಿ ನೈಸರ್ಗಿಕ ಅನಿಲ ಉತ್ಪಾದನೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಾರೆ) ಪತ್ರವೊಂದನ್ನು ಬರೆದು ತನ್ನ ತೈಲ ಬ್ಲಾಕಿನ ಪಕ್ಕದಲ್ಲಿರುವ ರಿಲಾಯನ್ಸ್‌ನ ಬ್ಲಾಕ್ ಬಗ್ಗೆ ಮಾಹಿತಿ ಕೋರಿತ್ತು. ವಿವಾದವನ್ನು ಬಗೆಹರಿಸುವ ಪ್ರಯತ್ನದ ಭಾಗವಾಗಿ ಲೋಕಸಭಾ ಚುನಾವಣೆಗೆ ಮುನ್ನ ಕೇಂದ್ರ ಸರಕಾರ, ಒಎನ್‌ಜಿಸಿ ಮತ್ತು ರಿಲಾಯನ್ಸ್ ನಡುವೆ ಮಾತುಕತೆಗಳು ನಡೆದವು. ಅಂತಿಮವಾಗಿ ಓರ್ವ ಸ್ವತಂತ್ರ, ಅಂತಾರಾಷ್ಟ್ರೀಯ ಸಲಹಾಗಾರನ ಸೇವೆ ಪಡೆದುಕೊಳ್ಳುವ ಜಂಟಿ ನಿರ್ಧಾರಕ್ಕೆ ಬರಲಾಯಿತು. ಅಂತೆಯೆ ಅಮೆರಿಕದ DeGolyer & MacNaughton ಸಂಸ್ಥೆಯನ್ನು ಸಲಹಾಗಾರನಾಗಿ ನೇಮಿಸಲಾಯಿತು. ನೇಮಕಾತಿ ಮತ್ತು ಅದಕ್ಕೆ ಸಂಬಂಧಪಟ್ಟ ವಿವಿಧ ಗೊತ್ತುಪಾಡುಗಳಿಗೆ ಒಎನ್‌ಜಿಸಿ, ರಿಲಾಯನ್ಸ್ ಎರಡೂ ತಮ್ಮ ಸಮ್ಮತಿಯನ್ನು ಸೂಚಿಸಿದ್ದವು.

ಒಎನ್‌ಜಿಸಿ ಈ ಅಂತಾರಾಷ್ಟ್ರೀಯ ಸಲಹಾಗಾರನ ಶೋಧನಾ ವರದಿ ಬಹಿರಂಗವಾಗುವತನಕ ಕಾಯಲಿಲ್ಲ. ಅದು ದಿಲ್ಲಿ ಹೈಕೋರ್ಟಿನಲ್ಲಿ ದಾವೆಯೊಂದನ್ನು ಹೂಡಿ 'ರಿಲಾಯನ್ಸ್‌ನ ಕೊಳವೆಬಾವಿಗಳನ್ನು ವಾರೆಯಾಗಿ ತೋಡಲಾಗಿದೆ. ಒಎನ್‌ಜಿಸಿಯ ಭಂಡಾರಗಳಿಂದ ಅನಿಲ ಹೊರತೆಗೆಯುವುದೆ ಇದರ ಸ್ಪಷ್ಟ ಉದ್ದೇಶವಾಗಿದೆ. ಅದು ಒಎನ್‌ಜಿಸಿಯ ಬಾವಿಗಳಿಂದ ರೂ. 30,000 ಕೋಟಿಯಷ್ಟು ಬೆಲೆಬಾಳುವ ಅನಿಲವನ್ನು ಹೊರತೆಗೆದಿದೆ'. (ಆರೋಪಿ ಬಡವನಾಗಿದ್ದರೆ 'ಕಳವು' ಎನ್ನಲಾಗುತ್ತದೆ; ಆರೋಪಿ ಶ್ರೀಮಂತನಾಗಿದ್ದರೆ ಬೇ–ರೆಯೆ ಹೆಸರು!) ಎಂದು ಆರೋಪಿಸಿತು. ಮುಂದೆ ಡಿಸೆಂಬರ್ 2015ರಲ್ಲಿ ಸಲಹಾಗಾರ ಸಂಸ್ಥೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ಹೀಗೆ ಹೇಳಲಾಗಿದೆ: 'ರಿಲಾಯನ್ಸ್‌ನ ಕೆಜಿ–ಡಿ6 ಬ್ಲಾಕು ಮತ್ತು ಒಎನ್‌ಜಿಸಿಯ ಕೆಜಿ–ಡಿ5, ಗೋದಾವರಿ ಪಿಎಂಎಲ್ ಬ್ಲಾಕುಗಳ ನಡುವೆ ಸಂಪರ್ಕ ಇರುವುದನ್ನು ಕಂಡುಕೊಳ್ಳಲಾಗಿದೆ. ಒಎನ್‌ಜಿಸಿಗೆ ಸೇರಿದ 11.122 ಬಿಲಿಯ ಘನಮೀಟರ್ ಅನಿಲ ರಿಲಾಯನ್ಸ್‌ನ ಬ್ಲಾಕ್‌ನೊಳಗೆ ಬಂದಿದೆ. ಅದರ ಬೆಲೆ ರೂ. 11,055 ಕೋಟಿಯಷ್ಟಾಗುತ್ತದೆ'! ಇಷ್ಟೊಂದು ದುಡ್ಡು ವೆಚ್ಚ ಮಾಡಿ ತಯಾರಿಸಲಾದ ವರದಿಗೆ ಮೋದಿ ಸರ್ಕಾರದ ಪ್ರತಿಕ್ರಿಯೆ ಹೆಚ್ಚುಕಡಿಮೆ ಶೂನ್ಯವಾಗಿತ್ತು. ಎರಡು ವಾರಗಳು ಕಳೆದರೂ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರ ಕೊನೆಗೆ "ಸಲಹಾಗಾರನ ವರದಿಯನ್ನು ಅಧ್ಯಯನ ಮಾಡಲೆಂದು" ನ್ಯಾ| ಎ.ಪಿ.ಶಾ ನೇತೃತ್ವದಲ್ಲಿ ಒಂದು ಏಕಸದಸ್ಯ ಸಮಿತಿಯನ್ನು ರಚಿಸಿತು. ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಲಹೆ ನೀಡುವಂತೆ ಸಮಿತಿಗೆ ಆದೇಶಿಸಲಾಯಿತು.



ಇದೇ ಆಗಸ್ಟ್ 31ರಂದು ತನ್ನ ವರದಿಯನ್ನು ಸಲ್ಲಿಸಿರುವ ನ್ಯಾ| ಎ.ಪಿ.ಶಾ ಸಮಿತಿ ಕೂಡಾ ರಿಲಾಯನ್ಸ್ ಕಂಪೆನಿ ಒಎನ್‌ಜಿಸಿಗೆ ಸೇರಿದ ಬ್ಲಾಕ್‌ನಿಂದ ನೈಸರ್ಗಿಕ ಅನಿಲವನ್ನು ಹೊರತೆಗೆದು "ಅನ್ಯಾಯಯುತ ಲಾಭ" ಪಡೆದುಕೊಂಡಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಶಾ ಸಮಿತಿ ತನ್ನ ವರದಿಯಲ್ಲಿ, "ಸಲಹಾಗಾರನ ವರದಿ ಸರಿಯಾಗಿರುವಂತೆ ತೋರುತ್ತದೆ. ಅದರಲ್ಲಿ ಹುಳುಕು ಕಂಡುಹಿಡಿಯುವ ಹಾಗೆ ಇಲ್ಲ. ಆ ವರದಿಯನ್ನು ಪ್ರಶ್ನಾರ್ಹ ವಿಧಾನಗಳಲ್ಲಿ ತಯಾರಿಸಲಾಗಿದೆ ಎನ್ನುವುದನ್ನು ನಂಬಲು ಕಷ್ಟ" ಎಂದು ಹೇಳಿದೆ. ಇದಲ್ಲದೆ 2003ರ ಮೌಲ್ಯನಿರ್ಣಯ ವರದಿಯಲ್ಲಿಯೂ ರಿಲಾಯನ್ಸ್‌ಗೆ ತನ್ನ ಬ್ಲಾಕ್ ಒಎನ್‌ಜಿಸಿಯ ಬ್ಲಾಕ್‌ನೊಂದಿಗೆ ಸಂಪರ್ಕ ಹೊಂದಿರುವುದರ ಅರಿವು ಮೊದಲೆ ಇತ್ತೆಂಬ ವಾಸ್ತವಾಂಶ ಮೇಲುನೋಟಕ್ಕೇ ಗೋಚರಿಸುತ್ತದೆ ಎಂದು ತಿಳಿಸಿದೆ. ಈ ಮೌಲ್ಯನಿರ್ಣಯ ವರದಿಯನ್ನು ಹೈಡ್ರೋಕಾರ್ಬನ್ಸ್ ಮಹಾನಿರ್ದೇಶಕರ ಗಮನಕ್ಕೆ ಏಕೆ ತರಲಿಲ್ಲವೆಂದು ಸಮಿತಿ ರಿಲಾಯನ್ಸ್‌ಅನ್ನು ತರಾಟೆಗೆ ತೆಗೆದುಕೊಂಡಿದೆ. ಅಷ್ಟು ಮಾತ್ರವಲ್ಲ, ಸಲಹಾಗಾರನ ವರದಿ ಮಾರ್ಚ್ 2015ರ ವರೆಗೆ ಸೀಮಿತವಾಗಿರುವುದರಿಂದ ಅದರ ನಂತರವೂ ಅನಿಲ ಸೋರಿಕೆಯಾಗಿರುವ ಬಗ್ಗೆ ಸರಕಾರ ತನಿಖೆ ಮಾಡಬೇಕೆಂದೂ ಸೂಚಿಸಿದೆ. ಇದೆಲ್ಲ ಮೊದಲೆ ಗೊತ್ತಿದ್ದೂ 6 ವರ್ಷಗಳ ಕಾಲ ಯಾವುದೇ ಕ್ರಮ ಕೈಗೊಳ್ಳದೆ ಸುಮ್ಮನಿದ್ದ ಒಎನ್‌ಜಿಸಿ ವಿರುದ್ಧವೂ ಸಮಿತಿ ಟೀಕಾಪ್ರಹಾರ ಮಾಡಿದೆ. ಕೊನೆಯದಾಗಿ ರಿಲಾಯನ್ಸ್ ಹೀಗೆ ಹೊರತೆಗೆದಿರುವ ಅನಿಲದ ಮೌಲ್ಯವನ್ನು ವಸೂಲಿ ಮಾಡುವ ಹಕ್ಕಿರುವುದು ಭಾರತ ಸರಕಾರಕ್ಕೆ ಹೊರತು ಒಎನ್‌ಜಿಸಿಗೆ ಅಲ್ಲ ಎಂಬುದನ್ನು ಸಮಿತಿ ಸ್ಪಷ್ಟಪಡಿಸಿದೆ. ಇದು ಮುಕೇಶ್ ವರ್ಸಸ್ ಅನಿಲ್ ಅಂಬಾನಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ 2010ರ ಮೇ 7ರಂದು ನೀಡಿರುವ ತೀರ್ಪಿಗೆ ಅನುಗುಣವಾಗಿದೆ. ನೈಸರ್ಗಿಕ ಅನಿಲ ಭಾರತದ ಜನತೆಗೆ ಸೇರಿದ್ದಾಗಿದ್ದು ಸರಕಾರ ಅದರ ಸುಫರ್ದುದಾರ ಅಷ್ಟೆ ಎಂದು ಸರ್ವೋಚ್ಚ ನ್ಯಾಯಾಲಯ ಅಂದು ಸ್ಪಷ್ಟಪಡಿಸಿತ್ತು.

ಶಾ ಸಮಿತಿಯ ವರದಿ ಸಾರ್ವಜನಿಕರ ಕಣ್ಣಿಗೆ ಬೀಳುವುದು ರಿಲಾಯನ್ಸ್‌ಗೆ ಸುತಾರಾಂ ಇಷ್ಟವಿರಲಿಲ್ಲ. ಅದು ವರದಿಯನ್ನು ಮುಚ್ಚಿಡಲು ಬಯಸಿತ್ತು. ವರದಿಯ 5ನೆ ಅಧ್ಯಾಯದಲ್ಲಿರುವ ಈ ಪ್ಯಾರಾ ಗಮನಿಸಿ: "ಸಮಿತಿ ನೀಡುವ ಸಲಹೆಗಳು ತನ್ನನ್ನು ಬಾಧ್ಯವಾಗಿಸುವುದಿಲ್ಲವಾದರೂ ಅದನ್ನು ಸಾರ್ವಜನಿಕರಿಗೆ ಬಿಡುಗಡೆಗೊಳಿಸುವುದರಿಂದ ರಿಲಾಯನ್ಸ್‌ಗೂ ಅದರ ಪ್ರತಿಷ್ಠೆಗೂ ತುಂಬಲಾರದ ನಷ್ಟ ಉಂಟಾಗಲಿದೆ ಎಂದು ರಿಲಾಯನ್ಸ್ ಸಮಿತಿಗೆ ತಿಳಿಸಿತು. ಭಾರತ ಸರಕಾರ ಸಮಿತಿಯ ಸಲಹೆಗಳ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸಬಹುದಾಗಿದೆ".

ಸುಮಾರು ಒಂದು ತಿಂಗಳ ಹಿಂದೆ ಭಾರತದ ಮಹಾಲೆಕ್ಕ ಪರಿಶೋಧಕರು (ಸಿಎಜಿ) ಸಲ್ಲಿಸಿರುವ ವರದಿಯಲ್ಲಿ ಕೂಡ ಕೆಜಿ–ಡಿ6 ಬ್ಲಾಕ್‌ನ ಬಾಬತ್ತು ರಿಲಾಯನ್ಸ್‌ನಿಂದ ಸುಮಾರು 9,307 ಕೋಟಿ ರೂಪಾಯಿ ಹೆಚ್ಚುವರಿ ಮೊತ್ತವನ್ನು ಸಂಗ್ರಹಿಸಬೇಕಾಗಿದೆ ಎಂದು ಹೇಳಲಾಗಿದೆ. ರಿಲಾಯನ್ಸ್ ಸಂಸ್ಥೆ ಒಎನ್‌ಜಿಸಿಯ ಬ್ಲಾಕಿನಿಂದ ಅನಿಲವನ್ನು ಹೊರತೆಗೆದಿರುವುದು ನಿಜವೆಂದು ಕೇಂದ್ರ ಸರಕಾರ ಒಪ್ಪಿದಲ್ಲಿ ರಿಲಾಯನ್ಸ್ ನೀಡಬೇಕಿರುವ ಪರಿಹಾರದ ಮೊತ್ತವನ್ನು ಗ್ಯಾಸ್ ಉತ್ಪಾದನೆ ಪ್ರಾರಂಭವಾದಂದಿನಿಂದ, ಅಂದರೆ 2009ರ ಏಪ್ರಿಲ್‌ನಿಂದ, ಲೆಕ್ಕಹಾಕಬೇಕಾಗುತ್ತದೆಂದು ಸಿಎಜಿ ಅಭಿಪ್ರಾಯಪಟ್ಟಿದೆ. ಒಎನ್‌ಜಿಸಿ ಬಹುಶಃ ಇದೇ ಹಿನ್ನೆಲೆಯಲ್ಲಿ 30,000 ಕೋಟಿ ರೂಪಾಯಿಗಳ ಪರಿಹಾರ ಕೇಳಿರಬೇಕೆಂದು ತೋರುತ್ತದೆ.

ಮೋದಿ ಸರ್ಕಾರ ಶಾ ಸಮಿತಿಯ ಶೋಧನೆಗಳು ಮತ್ತು ಅಭಿಪ್ರಾಯಗಳೊಂದಿಗೆ ಸಿಎಜಿ ವರದಿಯನ್ನೂ ಸ್ವೀಕರಿಸಿದಲ್ಲಿ ರಿಲಾಯನ್ಸ್ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗೇನಾದರೂ ಆದರೆ ರಿಲಾಯನ್ಸ್‌ನ ಆರ್ಥಿಕ ಸಾಮ್ರಾಜ್ಯದಲ್ಲಿ ಭಾರಿ ಅಲ್ಲೋಲಕಲ್ಲೋಲ ಉಂಟಾಗಲಿದೆ. ತಿಳಿಯಿತೆ ರಿಲಾಯನ್ಸ್‌ನ ಜಿಯೊ ಬಿಡುಗಡೆ ಮತ್ತು ಜಾಹೀರಾತಿನ ಹಿಂದಿರುವ ಗುಟ್ಟೇನೆಂದು!!?? ಹೀಗಿರುವಾಗ ರಿಲಾಯನ್ಸ್‌ನ ವಿರುದ್ಧ ಕಾನೂನು ಕ್ರಮ ಜರುಗಲಿದೆ ಎಂದು ಯಾರಾದರೂ ಭಾವಿಸಿದರೆ ಅದು ಬರೀ ಕಲ್ಪನಾಲೋಕದ ವಿಹಾರವಾಗಲಿದೆ.

ಸುರೇಶ್ ಭಟ್ ಬಾಕ್ರಬೈಲ್

(ಆಧಾರ: scroll.in ನಲ್ಲಿ ಸುಭೀರ್ ಘೋಷ್ ಲೇಖನ; ವಿವಿಧ ವರದಿಗಳು)

...ಪಕಾಸಗಳನ್ನು ಸೃಷ್ಟಿಸಿ ನಿರುದ್ಯೋಗ ... ಹೆಚ್ಚಾಗುತ್ತಿವೆ. ಬಲಿಷ್ಠ ದೇಶ ... ಉತ್ತಮ ಬಾಂಧವ್ಯ ... ಪಾಕಿಸ್ತಾನ ಮತ್ತು ಚೀನಾಕ್ಕೆ ... [illegible]

ಅಪ್ರಾಪ್ತಪ್ರೌಢ[illegible]ತನದಲ್ಲಿ ಮುಳುಗೇಳುತ್ತಿದೆ. ವಿರೋಧ ಪಕ್ಷಗಳ ನಿಷ್ಕ್ರಿಯತೆಯಿಂದಾಗಿ ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಪಕ್ಷದ ಆಟಾಟೋಪಕ್ಕೆ ಕಡಿವಾಣವೇ ಇಲ್ಲದಂತಾಗಿದೆ.

ಇನ್ನು ರಾಜ್ಯದಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಇಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿರುವ ಬಿಜೆಪಿ ನಾಯಕರು, ಮೇಲಿನಿಂದ ಉದುರುವ ಅಜೆಂಡಾ ಮುಂದಿಟ್ಟುಕೊಂಡು ಯಾತ್ರೆಗಳನ್ನು ನಡೆಸುತ್ತಾರೆಯೇ ವಿನಃ, ಸ್ಥಳೀಯ ಸಮಸ್ಯೆಗಳನ್ನು ಬಹುತೇಕ ಸಂದರ್ಭಗಳಲ್ಲಿ ತಮ್ಮ ವ್ಯಾಪ್ತಿ ಪ್ರದೇಶಕ್ಕೆ ಒಳಪಡದ ವಿಚಾರಗಳೆಂದೇ ಭಾವಿಸುತ್ತಾರೆ. ರೈತರ, ಜನಸಾಮಾನ್ಯರ ಸಮಸ್ಯೆಗಳಾವುವೂ ಇವರಿಗೆ ಮುಖ್ಯವಾಗುವುದೇ ಇಲ್ಲ. ಅದರಬದಲು ಮತ್ತೆ ಜಾತಿ ಮುಂದಿಟ್ಟುಕೊಂಡು ರಾಜಕೀಯ ಮಾಡುವ ಹಳೆ ಮಾದರಿಯನ್ನೇ ಅಪ್ಪಿಕೊಳ್ಳುತ್ತಾರೆ. ಅವರು 'ಅಹಿಂದ' ಕಟ್ಟಿದರೆಂದು ಇವರು 'ಹಿಂದ'ದ ಹಿಂದೆ ಬೀಳುತ್ತಾರೆ.

ರಾಜಕೀಯ ಪಕ್ಷಗಳ ಆದ್ಯತೆಗಳ ಪಟ್ಟಿಯಲ್ಲಿ ಅಲಕ್ಷಿಸಬಹುದಾದ ವಿಚಾರಗಳಿಗೆ ಇನ್ನಿಲ್ಲದ ಮನ್ನಣೆ ದೊರೆಯುತ್ತಿರುವುದರ ಹಿನ್ನೆಲೆಯಲ್ಲಿ, ನಮ್ಮೆಲ್ಲರ ಹೊಣೆಗೇಡಿತನದ ಕೊಡುಗೆಯೂ ಅಪಾರವಾಗಿರುವಂತೆ ತೋರುತ್ತಿದೆ. ಬಹಿರಂಗದಲ್ಲಿ ನಾವು ಬಿಟ್ಟಿದ್ದೇವೆಂದು ಬೀಗುವ ಸ್ವಜಾತಿ ಮತ್ತು ಧರ್ಮದೆಡೆಗಿನ ಹುಚ್ಚು ಅಭಿಮಾನವನ್ನು ಅಂತರಂಗದಲ್ಲಿ ಮತ್ತಷ್ಟು ತೀವ್ರತೆಯೊಂದಿಗೆ ಕಾಪಿಟ್ಟುಕೊಂಡಿರುವುದನ್ನು ಅಲ್ಲಗಳೆಯಲಾದೀತೆ? ಹೀಗಾಗಿಯೇ ಏನೋ ಇದುವರೆಗೂ ನಮ್ಮ ಕಿವಿಗೆ ಬೀಳದಿದ್ದ ಜಾತಿಯೊಳಗಿನ ಒಳಪಂಗಡಗಳೆಲ್ಲವೂ ಇದೀಗ ಮೇಲೇಳುತ್ತ, ಒಳಪಂಗಡಗಳೇ ಪ್ರತ್ಯೇಕ ಜಾತಿಗಳಾಗಿ ಅದಕ್ಕೆ ಒಬ್ಬೊಬ್ಬರು ನಾಯಕರು ಹುಟ್ಟಿಕೊಂಡು ಈಗಾಗಲೇ ಕಟ್ಟಿಕೊಂಡಿರುವ ಗೋಡೆಯೊಳಗೇ ಮತ್ತಷ್ಟು ಗೋಡೆಗಳನ್ನು ಮೇಲೆತ್ತಲು ತಳಪಾಯ ಹಾಕುತ್ತಲೇ ಇದ್ದೇವೆ. ತಳಪಾಯಕ್ಕಾಗಿ ತೋಡುತ್ತಿರುವ ಗುಂಡಿಯೊಳಗೆ ನಮ್ಮನ್ನು ನಾವೇ ತಳ್ಳಿಕೊಳ್ಳುವ ವಿಚಿತ್ರ ಹುಮ್ಮಸ್ಸೊಂದು ನಮ್ಮೆಲ್ಲರನ್ನೂ ಆವರಿಸಿದೆ. ನಮ್ಮನ್ನು ಆಳುವವರಿಗೂ ಈಗಾಗಲೇ ಬಿದ್ದಿರುವವರನ್ನು ಗುಂಡಿಯಿಂದ ಮೇಲೆತ್ತುವುದಕ್ಕಿಂತ, ಅದರೊಳಗೆ ತಳ್ಳುವುದೇ ಸುಲಭವಾಗಿ ತೋರುತ್ತಿದೆ.

ಆಳುವ ಪಕ್ಷದ ನಡೆ ವಿರೋಧಿಸುವವರೆಲ್ಲರಿಗೂ ವಿರೋಧ ಪಕ್ಷವೊಂದರ ಚೇಲಾ ಪಟ್ಟ ಕಟ್ಟಿ ಇರಿಸುಮುರಿಸು [illegible]ಮಾಡುವುದು. ವಂದಿಮಾಗಧರ ಪಡೆಯನ್ನಷ್ಟೆ [illegible] ಮೆರೆಯಲು ಹೊರಟಿರುವವರ ಪಾಲಿಗೆ [illegible]ಅಸ್ತ್ರವಾಗಿ ಮಾರ್ಪಟ್ಟಿದೆ. ವಿರೋಧಿಸಲೇಬೇಕಿರುವುದನ್ನೆಲ್ಲ ವಿರೋಧಿಸುವವರಿಗೆ ದೇಶದ್ರೋಹಿಗಳ ಪಟ್ಟ ಕಟ್ಟಿದರೂ ಚಿಂತೆಯಿಲ್ಲ. ಆದರೆ, ಮತ್ತೊಂದು ಪಕ್ಷದ ಚೇಲಾ ಎನ್ನುವ ಮೂಲಕ ಆಳುವ ಪಕ್ಷದೆಡೆಗಿನ ತಮ್ಮ ಭಕ್ತಿಗೆ ತಾವೇ ಕನ್ನಡಿ ಹಿಡಿದುಕೊಳ್ಳುವುದು ಬೇಡ.

ಎಚ್.ಕೆ.ಶರತ್, ಹಾಸನ

ಹುತಾತ್ಮರಾದ ಚಿಲಿ ರಾಷ್ಟ್ರಪತಿ ಅಲೆಂಡೆ ಸ್ಮರಣೆ




ರಂಜಾನ್ ದರ್ಗಾ

ಚಿಲಿ ದೇಶದ ವಿಶ್ವವಿಖ್ಯಾತ ಕವಿ ಪಾಬ್ಲೊ ನೆರುಡಾ, ರಾಜಧಾನಿ ಸ್ಯಾಂಟಿಯಾಗೊದಲ್ಲಿ 1973ನೇ ಸೆಪ್ಟೆಂಬರ್ 23ರಂದು ನಿಗೂಢವಾಗಿ ನಿಧನರಾದರು. ನೆರುಡಾ ಸಾವಿಗೆ 12 ದಿನಗಳ ಮುಂಚೆ ಚಿಲಿ ಸೈನ್ಯದ ಮಹಾದಂಡನಾಯಕ ಅಗೊಸ್ತೊ ಫಿನೊಶೆ, ಅಮೆರಿಕದ ನೆರವಿನೊಂದಿಗೆ ರಾಷ್ಟ್ರಪತಿ ಭವನ 'ಲಾ ಮೊನೆದಾ' ಮೇಲೆ ಬಾಂಬುದಾಳಿ ಮಾಡಿ ಚಿಲಿಯ ಮೊದಲ ಚುನಾಯಿತ ಸಮಾಜವಾದಿ ಸರ್ಕಾರದ ರಾಷ್ಟ್ರಪತಿ ಸಾಲ್ವಡೊರ್ ಅಲೆಂಡೆ ಅವರನ್ನು ಕೊಲೆ ಮಾಡಿದ. ಅವರ ಪಾಪ್ಯುಲರ್ ಯೂನಿಟಿ ಸರ್ಕಾರವನ್ನು ಉರುಳಿಸಿ ಸರ್ವಾಧಿಕಾರಿಯಾದ. 1973ನೇ ಸೆಪ್ಟೆಂಬರ್ 11 ರಂದು ಚಿಲಿಯಲ್ಲಿ ಪ್ರಾರಂಭವಾದ ಆತನ ಸರ್ವಾಧಿಕಾರ 17 ವರ್ಷಗಳ ವರೆಗೆ ಮುಂದುವರಿಯಿತು.

ಅಮೆರಿಕದ ಬಹುರಾಷ್ಟ್ರೀಯ ಬಂಡವಾಳಗಾರರ ಹಿಡಿತದಲ್ಲಿದ್ದ ಚಿಲಿಯ ತಾಮ್ರದ ಗಣಿಗಳನ್ನು ಅಲೆಂಡೆ ಅವರು ಯಾವುದೇ ಪರಿಹಾರ ಕೂಡ ಕೊಡದೆ ರಾಷ್ಟ್ರೀಕರಣಗೊಳಿಸಿದ್ದು ಐತಿಹಾಸಿಕವಾಗಿತ್ತು. ಜನತೆಯ ಹೋರಾಟಗಳ ಮಧ್ಯೆ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ಅಲೆಂಡೆ ಅವರಿಗೆ ಜನತೆಯ ಆಶೋತ್ತರಗಳಿಗೆ ಬಾಯಿಯಾಗುವುದು ಸಹಜವಾಗಿತ್ತು. ತಮ್ಮ ಜನರನ್ನು ಪ್ರೀತಿಸುವುದು ಎಂದರೆ ಸುಲಿಗೆಯನ್ನು ವಿರೋಧಿಸುವುದು ಎಂದೇ ಅರ್ಥ. ಅಂತೆಯೆ ತಮ್ಮ ಜನರನ್ನು ನಿಜವಾಗಿ ಪ್ರೀತಿಸುವ ಬಡ ರಾಷ್ಟ್ರಗಳ ಕವಿಗಳನ್ನು ಮತ್ತು ನಾಯಕರನ್ನು ಸಾಮ್ರಾಜ್ಯಶಾಹಿಗಳು ಎಂದೂ ಸಹಿಸುವುದಿಲ್ಲ. ಈ 'ಅಪರಾಧ'ಕ್ಕಾಗಿಯೇ ನೆರುಡಾ ಮತ್ತು ಅವರ ಮಿತ್ರ ಅಲೆಂಡೆ ಅವರು ಬಲಿಯಾಗಬೇಕಾಯಿತು.

ನಲ್ವತ್ಮೂರು ವರ್ಷಗಳ ಹಿಂದೆ, 1973ನೇ ಸೆಪ್ಟೆಂಬರ್ 11ರಂದು ಚಿಲಿಯ ರಾಷ್ಟ್ರಪತಿ ಭವನ 'ಮೊನೆದಾ' ಬಾಂಬ್ ದಾಳಿಗೀಡಾಗಿದೆ. ಕೆಲದಿನಗಳಿಂದ ಅಮೆರಿಕದ ಸಾಮ್ರಾಜ್ಯಶಾಹಿಯ ನೆರವಿನಿಂದ ಮಿಲಿಟರಿ ದುಷ್ಟಕೂಟದ ಫ್ಯಾಸಿಸ್ಟರು ಇಡೀ ಚಿಲಿಯ ಗಲ್ಲಿಗಳಲ್ಲೆಲ್ಲ ನೆತ್ತರು ಹರಿಸುತ್ತಿದ್ದಾರೆ. ಮಿಲಿಟರಿ ಪಿತೂರಿ ಮತ್ತು ಬರ್ಬರ ಪ್ರತಿಕ್ರಾಂತಿಯಿಂದಾಗಿ ಕಂಡಕಂಡಲ್ಲೆಲ್ಲ ಸಮೂಹ ಕೊಲೆಗಳಾಗುತ್ತಿವೆ. ಈ ಎಲ್ಲ ಹೀನಕೃತ್ಯಗಳ ಜೊತೆಗೇ ಹೆಂಗಳೆಯರ ಅವಿರತ ಮಾನಭಂಗ ನಡೆದಿದೆ. ಕೊಲೆಗಡುಕರು ಅನೇಕ ಕಡೆ ಹೆಣಗಳನ್ನೆಲ್ಲ ಬೀದಿಯ ಮೇಲೆ ಬಿಟ್ಟು, 'ಇದು ಪಾಠ' ಎಂದು ಹೇಳುತ್ತಿದ್ದಾರೆ. ಇದು ಫ್ಯಾಸಿಸ್ಟರ ಶಿಕ್ಷಣ ವೈಖರಿ!



ಇಂಥ ಪರಿಸ್ಥಿತಿಯಲ್ಲೂ ಶಾಂತಿಯ ಪ್ರತಿಪಾದಕರಾದ ಚಿಲಿಯ ರಾಷ್ಟ್ರಪತಿ ಅಲೆಂಡೆ ಎದೆಗುಂದಲಿಲ್ಲ. ಹೇಡಿಯಂತೆ ಮೊನೆದಾ ಬಿಟ್ಟು ಓಡಿಹೋಗಲಿಲ್ಲ. ಜನರಲ್ಲಿ ಏಕತೆ ಮತ್ತು ಪ್ರತಿಭಟನಾ ಶಕ್ತಿ ತುಂಬಲು ಪ್ರಯತ್ನಿಸಿದರು. ಬಾಂಬ್ ದಾಳಿಗೀಡಾದ ರಾಷ್ಟ್ರಪತಿ ಭವನದಲ್ಲೇ ಉಳಿದರು. ಆದರೆ ಯುದ್ಧನಿಪುಣರಲ್ಲದ ಸಂಗಾತಿಗಳನ್ನೆಲ್ಲ ಹೊರಗೆ ಕಳುಹಿಸಿದರು. ನಂತರ ಅವರು ಜನರನ್ನು ಉದ್ದೇಶಿಸಿ ಮಾತನಾಡಿದ್ದನ್ನು ಮಗಳು ಇಸಾಬೆಲ ಧ್ವನಿಮುದ್ರಣ ಮಾಡಿಕೊಂಡರು. ಕೊನೆಗೆ 'ಮೊನೆದಾ' ಮೇಲೆ ಮುಂದುವರಿದ ಬಾಂಬ್ ದಾಳಿಯಲ್ಲಿ ಅಲೆಂಡೆ ಹುತಾತ್ಮರಾದರು.

ಸಾಲ್ವಡೊರ್ ಅಲೆಂಡೆ 1970ರಿಂದ 73ರವರೆಗೆ ಅಂದರೆ, ಬದುಕಿನ ಕೊನೆಯ ಕ್ಷಣದವರೆಗೆ ಚಿಲಿಯ ಅಧ್ಯಕ್ಷರಾಗಿದ್ದರು. ಚಿಲಿಯಲ್ಲಿ ಶಾಂತಿಯುತವಾಗಿ ಸಮಾಜವಾದಿ ವ್ಯವಸ್ಥೆ ತರಲು ಶ್ರಮಿಸಿದರು. ಹಲವು ಏಕಸ್ವಾಮ್ಯವಾದಿಗಳ ಗುಂಪು, ಬಹುರಾಷ್ಟ್ರೀಯ ಬಂಡವಾಳ, ಕೆಲ ಸೈನ್ಯಾಧಿಕಾರಿಗಳ ಕೈವಾಡ ಮತ್ತು ಅಮೆರಿಕದ ಸಾಮ್ರಾಜ್ಯಶಾಹಿ ಸಹಾಯದಿಂದಾಗಿ 1973ನೇ ಸೆಪ್ಟೆಂಬರ್ 11 ಪ್ರಜಾಪ್ರಭುತ್ವವಾದಿ ಸರ್ಕಾರವನ್ನು ಉರುಳಿ ಫಿನೋಷೆ ನೇತೃತ್ವದಲ್ಲಿ ಸರ್ವಾಧಿಕಾರವನ್ನು ಜಾರಿಗೊಳಿಸಲಾಯಿತು. ಸೈನ್ಯಾಡಳಿತದಿಂದಾ ರಾಜಕೀಯ ಪಕ್ಷಗಳು ಕಾನೂನುಬಾಹಿರಗೊ ನಾಗರಿಕ ಹಕ್ಕುಗಳು ದಮನಗೊಂಡವು. ಸರ್ವಾಧಿಕಾರಕ್ಕೆ ವಿರೋಧ ವ್ಯಕ್ತಪಡಿಸುವವ ಜೈಲುಗಳೆಲ್ಲ ತುಂಬಿಹೋದವು. ಅಲೆಂಡೆ ಸರ್ಕಾರದ ಅನೇಕ ಸುಧಾರಣಾ ಕಾರ್ಯಕ್ರ ಮೂಲೆಗುಂಪಾದವು. ಹೊರದೇಶಗಳ ಬಂ ಅಲ್ಲಿ ಸ್ವತಂತ್ರವಾಗಿ ರಾರಾಜಿಸತೊಡಗಿತು.

ಸೇನಾಧಿಕಾರಕ್ಕೆ ತುತ್ತಾದಾಗ ಚಿಲಿಯ ಜನಸಂಖ್ಯೆ ಒಂದು ಕೋಟಿಯಷ್ಟಿತ್ತು. ಸವಾ ಸ್ಥಾಪಿತವಾದ ಮೊದಲ ಆರು ತಿಂಗಳಲ್ಲೇ 30 ಸಾವಿರ ಪ್ರಜಾಪ್ರಭುತ್ವವಾದಿಗಳ ಕೊಲೆ ಮಾಡಲಾಯಿತು. 1,50,000 ಮಂದಿಯನು ಕಳುಹಿಸಲಾಯಿತು. ರಾಜಕೀಯ ಮತ್ತು ಆ ಒತ್ತಡಗಳಿಂದಾಗಿ ಚಿಲಿಯ ಐದು ಲಕ್ಷ ಜನ ಬಿಟ್ಟು ಹೋಗುವಂಥ ಪರಿಸ್ಥಿತಿ ಉಂಟಾಯಿ

ಬಾಂಬ್ ದಾಳಿಗೀಡಾಗಿ ಹುತಾತ್ಮರಾಗು ಸ್ವಲ್ಪ ಮುಂಚೆ ಅಲೆಂಡೆ ಅವರು ಜನರನ್ನು ಮಾತನಾಡಿದ್ದನ್ನು ಧ್ವನಿಮುದ್ರಣ ಮಾಡಿಕೊ ಇಸಾಬೆಲ, ಆ ಧ್ವನಿ ಜಗತ್ತಿಗೆ ಕೇಳಿಸುವಂತೆ ಮಾಡಿದರು. ಅಲೆಂಡೆ ಅವರ ಆ ಏಕಾಂತ ಭಾಷಣ, ಕೋಟಿ ಕೋಟಿ ಜನರಲ್ಲಿ ಮಾನ ಘನತೆಯ ಚೈತನ್ಯ ತುಂಬುವ ಅಮರ ಕಾ ಅವರ ಇಡೀ ಭಾಷಣ, ಅದು ಇದ್ದ ಹಾಗೆ ಕನ್ನಡದಲ್ಲಿ ಕಾವ್ಯವಾಗಿದೆ.

ಓ ನನ್ನ ಜನರೇ....

ಓ ನನ್ನ ಜನರೇ ಇದು ನನ್ನ ಕೊನೆಯ ಮಾತು.
ದಾಳಿಯಿಟ್ಟಿವೆ ವಿಮಾನಗಳು ಆಕಾಶವಾಣಿಯ ಮೇಲೆ.
ನನ್ನ ಮಾತಿನಲ್ಲಿ ಕಹಿಯಿಲ್ಲ ಬರಿ ಆಶಾಭಂಗವಿದೆ,
ನೈತಿಕ ಶಿಕ್ಷೆಯಿದೆ ವಚನ ಕೊಟ್ಟು ವಂಚಿಸಿದವರಿಗೆ.

ಚಿಲಿಯ ಸಮುದಾಯವೇ. ಕೇಳಿ ನಿನ್ನೆಯವರೆಗೂ
ತೋರಿಸುತ್ತಿದ್ದ ವಿಧೇಯತೆ ಮೆಂಡೋಜ ಮಹಾಶಯ.
ಈಗ ನೋಡಿ ಮಾರ್ಗದರ್ಶಿಯಾದ ಕೊಲೆಗಡುಕರ.
ಗಾಯಗೊಳಿಸಿದ್ದಾರೆ ಚಿಲಿಯನ್ನು; ಕೊಲ್ಲಲು ಸಾಧ್ಯವಿಲ್ಲ.


ಕಾರ್ಮಿಕರೇ, ರೈತರೆ, ನಾಡಿನ ಸಮಸ್ತ ಜನರೇ
ಬರ್ಬರರು ಮಾಡಿದ ಈ ಸ್ಥಿತಿಯ ಮುಂದೆ ನಿಂತು
ಹಿಂಜರಿಯದೆ ಹೇಳುತ್ತಿದ್ದೇನೆ "ನಾ ಬಿಡಲಾರೆ"
ಸಮಸ್ತ ಜನತೆಯ ಸೊತ್ತನ್ನು; ನನ್ನ ಚಿಲಿಯನ್ನು.

ಇದು ಐತಿಹಾಸಿಕ ನಿರ್ಣಯ; ನನ್ನನ್ನೇ ಬಲಿ ಕೊಡುವೆ.
ನನ್ನ ಜನರಿಗೆ ತೋರಿಸುವ ವಿಧೇಯತೆ ಇದು.
ಹೌದು ನಾ ಸಾಯಬಹುದು; ನಾನೊಬ್ಬ ಮನುಷ್ಯ
ನಾ ಸತ್ತರೇನು ಮತ್ತು ಹುಟ್ಟುತ್ತಾರೆ ಚಿಲಿಯ ಮಣ್ಣಲ್ಲಿ.
ಮತ್ತೆ ಮತ್ತೆ ಒತ್ತಿ ಹೇಳುವೆ; ಭರವಸೆ ಕೊಡುವೆ
ಯಾವ ಸಂಶಯವೂ ಇಲ್ಲ ಚಿಲಿಯ ಬದುಕಲ್ಲಿ.
ಬೆಳೆಯುತ್ತಲೇ ಹೋಗುವುದು ಬಿತ್ತಿದ ಆತ್ಮಸಾಕ್ಷಿಯ ಬೀಜ,
ಘನೋದ್ದೇಶಗಳು ಈಡೇರುತ್ತಲೇ ಹೋಗುವವು.

ನೀವೇ, ಹೌದು ನೀವೇ ಇತಿಹಾಸ ಸೃಷ್ಟಿಸುವವರು.
ಇತಿಹಾಸ ನಮ್ಮದಿದೆ; ಇತಿಹಾಸ ಸೃಷ್ಟಿಸುವವರು.
ವೈರಿಗಳಿಂದು ಬಲಿಷ್ಠರಾಗಿದ್ದಾರೆ, ...
ಗುಲಾಮಗಿರಿಗೆ.
ಅಪರಾಧದಿಂದ– ಒತ್ತಾಯದಿಂದ ಆಳಲಾಗದು ಜನರನ್ನು.

ನಾನೊಬ್ಬ ಮನುಷ್ಯ; ನ್ಯಾಯದ ಬಯಕೆಗಳಿಗೆ ಬಾಯಿಯಾದವ.
ಸಂವಿಧಾನಕ್ಕೆ ಬೆಲೆ ಇತ್ತವ, ವಚನಕ್ಕೆ ಬದ್ಧನಾದವ.
ಸದಾ ನಂಬಿಕೆಯಿಟ್ಟು ಒಗ್ಗಟನು ಎತ್ತಿ...
ನೀವು.
ನನಗಾವ ಭಯವಿಲ್ಲ;
ಕೇವಲ ನಿಮಗಾಗಿ ಚಿಂತಿಸುತ್ತಿರುವೆ.

ಈ ಕ್ರೂರ ಘಳಿಗೆ; ನಾ ಮಾತನಾಡಬಲ್ಲ ಕೊನೆಯ ಘಳಿಗೆ.
ಈ ಘಟನೆಯಿಂದ ಏನು



ಕಲಿಯಬಹುದೆಂಬುದನ್ನು
ಬಿಡಿಸಿ ತಿಳಿಸಬಲ್ಲೆ ನಾ ನಿಮಗೆ ಒಂದೊಂದಾಗಿ.
ಯಾರ ಕೈವಾಡವಿದು, ಏಕೆ ಎಂಬುದನ್ನು ಹೇಳಬಲ್ಲೆ!

ಪರದೇಶದ ಬಂಡವಾಳ, ಸಾಮ್ರಾಜ್ಯವಾದ ಕೈ ಕೂಡಿಸಿದವು.
ಪ್ರತಿಗಾಮಿಗಳೊಡನೆ ಹೂಡಿದವು ಹೂಟ ದಂಗೆಯೇಳುವಂತೆ.
ಸೈನ್ಯ ಮುರಿಯಿತು ಸಂಪ್ರದಾಯ, ಬಲಿಯಾಯಿತು ವ್ಯವಸ್ಥೆಗೆ.
ಗಾಯವಾಯಿತು ಚಿಲಿಗೆ; ಚಿಲಿ ಸತ್ತಿಲ್ಲ ಸಾಯುವುದಿಲ್ಲ.

ಬಾಂಬುದಾಳಿಗೀಡಾಗಿ ಬಾನುಲಿ ಬರಿದಾಗಿದೆ.
ಮೌನವಾಗಿದೆ.
ಕೇಳಿಸದಂತಾಗಿದೆ ನನ್ನ ಸ್ಪಷ್ಟ ಶಬ್ದಗಳು ನಿಮಗೆಲ್ಲ.
ಕಾರ್ಮಿಕರ ನಿಷ್ಠೆಗೆ ನಿಷ್ಠೆ ತೋರಿದ ಯೋಗ್ಯ ಮನುಷ್ಯನ
ನೆನಪು ಉಳಿಯುವುದು ನಿಮ್ಮಲ್ಲಿ, ಸದಾ ನಿಮ್ಮೊಡನೆ ಇರುವೆ.

ನನ್ನ ನೆಲದ ... ತಾಯಂದಿರೆ,
ಕಾರ್ಖಾನೆಯಲ್ಲಿ, ಹೊಲದಲ್ಲಿ
ದುಡಿಯುವ ಹೆಣ್ಣುಮಕ್ಕಳೇ,
ನೀವು ಹೆಚ್ಚು ಹೆಚ್ಚು ದುಡಿದು
ದೇಶದ ಹಸಿವು ಹಿಂಗಿಸದಿರಿ.
ಮಾತಾಡುವೆ ನಾ ನಿಮ್ಮೆಲ್ಲರಿಗಾಗಿ ಹೃದಯ ತುಂಬಿ.
ದೇಶಾಭಿಮಾನಿಗಳೇ, ವಿವಿಧ ಕಾಯಕಜೀವಿಗಳೇ
ಕೆಲದಿನಗಳ ಹಿಂದೆ ಬರ್ಬರ ಪ್ರತಿಕ್ರಾಂತಿಯ ವೇಳೆ,
ಜನರ ರಕ್ತ ಹೀರುವ ಸುಲಿಗೆ
ಸಾಮ್ರಾಜ್ಯದ ಸಂಸ್ಥೆಗಳ
ಬಾಡಿಗೆಯ ಬಂಟರೊಡನೆ
ಹೋರಾಡಿದಿರಿ ಹಂಗುದೊರೆದು.

ನಾಡಿನ ಯುವಜನರೇ
ಮಾತನಾಡುವೆ
ನಿಮ್ಮನ್ನುದ್ದೇಶಿಸಿ:
ಈ ದೇಶದ ವೀರಗೀತೆಗಳನ್ನೆಲ್ಲ
ಹಾಡುತ್ತ ನೀವೆಲ್ಲ
ನಮ್ಮ ಹೋರಾಟದ
ಹುರುಪಿನಲ್ಲಿ ಸಂತೋಷ
ಕೊಟ್ಟಿರಿ.
ನನ್ನ ಚಿತ್ತಭಿತ್ತಿಯ ಮೇಲೆ ಕಿಕ್ಕಿರಿದು
ತುಂಬಿದಿರಿ.

ಹಿಂಸೆಗೊಳಪಟ್ಟು ನರಳುತ್ತಿರುವ ನನ್ನ ಜನ
ಚಿಲಿಯ ಹೃದಯಗಳೇ, ಕಾರ್ಮಿಕರೇ, ರೈತ
ಕರಾಳ ಫ್ಯಾಸಿಸ್ಟರ ಆಕ್ರಮಣದಿಂದ ಹಾಳಾಗಿ
ಸೇತುವೆಗಳು, ರೈಲ್ವೆಗಳು ಎಣ್ಣೆಗೊಳವೆಗಳು

ಸ್ತಬ್ಧತೆಯನ್ನು ಗಮನಿಸಿ: ಇತಿಹಾಸ
ನ್ಯಾಯಸ್ಥಾನದಲ್ಲಿರುವುದು.
ಅವರು ಏನಾಗಬೇಕಿತ್ತೋ ನಾಳೆ ಅದೇ ಆ
ಭವಿಷ್ಯ ನಮ್ಮದಿದೆ ತಿಳಿಯಿರಿ; ಭವಿಷ್ಯ
ದುಡಿಯುವವರದಿದೆ.
ಚಿಲಿ ಸತ್ತಿಲ್ಲ, ಸಾಯುವುದಿಲ್ಲ, ಅದು
ಬರಿಗಾಯಗೊಂಡಿದೆ.

ಓ ನನ್ನ ಜನರೇ, ನಿಮ್ಮನ್ನು ರಕ್ಷಿಸಿಕೊಳ್ಳಿ,
ಬಲಿದಾನ ಮಾಡಬೇಡಿ, ಹಿಂಸೆಗೊಳಪಡಬೇ
ನಂಬಿಕೆಯಿದೆ ನನಗೆ ಚಿಲಿಯ ಭವಿಷ್ಯದಲ್ಲಿ.
ನವ ಸಮಾಜದ ಹೊಣೆಹೊತ್ತ ನೀವು ಆಳ

ಬಹುದಿನ ಬದುಕಲಿ ಚಿಲಿ – ಚಿಲಿ ಬದುಕ
ಬಹುದಿನ.
ಜನ ಕಾರ್ಮಿಕರು ಬದುಕಲಿ ತುಂಬುದಿನ.
ನನ್ನ ತ್ಯಾಗ ಹಾಳಾಗುವಂಥದ್ದಲ್ಲ; ಇದು ಹ
ಹೇಡಿತನಕ್ಕೆ ವಿಶ್ವಾಸಘಾತಕ್ಕೆ ನೈತಿಕ ಶಿಕ್ಷೆ.

ವೇಬಿಡು ವಿಸ್ಮೃತಿಯಲ್ಲಿ ಆಗಿಹೋಗಿರುವಂತ ವಾದ ಒಂದು ದಂತ ಕಥೆಯಲ್ಲ. ಇದು ನದ ಒಂದು ಮಹತ್ವವಾದ ಪರಂಪರೆಯೇ ದು ಇಂದಿನ ಅತ್ಯಗತ್ಯವಾದ ಅವಶ್ಯಕತೆಯೂ ಳಿನ ಅಗತ್ಯವೂ ಆಗಿದೆ."

– ಸ್ವಾಮಿ ಸತ್ಯಾನಂದ ಸರಸ್ವತಿ

ಗವೆಂದರೆ ಹಠಯೋಗದ ಒಂದು ವಷ್ಟೇ ಬಹಳ ಮಂದಿ ತಿಳಿದುಕೊಂಡಿರುವುದು. ಅದೊಂದು ನೈಸರ್ಗಿಕವಾಗಿರುವಂತಹ ನೈಸರ್ಗಿಕವಾಗಿಯೇ ಉಳಿಸಿಕೊಳ್ಳುವ ಂದು ಬಹಳಷ್ಟು ಮಂದಿಗೆ ತಿಳಿದಿರಲಾರದು. ಸಂಘಪರಿವಾರದಂತಹ ಹಿಂದೂತ್ವವಾದಿ ಗಳು ಅದನ್ನು ಧಾರ್ಮಿಕ ಸಂಸ್ಕೃತಿಯ ಒತ್ತೊಟ್ಟಿ ಅದನ್ನು ಕಂಡರೇನೇ ವಾಕರಿಕೆ ಷ್ಟು ಬೇಸರಿಕೆಯನ್ನು ಸಮಾಜದಲ್ಲಿ ರೆ.

ನೇ ಇರಲಿ, ಬಿಹಾರದ ಸ್ವಾಮಿ ಸತ್ಯಾನಂದ ವರು ಯೋಗ ಮತ್ತು ಅದರ ವಿಚಾರವಾಗಿ ವೈಜ್ಞಾನಿಕವಾಗಿ ಸಂಶೋಧನೆ ನಡೆಸಿ ವ್ಯಾಪಕ ಮಾಡಿದ್ದೇ ಅಲ್ಲದೇ ಅದರ ಬಗ್ಗೆ ಇರುವಂತಹ ಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಲು ರು.

ಗಿ ಯೋಗವೆಂಬ ತಂತ್ರದ ಬಗ್ಗೆ ಉಲ್ಲೇಖಗಳು ನಮ್ಮ ಸಮಕಾಲೀನರಾಗಿದ್ದು ಇತ್ತೀಚೆಗೆ ತ ಸ್ವಾಮಿ ಸತ್ಯಾನಂದ ಸರಸ್ವತಿಯವರನ್ನು ವರ ಯೋಗ ಸಾಧನೆಯನ್ನು ಸಹಜವಾಗಿ ಳ್ಳಲಾಗುವುದು.

ೋಗವೆಂಬ ಜೀವನ ನಿರ್ವಹಣೆ

ಗವು ನಮ್ಮ ನಿತ್ಯಜೀವನದಲ್ಲಿ ಕೊಳ್ಳಲು ಉದ್ದೇಶಿಸಲಾಗಿರುವಂತಹ ಉತ್ತಮ ರ್ವಹಣೆಯ ಒಂದು ವಿಜ್ಞಾನವಾಗಿದೆ. ಇದು ನುಷ್ಯನ ಶಾರೀರಿಕವಾದ, ಚೇತನಾತ್ಮಕವಾದ, ದ, ಭಾವನಾತ್ಮಕವಾದ, ಮಾನಸಿಕವಾದ ಧ್ಯಾತ್ಮಿಕವಾದ ಎಲ್ಲಾ ಸ್ತರಗಳಲ್ಲಿಯೂ ಕೆಲಸ ದೆ.

ಗ ಎಂಬ ಪದವು ಸಂಸ್ಕೃತ ಶಬ್ದವಾದ ಎಂಬುದರಿಂದ ಉತ್ಪತ್ತಿಯಾಗಿದೆ. ಎಂದರೆ ಕೂಡಿಸು ಎಂದರ್ಥ. ಹೀಗಾಗಿ ಂದರೆ ಒಂದುಗೂಡಿಸುವಿಕೆ ಅಥವಾ ಐಕ್ಯತೆ ಈ ಐಕ್ಯತೆ ಅಥವ ಒಗ್ಗೂಡಿಸುವಿಕೆಯನ್ನು ರ ಪರಿಭಾಷೆಯಲ್ಲಿ ವಿವರಿಸುವುದಾದರೆ, ದ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯೊಂದಿಗೆ ವುದೇ ಆಗಿದೆ. ಪ್ರಾಯೋಗಿಕ ಮಟ್ಟದಲ್ಲಿ ಾದರೆ, ಯೋಗವು ದೇಹ, ಮನಸ್ಸು ಮತ್ತು ್ನು ಸಮರಸವಾಗಿ ಸರಿದೂಗಿಸಿಕೊಳ್ಳುವಂತಹ ಗಿದೆ. ಇದನ್ನು ನಾವು ವಿಶ್ವದ ಅನಂತ ನೆ ವಿಲೀನವಾಗುವ ಮುನ್ನ ಆಸನ, ಾಮ, ಮುದ್ರೆ, ಬಂಧ, ಷಟ್ಕರ್ಮ ಮತ್ತು ್ನು ಅಭ್ಯಾಸ ಮಾಡುವುದರ ಮೂಲಕ ಕಾಗಿರುವುದು.

ಾನ್ಯವಾಗಿ ಬಹಳಷ್ಟು ಮಂದಿಗೆ ಪರಿಚಿತವೂ, ಿಕ ಭಾಗವೂ ಆಗಿರುವಂತಹ, ವ್ಯಕ್ತಿಯ ಹೊರಗಿನ ಭಾಗವಾಗಿರುವಂತಹ ಶರೀರದ ೇ ಯೋಗಶಾಸ್ತ್ರವೂ ಕೆಲಸ ಮೊದಲು ವುದು. ಈ ಹಂತದಲ್ಲಿ ಸಮತೋಲನ ಅಂಗಗಳು, ಸ್ನಾಯುಗಳು ಮತ್ತು ನರಗಳು ದು ವಿರುದ್ಧವಾಗಿ ಕೆಲಸ ಮಾಡುವವೇ ಹೊಂದಾಣಿಕೆಯಿಂದ ಕೆಲಸ ಮಾಡುವುದಿಲ್ಲ. ಜೆಗೆ, ನರವ್ಯೂಹಗಳ ಸಾಮರ್ಥ್ಯವು ಹಾರ್ಮೋನುಗಳನ್ನು ಸ್ರವಿಸುವ ಗ್ರಂಥಿಗಳು ಕಾರ್ಯ ನಿರ್ವಹಿಸದೇ ರೋಗಗಳನ್ನು ಾಡುವ ಮಟ್ಟವನ್ನು ಮುಟ್ಟಬಹುದು. ರೀರಿಕ ಚಟುವಟಿಕೆಗಳು ಸಂಪೂರ್ಣವಾದ ಕೆಯಿಂದ ಇಡೀ ಶರೀರವನ್ನು ವಾಗಿಡುವುದೇ ಯೋಗಶಾಸ್ತ್ರದ ಿದೆ. ಹೀಗೆ ಶಾರೀರಿಕ ಹಂತದಿಂದ ಮಾನಸಿಕ ಮತ್ತು ಭಾವನಾತ್ಮಕ ಹಂತಗಳ ಗುತ್ತದೆ. ಹಲವಾರು ಮಂದಿ ತಮ್ಮ ದಿನನಿತ್ಯ ವ್ಯವಹಾರದಿಂದುಂಟಾಗುವ ಒತ್ತಡಗಳಿಂದಾಗಿ ಭಯಗಳಿಂದ ಹಾಗೂ ನರದೌರ್ಬಲ್ಯಗಳಿಂದ ೆ. ಯೋಗ ಇದಕ್ಕೆಲ್ಲಾ ಉಪಶಮನವನ್ನೇನೂ ರೂ ಇವುಗಳೆಲ್ಲವನ್ನೂ ಸರಿದೂಗಿಸಿಕೊಂಡು ಸಿದ್ಧವಿಧಾನವನ್ನು ಕೊಡುಗೆಯಾಗಿ ನೀಡಿದೆ. ದ ಸ್ವಾಮಿ ಶಿವಾನಂದರು ಯೋಗವನ್ನು, ೆ, ಮಾತು ಮತ್ತು ಕೃತಿಗಳ ನಡುವಿನ ಮತ್ತು ಹೊಂದಾಣಿಕೆಯೆಂದೂ ಅಥವಾ ಯು ಮತ್ತು ಕ್ರಿಗಳ ನಡುವಿನ ಸಾಮರಸ್ಯವೇ ಂದು ವಿವರಣೆ ನೀಡುತ್ತಾರೆ. ಯೋಗವನ್ನು ಮಾಡುವುದರಿಂದ ಭಾವನಾತ್ಮಕ, ಮಾನಸಿಕ



ಯೋಗ ವಿಚಾರ

ಮತ್ತು ಶಾರೀರಿಕ ಹಂತಗಳ ಆಂತರಿಕ ಸಂಬಂಧಗಳ ಬಗ್ಗೆಯೂ ಮತ್ತು ಇವುಗಳಲ್ಲಿ ಯಾವುದಾದರೊಂದು ಅವ್ಯವಸ್ಥಿತವಾದರೆ ಇನ್ನಿತರ ಹಂತಗಳ ಮೇಲೂ ಹೇಗೆ ಪ್ರಭಾವ ಬೀರುತ್ತದೆ ಎಂಬ ತಿಳಿವಳಿಕೆಯ ಬೆಳವಣಿಗೆಯಾಗುತ್ತದೆ. ಕ್ರಮೇಣ ಈ ತಿಳಿವಳಿಕೆಯು ನಮ್ಮ ಅಸ್ತಿತ್ವದ ಅತಿಸೂಕ್ಷ್ಮವಾಗಿರುವಂತಹ ಕ್ಷೇತ್ರಗಳನ್ನು ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಸಾಗುತ್ತದೆ.

ಶಾಸ್ತ್ರಗಳು ವಿಶದವಾಗಿ ವಿವರಿಸಿರುವಂತೆ ಹೆಸರಿಸುವುದಾದರೆ ಯೋಗದಲ್ಲಿ ರಾಜಯೋಗ, ಹಟ ಯೋಗ, ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ, ಮಂತ್ರಯೋಗ, ಕುಂಡಲಿನಿ ಯೋಗ ಮತ್ತು ಲಯ ಯೋಗವೇ ಇತ್ಯಾದಿ ವಿಭಾಗಗಳಿವೆ. ಪ್ರತಿಯೊಬ್ಬರೂ ಅವರವರ ವ್ಯಕ್ತಿತ್ವಕ್ಕೆ ಹಾಗೂ ಅಗತ್ಯಗಳಿಗೆ ಹೊಂದಿಕೊಳ್ಳುವಂತಹ ಯೋಗಗಳನ್ನು ಕಂಡುಕೊಳ್ಳಬೇಕು. ಈ ಶತಮಾನದ ಅರ್ಧಾಂತ್ಯದಲ್ಲಿ ಹಟಯೋಗವು ಬಹಳ ಜನಪ್ರಿಯವಾಗಿ ಅಭ್ಯಸಿಸಲ್ಪಡುತ್ತದೆ. ಅದೇನೇ ಇರಲಿ, ಜನರು ಹೆಚ್ಚುಹೆಚ್ಚಾಗಿ ಅಭ್ಯಾಸ ಮಾಡಿದಷ್ಟು ಯೋಗದಲ್ಲಿ ಒಳಗೊಂಡಿರುವಂತಹ ವಿಷಯಗಳು ವಿಸ್ತಾರವಾಗುತ್ತಾ ಅದರ ಜ್ಞಾನವೂ ಪ್ರಸಾರವಾಗುತ್ತಿದೆ. ಪ್ರಾಚೀನ ಶಾಸ್ತ್ರಗಳಲ್ಲಿ ಹಟಯೋಗವು ಷಟ್ಕರ್ಮಗಳನ್ನು ಮತ್ತು ಶುದ್ಧೀಕರಣ ಕ್ರಿಯೆಗಳನ್ನು ಮಾತ್ರ ಹೊಂದಿತ್ತು. ಆದರೆ, ಇಂದು ಹಟಯೋಗವು ಸಾಮಾನ್ಯವಾಗಿ ಆಸನ, ಪ್ರಾಣಾಯಾಮ ಮತ್ತು ಬಂಧಗಳನ್ನು ಹೊಂದಿದೆ.

ಯೋಗದ ಇತಿಹಾಸ

ಸುಮಾರು 10 ಸಾವಿರ ವರ್ಷಗಳಿಗೂ ಹಿಂದೆ ಭಾರತ ಮತ್ತು ವಿಶ್ವದ ಇತರ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ತಂತ್ರ ನಾಗರಿಕತೆಯ ಮುಂದುವರಿದ ಭಾಗವೇ ಯೋಗವೆಂದು ಈ ದಿನ ನಮಗೆ ತಿಳಿದಿದೆ.

ಈಗ ಪಾಕಿಸ್ತಾನದಲ್ಲಿರುವ ಸಿಂಧೂ ಕಣಿವೆಯ ಹರಪ್ಪ ಮತ್ತು ಮೊಹೆಂಜದಾರೋವಿನಲ್ಲಿ ನಡೆದ ಪುರಾತತ್ವ ಉತ್ಖನನಗಳಲ್ಲಿ ಶಿವ ಮತ್ತು ಪಾರ್ವತಿಯರು ವಿವಿಧ ಆಸನಗಳನ್ನು ಹಾಕುತ್ತಿರುವ ಹಾಗೂ ಧ್ಯಾನ ಮಾಡುತ್ತಿರುವಂತಹ ಅನೇಕ ವಿಗ್ರಹಗಳು ದೊರೆತಿವೆ. ಈ ಪಾಳುಕೊಂಪೆಗಳು ಆರ್ಯ ಸಂಸ್ಕೃತಿಯು ಸಿಂಧೂ ಉಪಖಂಡದಲ್ಲಿ ಪುರೋಭಿವೃದ್ಧಿಗೆ ಬರುವುದಕ್ಕೆ ಮುನ್ನವೇ, ವೇದ–ಪೂರ್ವಕಾಲದಲ್ಲಿ ಬಾಳಿ ಬದುಕಿದ ಜನರ ವಾಸಸ್ಥಳಗಳಾಗಿದ್ದವು. ಪೌರಾಣಿಕ ಪರಂಪರೆಯ ನಂಬುಗೆಯಂತೆ ಶಿವನೇ ಯೋಗದ ಮೂಲಾಚಾರ್ಯ ಮತ್ತು ಪಾರ್ವತಿಯೇ ಅವನ ಮೊದಲ ಶಿಷ್ಯೆ.

ಶಿವನೆಂದರೆ ಕೈಲಾಸದಲ್ಲಿ ಸಂಪೂರ್ಣ ನಾಟಕದ ವೇಷಧಾರಿಯನ್ನು ಆಲೋಚಿಸಬೇಡಿ. ಅರಣ್ಯಕರು ಮತ್ತು ನಿಷಾಧರು- ಜನಸಾಮಾನ್ಯರು ಬೆರೆಯುತ್ತಿದ್ದ ಸಮಾಜವನ್ನು ಧಿಕ್ಕರಿಸಿ, ಸಂಪೂರ್ಣವಾಗಿ ಶಿಷ್ಟ ಸಮಾಜಕ್ಕೆ ವಿಮುಖವಾಗಿ ಅಂತರ್ಮುಖಿಯಾಗಿ ಯೋಗಿಗಳಂತೆ ಗಣಗಳಲ್ಲಿದ್ದವರು.

ಇನ್ನು ಶಿವನ ಬಗ್ಗೆ ಏನೇ ಹೇಳಿದರೂ, ನಾಗರು, ಅಘೋರಿಗಳು, ಕಾಪಾಲಿಕರು, ನಿಷಾಧರು, ಕಿರಾತರು ಅವರುಗಳಲ್ಲಿನ ತಂತ್ರಸಾಧಕರನ್ನು ನೆನೆಯಬೇಕೇ ಹೊರತು, ಹಣೆಯ ಮೇಲೆ ಮೂರು ಕಣ್ಣುಳ್ಳ ಶಿವನಲ್ಲ.

ಆದರೂ, ಪರಮೇಶ್ವರನಾದ ಶಿವನೇ ಪರಮೋಚ್ಚ ಪ್ರಜ್ಞೆಯ ಸಂಕೇತವೆಂದೂ, ಸ್ವರೂಪನೆಂದೂ ವ್ಯಾಪಕವಾಗಿ ಪರಿಗಣಿಸಲಾಗಿದೆ. ಪಾರ್ವತಿಯು ಪರಮೋಚ್ಚ ಜ್ಞಾನವನ್ನೂ, ಸಂಕಲ್ಪ ಮತ್ತು ಕ್ರಿಯೆಯನ್ನೂ ಸಂಕೇತಿಸುತಲಿದ್ದು, ಇದೇ ಸಮಸ್ತ ಸೃಷ್ಟಿಗೂ ಕಾರಣವಾಗಿದೆ. ಈ ಶಕ್ತಿಯೇ ಅಥವಾ ಈ ಚೈತನ್ಯವೇ ಕುಂಡಲಿನಿ ಶಕ್ತಿಯೆಂದು ಕರೆಯಲ್ಪಟ್ಟು ಎಲ್ಲಾ ಜೀವಿಗಳಲ್ಲಿ ಸುಪ್ತವಾಗಿ ಅಡಗಿರುವಂತಹ ವಿಶ್ವಶಕ್ತಿಯಾಗಿರುವುದು. ಪಾರ್ವತಿಯು ಇಡೀ ವಿಶ್ವದ ಮಾತೆಯೆನಿಸಿಕೊಂಡಿರುವಳು. ಜೀವಾತ್ಮವು ನಾಮ ರೂಪದಿಂದ ಈ ಪ್ರಪಂಚದಲ್ಲಿ ರೂಪಿತವಾಗಿ ಬಂಧಿತವಾಗಿರುವುದು. ಹಾಗೆಯೇ ಅವಳ ಕೃಪೆಯಿಂದ ಪ್ರಾಪಂಚಿಕ ಬಂಧನದಿಂದ ಮುಕ್ತವಾಗಿ ಪರಮೋಚ್ಚ ವಿಶ್ವಪ್ರಜ್ಞೆಯಲ್ಲಿ ಲೀನವಾಗುವುದು. ಅವಳು ತನ್ನ ಮಕ್ಕಳ ಮೇಲಿನ ಪ್ರೇಮ ಮತ್ತು ಕರುಣೆಯಿಂದ ಮುಕ್ತತೆಯ ರಹಸ್ಯ ಜ್ಞಾನವನ್ನು ತಂತ್ರವಿದ್ಯೆಯಲ್ಲಿ ನಮಗೆ ತಿಳಿಸಿಕೊಟ್ಟಿರುವಳು. ಯೋಗದ ತಂತ್ರಗಳ ಮೂಲವು ತಂತ್ರವಿದ್ಯೆಯಲ್ಲಿದ್ದು, ಪ್ರಜ್ಞೆಯಾದ ಶಿವನನ್ನು ಚೈತನ್ಯವಾದ ಶಕ್ತಿಯಿಂದ ಹೇಗೆ ಬೇರ್ಪಡಿಸಲು ಆಗುವುದಿಲ್ಲವೋ ಅದರಂತೆ ಯೋಗವನ್ನು ತಂತ್ರವಿದ್ಯೆಯಿಂದ ಬೇರ್ಪಡಿಸಲಾಗದು.

ತನೋತಿ ಮತ್ತು ತ್ರಯತಿ

ತಂತ್ರವು ತನೋತಿ ಮತ್ತು ತ್ರಯತಿ ಎಂಬ ಎರಡು ಪದಗಳ ಸಂಯೋಜನೆಯಿಂದಾಗಿದೆ. ತನೋತಿ ಎಂದರೆ ವಿಕಸನವೆಂದೂ, ತ್ರಯತಿಯೆಂದರೆ ಬಿಡುಗಡೆಯೆಂದೂ



ಅರ್ಥ. ಆದ್ದರಿಂದ ಇದು ಪ್ರಜ್ಞೆಯನ್ನು ವಿಕಸಿಸಿಕೊಳ್ಳುವ ಹಾಗೂ ಶಕ್ತಿಯನ್ನು ಬಿಡುಗಡೆಗೊಳಿಸಿಕೊಳ್ಳುವಂತಹ ಶಾಸ್ತ್ರವಾಗಿದೆ. ಪ್ರಪಂಚದಲ್ಲಿ ಇನ್ನೂ ಜೀವಿಸುತ್ತಿರುವಂತೆಯೇ ಪ್ರಾಪಂಚಿಕ ಬಂಧನದಿಂದ ಬಿಡುಗಡೆಗೊಳಿಸಿಕೊಳ್ಳುವಂತಹ ಮಾರ್ಗವೇ ಈ ತಂತ್ರವಾಗಿದೆ. ತಂತ್ರದ ಮೊದಲ ಹಂತವೇ ದೇಹದ ಮತ್ತು ಮನಸ್ಸಿನ ಸಾಮರ್ಥ್ಯ ಮತ್ತು ಇತಿಮಿತಿಯನ್ನು ಅರಿಯುವುದು. ನಂತರ ಪ್ರಜ್ಞೆಯನ್ನು ವಿಕಸನಗೊಳಿಸಿಕೊಳ್ಳಲು ಮತ್ತು ಚೈತನ್ಯವನ್ನು ಬಿಡುಗಡೆಗೊಳಿಸಿಕೊಳ್ಳಲು ತಂತ್ರಗಳನ್ನು ಬೋಧಿಸುವುದು. ಇದರಿಂದ ವೈಯಕ್ತಿಕವಾದಂತಹ ಇತಿಮಿತಿಗಳನ್ನು ಮೀರಿ ಪರಮೋಚ್ಚವಾದಂತಹ ಸತ್ಯತೆಯನ್ನು ಅನುಭವಿಸಲು ಸಾಧ್ಯವಾಗುವುದು.

ಮನುಷ್ಯನ ನಾಗರಿಕತೆಯ ಉಗಮದ ಕಾಲದಲ್ಲಿ ಮನುಷ್ಯನು ತನ್ನ ಅಧ್ಯಾತ್ಮದ ಶಕ್ತಿಯನ್ನು ಕಂಡುಕೊಂಡು ಅದನ್ನು ಉತ್ತಮಗೊಳಿಸಿಕೊಳ್ಳಲು ತಂತ್ರಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತಹ ಸಂದರ್ಭದಲ್ಲಿ ಯೋಗದ ಉಗಮವಾಯಿತು.

ಈ ಯೋಗಶಾಸ್ತ್ರವು ನಿಧಾನವಾಗಿ ಪ್ರಪಂಚದಾದ್ಯಂತ ಪುರಾತನ ಯೋಗಿಗಳಿಂದ ವಿಕಸನಗೊಂಡು ಅಭಿವೃದ್ಧಿಯಾಯಿತು. ವಿವಿಧ ಸಂಕೇತಗಳಿಂದ, ವಿವರಣೆಗಳಿಂದ ಮತ್ತು ಭಾಷೆಗಳಿಂದ ಯೋಗದ ಸಾರ ಸತ್ವವು ಆಗಾಗ ಮಸುಕಾಯಿತು ಕೂಡ. ಯೋಗವು ನಮ್ಮ ಪ್ರಾಚೀನ ಋಷಿ–ಮುನಿಗಳಿಗೆ ಅನುಗ್ರಹವಾದ ದೈವಿಕವಾದ ಕೊಡುಗೆಯೆಂದೂ, ಇದರಿಂದಾಗಿ ಮಾನವಕುಲಕ್ಕೆ ತನ್ನ ದೈವೀ ಸ್ವಭಾವವನ್ನು ಅರಿತುಕೊಳ್ಳುವಂತಹ ಅವಕಾಶವೇ ಯೋಗವೆಂದು ಕೆಲವು ಪರಂಪರೆಗಳು ನಂಬುವವು.

ಪ್ರಾಚೀನಕಾಲದಲ್ಲಿ ಯೋಗದ ತಂತ್ರಗಳು ರಹಸ್ಯವಾಗಿಟ್ಟಿದ್ದು, ಅವುಗಳನ್ನು ಎಂದಿಗೂ ಬರೆದಿಡುವುದಾಗಲಿ ಅಥವಾ ಸಾರ್ವಜನಿಕ ದೃಷ್ಟಿಗೆ ಪ್ರಕಟಗೊಳಿಸಲಿಲ್ಲ. ಅವು ಗುರುವಿನಿಂದ ಶಿಷ್ಯರಿಗೆ ಮೌಖಿಕವಾಗಿಯೇ ಸಾಗಿಬಂದಿತು. ಈ ಬಗೆಯಲ್ಲಿ ಆಗ ಯೋಗಕ್ಕೆ ಒಂದು ಸ್ಪಷ್ಟವಾದ ಅರ್ಥವೂ ಗುರಿಯೂ ಇದ್ದವು. ತಮ್ಮ ವ್ಯಕ್ತಿಗತವಾದ ಅನುಭವಗಳಿಂದ ಅರಿತುಕೊಂಡಿರುವಂತಹ ಯೋಗಿಗಳು ಮತ್ತು ಋಷಿಗಳು ನಿಷ್ಠೆಯುಳ್ಳ ಅಭ್ಯರ್ಥಿಗಳಿಗೆ ಸರಿಯಾದ ಮಾರ್ಗದ ಮೂಲಕ ಯಾವುದೇ ಬಗೆಯ ಅನುಮಾನಗಳನ್ನು, ಅಪಾರ್ಥಗಳನ್ನು ಮತ್ತು ಅತಿಬುದ್ಧಿವಂತಿಕೆಯ ಆಲೋಚನೆಗಳನ್ನು ನಿವಾರಿಸುತ್ತಾ ಮಾರ್ಗದರ್ಶನ ಮಾಡಲು ಶಕ್ತರಾಗಿದ್ದರು.

ಯೋಗಕ್ಕೆ ಮೊದಲ ಆಧಾರಗ್ರಂಥಗಳೆಂದರೆ ಪ್ರಾಚೀನ ತಂತ್ರಗಳು ಹಾಗೂ ಸಿಂಧೂ ಕಣಿವೆಯಲ್ಲಿ ನಾಗರಿಕತೆಯು ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ಮೌಖಿಕವಾಗಿಯೇ ಬಂದಂತಹ ತಂತ್ರವಿದ್ಯೆಗಳು. ಅವರು ನಿರ್ದಿಷ್ಟವಾದ ಯೋಗಾಭ್ಯಾಸಗಳನ್ನು ಸೂಚಿಸದಿದ್ದರೂ ಪರೋಕ್ಷವಾಗಿ ಅವುಗಳ ಪ್ರಸ್ತಾವನೆ ಮಾಡುತ್ತಾರೆ. ವಾಸ್ತವವಾಗಿ ಯೋಗಧ್ಯಾನದಲ್ಲಿ ಅಥವಾ ಸಮಾಧಿಯ ಸ್ಥಿತಿಯಲ್ಲೇ ಋಷಿ–ಮುನಿಗಳು ವೇದಗಳನ್ನು ಆಲಿಸಿರುವುದು. ಆದ್ದರಿಂದಲೇ ವೇದಗಳು ಅವತೀರ್ಣವಾಗಿರುವವು ಎಂದು ಹೇಳುವುದು. ಏನೇ ಆಗಲಿ ಉಪನಿಷತ್ತುಗಳಲ್ಲಿ ಯೋಗವು ಒಂದು ನಿರ್ದಿಷ್ಟವಾದ ರೂಪ ತಾಳತೊಡಗಿತು. ಈ ಶಾಸ್ತ್ರಗಳು ಸಮಗ್ರವಾಗಿ ವೇದಾಂತಗಳಿಂದ ಬಂದಿರುವಂತವುಗಳು. ವೇದಗಳ ಸಾರಸತ್ವವನ್ನೊಳಗೊಂಡು ಉಚ್ಚಾಯ ಸ್ಥಿತಿಯನ್ನು ತಲುಪಿರುವಂತಹ ವೇದಗಳೇ ಆಗಿವೆ.


ಯೋಗ ಸೂತ್ರಗಳು

ರಾಜಯೋಗವನ್ನು ಕುರಿತಾದ ಗ್ರಂಥವಾದ ಪತಂಜಲಿ ಮುನಿಯ 'ಯೋಗ ಸೂತ್ರಗಳು', ಮೊದಲ ಕರಾರುವಾಕ್ಕಾದ, ಕ್ರೋಢೀಕರಿಸಿದ ಹಾಗೂ ಸಮಗ್ರವಾದ ಯೋಗದ ನಿಯಮಾವಳಿಯನ್ನು ಸೂಚಿಸಿದೆ. ಯಮ (ಆತ್ಮ ಸಂಯಮಕ್ಕೆ), ನಿಯಮ (ಆತ್ಮಪರೀಕ್ಷೆಗೆ), ಆಸನ, ಪ್ರಾಣಾಯಾಮ, ಪ್ರತ್ಯಾಹಾರ (ಹೊರಪ್ರಪಂಚದೊಡನೆ ಪ್ರಜ್ಞೆಯ ಸಂಬಂಧವನ್ನು ಕಡಿದುಕೊಳ್ಳುವುದಕ್ಕೆ), ಧಾರಣಾ (ಏಕಾಗ್ರತೆಗೆ), ಧ್ಯಾನ ಮತ್ತು ಸಮಾಧಿ (ಶುದ್ಧ ಚೈತನ್ಯದೊಡನೆ ತನ್ನ ಗುರುತಿಸಿಕೊಳ್ಳುವಿಕೆ) ಹೀಗೆ ಯೋಗಕ್ಕೆ ಎಂಟು ಮೆಟ್ಟಿಲುಗಳೆಂದು ಹೇಳಿದ್ದಾರೆ.

ಕ್ರಿಸ್ತಪೂರ್ವ 6ನೆಯ ಶತಮಾನದಲ್ಲಿ ಧ್ಯಾನ, ಧರ್ಮಸಿದ್ಧಾಂತ ಮತ್ತು ನೀತಿಶಾಸ್ತ್ರಗಳ ಆದರ್ಶಗಳಲ್ಲಿ ಭಗವಾನ್ ಬುದ್ಧನ ಪ್ರಭಾವವು ಕಂಡುಬಂದು ಯೋಗದ ಸಿದ್ಧತೆ ಹಾಗೂ ಅಭ್ಯಾಸಗಳನ್ನು ಅಲಕ್ಷಿಸಲಾಗಿತ್ತು. ಆದರೆ ಭಾರತೀಯ ಚಿಂತಕರು ಆ ದೃಷ್ಟಿಕೋನಗಳ ಪರಿಮಿತಿಗಳನ್ನು ಬಹುಬೇಗ ಅರಿತರು. ಧ್ಯಾನಕ್ಕೆ ಪೂರ್ವಸಿದ್ಧತೆಯಾಗಿ ದೇಹ ಮತ್ತು ಆದರೆ ಅಂಶಗಳನ್ನು ಶುದ್ಧೀಕರಿಸಿಕೊಳ್ಳಬೇಕಾಗಿರುವ ಅಗತ್ಯವನ್ನು ಮತ್ಸೇಂದ್ರನಾಥ ಯೋಗಿಗಳು ಬೋಧಿಸಿದರು. ಅವರು ನಾಥ ಎಂಬ ಪಂಥವನ್ನು ಕಟ್ಟಿದ್ದಲ್ಲದೆ, ಯೋಗಾಸನದಲ್ಲಿನ ಒಂದು ಆಸನಕ್ಕೆ ಅವರ ಸ್ಮರಣಾರ್ಥ ಮತ್ಸೇಂದ್ರಾಸನವೆಂದು ಹೆಸರಿಡಲಾಗಿದೆ. ಅವರ ಪ್ರಮುಖ ಶಿಷ್ಯರೊಬ್ಬರಾದ ಗೋರಖನಾಥರು ಆಡುಭಾಷೆ ಹಿಂದಿಯಲ್ಲಿ ಹಟಯೋಗದ ಮೇಲೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ಹಿಂದೆ ಭಾರತೀಯ ಸಂಪ್ರದಾಯದಲ್ಲಿ ಮೂಲಗ್ರಂಥಗಳು ಸಂಸ್ಕೃತಭಾಷೆಯಲ್ಲಿ ಇರಬೇಕಾದ ಅನಿವಾರ್ಯತೆ ಇತ್ತು. ಕೆಲವು ಸಲ ಆ ಬರವಣಿಗೆಗಳು ಸಂಕೇತದ ಮುಸುಕಿನಲ್ಲಿ ಅವಿತುಹೋಗಿ, ಅದಕ್ಕಾಗಿ ವಿಶೇಷವಾಗಿ ಅಧ್ಯಯನ ನಡೆಸುವವರಿಗೆ ಮಾತ್ರ ಅರ್ಥವಾಗುವಂತಿತ್ತು. ಹಟಯೋಗದಲ್ಲಿ ಬಹುವಾಗಿ ಸಿದ್ಧಿ ಪಡೆದಿರುವಂತಹ ಸ್ವಾಮಿ ಸ್ವಾತ್ಮಾರಾಮರು ಪ್ರಸ್ತುತದಲ್ಲಿ ಹಟಯೋಗದ ಬಗೆಗಿನ ಎಲ್ಲಾ ವಿದ್ಯಮಾನಗಳನ್ನು ಕಲೆಹಾಕಿ ಸಮಗ್ರವಾಗಿ ಹಟಯೋಗ ಪ್ರದೀಪಿಕಾ ಎಂಬ ಪುಸ್ತಕವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ಹಾಗೆ ಮಾಡುವಾಗ ಹಟಯೋಗದ ಅಗತ್ಯತೆಗನುಗುಣವಾಗಿ ಯಮ ಮತ್ತು ನಿಯಮಗಳ ಪ್ರಾಮುಖ್ಯತೆಯನ್ನು ಕಡಿಮೆಮಾಡಿದ್ದಾರೆ. ಇದರಿಂದ ಎಷ್ಟೋ ಆರಂಭದ ಸಾಧಕರಿಗೆ ಪ್ರಾರಂಭದಲ್ಲಿ ಎದುರಿಸಬಹುದಾದ ಅಡಚಣೆಗಳನ್ನು ನಿವಾರಿಸಿದಂತಾಯಿತು. ಹಟಯೋಗ ಪ್ರದೀಪಿಕಾದಲ್ಲಿ ಸ್ವಾತ್ಮಾರಾಮರು ದೇಹದಿಂದಲೇ ಅಭ್ಯಾಸವನ್ನು ಪ್ರಾರಂಭಿಸಿ ಮನಸ್ಸು ದೃಢವಾಗಿ ಸಮತೋಲನವನ್ನು ಸಾಧಿಸಿದ ನಂತರವೇ ಸ್ವ-ನಿಯಂತ್ರಣ ಮತ್ತು ಸ್ವ-ಶಿಸ್ತುಗಳನ್ನು ಪರಿಚಯಿಸಿದ್ದಾರೆ.

ಇಂತಹ ಹಲವು ಕೃತಿಗಳಿಂದ ಚುಟುಕು ಚುಟುಕುಗಳನ್ನು ಸಂಗ್ರಹಿಸಿ ಯೋಗಾಭ್ಯಾಸವೆಂದು ಇಂದು ಮಾಡುತ್ತಿರುವುದು. ■




ಇದು ಈ ಫೇಕೂಮ್ಯಾನ್ ಬರೆಯುವ ಪತ್ರಗಳ ಒಳಗುಟ್ಟು

ಕಾವೇರಿ ಹಾಗೂ ಮಹದಾಯಿ ನೀರಿನ ಅಂತರರಾಜ್ಯ ಸಮಸ್ಯೆಯ ಬಗ್ಗೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಧಾನಿ ಮೋದಿಯವರಿಗೆ ಏಳು ಪತ್ರ ಬರೆದಿದ್ದರೂ ಅವರಿಂದ ಯಾವುದೇ ಉತ್ತರವಿಲ್ಲ. ಆದರೆ ಇದೇ ಮೋದಿ ಸಣ್ಣ ಮಕ್ಕಳು ಬರೆದ ಪತ್ರಕ್ಕೆಲ್ಲಾ ತಾನು ತಕ್ಷಣ ಉತ್ತರಿಸುವುದಾಗಿ ಮೀಡಿಯಾದ ಎದುರು ಮಕ್ಕಳನ್ನು ನಿಲ್ಲಿಸಿಕೊಂಡು ಬಡಾಯಿ ಕೊಚ್ಚುತ್ತಾರೆ. ಆದರೆ ಒಂದು ರಾಜ್ಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಯ ಬಗ್ಗೆ ಅವರಿಗೆ ಸ್ವತಃ ಮುಖ್ಯಮಂತ್ರಿ ಬರೆದ ಏಳು ಪತ್ರಗಳನ್ನೂ ನೋಡಲು ಸಮಯವಿಲ್ಲವಂತೆ. ಬಹುಶ ಸಿದ್ದರಾಮಯ್ಯನವರು ತಮ್ಮ ಎರಡು ವರ್ಷದ ಮೊಮ್ಮಗನ ಹೆಸರಲ್ಲಿ ಕಾವೇರಿ-ಮಹದಾಯಿ ವಿಷಯದಲ್ಲಿ ಪತ್ರ ಬರೆದಿದ್ದರೆ ಮೋದಿ ಉತ್ತರಿಸುತ್ತಿದ್ದರೋ ಏನೋ.

ಸಣ್ಣ ಸಣ್ಣ ಮಕ್ಕಳು ಪ್ರಧಾನಿ ಮೋದಿಗೆ ಪತ್ರ ಬರೆಯುವುದು ಮತ್ತು ಮೋದಿ ಅದಕ್ಕೆ ಉತ್ತರಿಸುವುದು, ಇದೆಲ್ಲಾ ಕೇವಲ ಪೂರ್ವ ನಿರ್ಧಾರಿತ ನಾಟಕ ಅಷ್ಟೇ. ಬಿಜೆಪಿಯವರೇ ತಮ್ಮ ಕುಟುಂಬದ ಯಾವುದಾದರೂ ಸಣ್ಣ ಮಕ್ಕಳ ಹೆಸರಲ್ಲಿ ಪತ್ರ ಬರೆದಂತೆ ಮಾಡುತ್ತಾರೆ ಹಾಗೂ ಅದೇ ಬಿಜೆಪಿಯವರೇ ಪ್ರಧಾನಿ ಕಾರ್ಯಾಲಯದಿಂದ ಉತ್ತರ ಬಂದಂತೆ ತೋರಿಸುತ್ತಾರೆ. ಇವೆಲ್ಲಾ ಕೇವಲ ಮೋದಿಯ ಪಿಆರ್‌ಓಗಳ ಪ್ರಚಾರದ ಗಿಮ್ಮಿಕ್ ಅಷ್ಟೇ. ದಲಿತ ಮಹಿಳೆಯರು ಹಳ್ಳಿಹಳ್ಳಿಗಳಲ್ಲಿ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಪ್ರಧಾನಿಗೆ ಸಾವಿರಾರು ಪತ್ರ ಬರೆದಿದ್ದಾರೆ. ಆದರೆ ಪ್ರಧಾನಿ ಕಾರ್ಯಾಲಯದಿಂದ ಒಂದಕ್ಕೂ ಉತ್ತರವಿಲ್ಲ. "ದಲಿತರ ಮೇಲೆ ದಾಳಿ ಮಾಡಬೇಡಿ ನನ್ನ ಮೇಲೆ ದಾಳಿ ಮಾಡಿ ನನ್ನನ್ನು ಶೂಟ್ ಮಾಡಿ" - ಎಂದು ಪ್ರಧಾನಿಗಳು ಊನಾ ಘಟನೆಯ ಬಗ್ಗೆ ತಡವಾಗಿ ಹೇಳಿಕೆ ಕೊಟ್ಟಿದ್ದರು. ಆದರೆ ಎಲ್ಲೆಡೆ ದಲಿತ ಹುಡುಗಿಯರ ಮೇಲೆ ಅತ್ಯಾಚಾರ ಆಗುತ್ತಿದ್ದರೂ "ದಲಿತ ಹೆಣ್ಣುಗಳ ಮೇಲೆ ಅತ್ಯಾಚಾರ ಮಾಡಬೇಡಿ ನನ್ನ ಮೇಲೆ ಮಾಡಿ"- ಎಂದು ಮೋದಿ ಯಾವದೇ ನಾಟಕೀಯ ಭಾಷಣ ಈವರೆಗೆ ಬಿಗಿದಿಲ್ಲ. ಇದುವೇ ಈ ಫೇಕೂಮ್ಯಾನ್ ಮಕ್ಕಳಿಗೆ ಬರೆಯುವ ಪತ್ರಗಳ ಒಳಗುಟ್ಟು.

ತನ್ನ ಸ್ವಚ್ಛ ಭಾರತದ ಕನಸು ಕರ್ನಾಟಕದ ಹೆಣ್ಣು ಮಗಳೊಬ್ಬಳ ಮೂಲಕ ಸಾರ್ಥಕವಾಗುತ್ತಿದೆ ಎಂಬುದು ತನಗೆ ಭಾರಿ ಖುಷಿ ಕೊಡುತ್ತಿದೆ ಎಂದು ಮೊನ್ನೆಯ ತನ್ನ 'ಮಂಕೀ ಬಾತ್' ಕಾರ್ಯಕ್ರಮದಲ್ಲಿ ಮೋದಿ ಹೇಳಿಕೊಂಡರು. ಆದರೆ ಮೋದಿ ಈ ಯೋಜನೆಯ ರೂವಾರಿ ಅಲ್ಲವೇ ಅಲ್ಲ. ನಿಜಸಂಗತಿ ಏನೆಂದರೆ ಇದು ಹಿಂದಿನ ಯುಪಿಎ ಸರಕಾರದ ಯೋಜನೆ. ಆಗ ಅದಕ್ಕೆ "ನಿರ್ಮಲ್ ಭಾರತ್"



ಯೋಜನೆ ಎಂದು ಹೆಸರಿತ್ತು. ಮೋದಿ ಕೇವಲ ಅದರ ಹೆಸರು ಬದಲಾಯಿಸಿ ನಾಟಕೀಯ ಪ್ರಚಾರ ಮಾಡಿದ್ದು ಅಷ್ಟೇ, ಜತೆಗೆ ಜನರ ಮೇಲೆ ಶೇ.0.5 ಸ್ವಚ್ಛ ಭಾರತ್ ಸೆಸ್ ಎಂಬ ಹೊಸ ತೆರಿಗೆ ಹೇರಿದ್ದು. ಮೇಲಾಗಿ ಮಾಧ್ಯಮದಲ್ಲಿ ಕೋಟಿಗಟ್ಟಲೆ ವೆಚ್ಚದ ಭಾರಿ ಜಾಹೀರಾತುಗಳಿಂದ ತಮ್ಮ ಪರವಾಗಿರುವ ಪತ್ರಿಕೆಗಳಿಗೆ ಕೋಟಿಗಟ್ಟಲೆಯ ಲಾಭ ಮಾಡಿಕೊಟ್ಟಿದ್ದು ಇದೇ ಮೋದಿ. ಯುಪಿಎ ಸರಕಾರದ ಸಮಯದಲ್ಲಿ ಹಳ್ಳಿಗಳಲ್ಲಿ ಎಷ್ಟು ಶೌಚಾಲಯ ಕಟ್ಟಿಸಲಾಯಿತೋ ಅದರ ಕಾಲು ಭಾಗ ಸಹ ಮೋದಿ ಸರಕಾರ ಕಟ್ಟಿಸಿಲ್ಲ ಎಂಬುದು ಸರಕಾರವೇ ಕೊಟ್ಟ ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಆದರೆ ಮೋದಿ ಸರಕಾರ ಪ್ರಚಾರಕ್ಕೆ ಮಾಡಿದ ಖರ್ಚು ಮಾತ್ರ ಯುಪಿಎಗಿಂತ ಹತ್ತು ಪಟ್ಟು ಹೆಚ್ಚಿದೆ. ಕರದಾತಾರ ಹಣ ಕೇಸರಿ ಮಾಧ್ಯಮಗಳಿಗೆ ತಿನ್ನಿಸಿದ್ದು ಮಾತ್ರ ಮೋದಿಯ ನೈಜ ಸಾಧನೆ.

- ವೀರಪ್ಪ ಡಿ.ಎನ್, ಮಡಿಕೇರಿ


ಮೋದಿ ಸಹಾಯ ಮಾಡುವುದು ಅಂಬಾನಿ, ಅದಾನಿಗಳಿಗೆ ಮಾತ್ರ

ನರೇಂದ್ರ ಮೋದಿಯ ಕಿರಿಯ ಸಹೋದರ ಪ್ರಹ್ಲಾದ್ ಮೋದಿಯ ಮಗಳು ನಿಕುಂಜ್ ಬೆನ್ ಬಡತನದಲ್ಲಿ ಇತ್ತೀಚೆಗೆ ಕ್ಯಾನ್ಸರ್‌ನಿಂದ ತೀರಿಕೊಂಡ ಸುದ್ದಿ ಕೇಳಿದಕೂಡಲೇ ಕೇಸರಿ ಮೀಡಿಯಾ ಹಾಗೂ ಮೋದಿಯ ಪಾದ ನೆಕ್ಕುವ ಭಕ್ತಗಣ ಸಾಮಾಜಿಕ ಜಾಲತಾಣದಲ್ಲಿ "ನೋಡಿದಿರಾ ನಮ್ಮ ಮೋದಿ ಎಷ್ಟೊಂದು ಶುದ್ಧ ಹಸ್ತರು. ಅವರ ಸ್ವಂತ ತಮ್ಮ ಹಾಗೂ ತಮ್ಮನ ಮಕ್ಕಳೆಲ್ಲಾ ಬಡತನದಲ್ಲಿ ಬಿದ್ದು ಸಾಯುತ್ತಿದ್ದರೂ ಮೋದಿ ಸ್ವಲ್ಪವೂ ಸಹಾಯ ಮಾಡಲಿಲ್ಲ. ಆದರೆ ವಿರೋಧ ಪಕ್ಷದ ನೇತಾರರು ತಮ್ಮ ಇಂತಹ ಸಂಬಂಧಿಕರಿಗೆ ಕೋಟಿಗಟ್ಟಲೆಯ ಆಸ್ತಿ ಮಾಡಿ ಕೊಟ್ಟಿದ್ದಾರೆ" ಎಂದೆಲ್ಲಾ ಮೋದಿ ಎಷ್ಟು ಶುದ್ಧಹಸ್ತನೆಂದು ಈ ಉದಾಹರಣೆಯೊಂದಿಗೆ ಹೊಗಳಿ ಹೊಗಳಿ ಸಂಭ್ರಮಿಸಿದರು. ಆದರೆ ಒಳಗಿನ ನಿಜಸಂಗತಿ ಸಂಘಿಗಳಿಗೆ ಗೊತ್ತಿದ್ದರೂ ಸಾಮಾನ್ಯ ಜನರಿಗೆ ಗೊತ್ತಿಲ್ಲ.

ನರೇಂದ್ರ ಮೋದಿಗೆ ಇಬ್ಬರು ಅಣ್ಣಂದಿರು ಮತ್ತು ಇಬ್ಬರು ತಮ್ಮಂದಿರು ಇದ್ದಾರೆ. ಒಬ್ಬ ತಂಗಿಯೂ ಇದ್ದಾಳೆ. ಇವರೆಲ್ಲರೊಂದಿಗೆ ನರೇಂದ್ರ ಮೋದಿ ಚಿಕ್ಕಂದಿನಿಂದಲೇ ಒಳ್ಳೆಯ ಸಂಬಂಧ ಇಟ್ಟುಕೊಳ್ಳಲಿಲ್ಲ. ಅಷ್ಟೇ ಅಲ್ಲ, ತನ್ನ ಹೆತ್ತ ತಂದೆತಾಯಿಯೊಂದಿಗೂ ಮೋದಿ ಸಂಬಂಧ ಬಿಗಡಾಯಿಸಿ ಕೊಂಡಿದ್ದರು.

ತನ್ನ 17ನೇ ವಯಸ್ಸಿನಲ್ಲಿ ಮೆಟ್ರಿಕ್ ಫೇಲಾದ ನರೇಂದ್ರ ಮೋದಿ ಮನೆಬಿಟ್ಟು ಹೋದವನು 21ನೇ ವಯಸ್ಸಿಗೆ ತನ್ನ ಊರಾದ ವಡ್ನಾಗರಕ್ಕೆ ಹಿಂತಿರುಗಿ ಬಂದರೂ ಅವರು ತಮ್ಮ ಕುಟುಂಬ ಸೇರಿಕೊಳ್ಳಲಿಲ್ಲ. ಅವರು ಬೇರೆಯಾಗಿಯೇ ಇದ್ದು ಬಸ್ ಸ್ಟಾಂಡಿನಲ್ಲಿ ತನ್ನ ಗೆಳೆಯನೊಂದಿಗೆ ಕ್ಯಾಂಟೀನ್ ನಡೆಸಿ ಹಣ ಗಳಿಸಿದರೂ ತನ್ನ ತಂದೆ ತಾಯಿಗೆ ಸ್ವಲ್ಪವೂ ಸಹಾಯ ಮಾಡಲಿಲ್ಲ. ಅವರ ತಂದೆ ಮತ್ತು ಇಬ್ಬರು ಅಣ್ಣಂದಿರೇ ರೇಲ್ವೆ ಕ್ಯಾಂಟೀನ್ ನಡೆಸಿ ಕುಟುಂಬದ ಹೊಣೆ ಹೊತ್ತಿದ್ದು ಹಾಗೂ ತಂಗಿ ವಸಂತಿಬೆನ್‌ಗೆ ಮದುವೆ ಸಹ ಮಾಡಿದ್ದು.

ಈ ನರೇಂದ್ರ ಮೋದಿ ಅದೇ ಊರಲ್ಲಿ ಇದ್ದರೂ ತಂಗಿಯ ಮದುವೆಗೆ ಸಹ ಒಂದು ಗಳಿಗೆ ಬಂದು ಹೋಗಲಿಲ್ಲ. ಇಬ್ಬರು ಅಣ್ಣಂದಿರು ಕಷ್ಟಪಟ್ಟು ಪದವಿ ಶಿಕ್ಷಣ ಮುಗಿಸಿ ಸ್ವಂತ ಅರ್ಹತೆಯ ಮೇಲೆ ನೌಕರಿ ಪಡೆದರು. ಇಬ್ಬರು ತಮ್ಮಂದಿರೂ ಶಿಕ್ಷಣ ಮುಗಿಸಿ ತಮ್ಮ ಬದುಕು ತಾವೇ ನಿರ್ಮಿಸಿಕೊಂಡರು. ತಂದೆ ತೀರಿಕೊಂಡ ನಂತರ ತಾಯಿಯನ್ನೂ ನೋಡಿಕೊಂಡಿದ್ದು ಅದೇ ಊರಿನಲ್ಲಿ ರೇಷನ್ ಅಂಗಡಿ ನಡೆಸುವ ಕೊನೆಯ ತಮ್ಮ ಅಮೃತ್ ಭಾಯಿ. ಇವರಾರಿಗೂ ನರೇಂದ್ರ ಸ್ವಲ್ಪವೂ ಸಹಾಯ ಮಾಡಲಿಲ್ಲ. ತಂದೆ ತೀರಿಕೊಂಡಾಗಲೂ ಮೋದಿ ಕೊನೆಯ ಬಾರಿ ತಂದೆಯ ಮುಖ ನೋಡಲು ಸಹ ಹೋಗಲಿಲ್ಲ. ಅಷ್ಟೊಂದು ಕಲ್ಲು ಮನಸ್ಸಿನ ವ್ಯಕ್ತಿತ್ವ ಮೋದಿಯದ್ದು. ತಾನು ಮೆಟ್ರಿಕ್ ಫೇಲಾಗಿ ಶಿಕ್ಷಣ ಮೊಟಕುಗೊಳಿಸಿರುವಾಗ ಇಬ್ಬರು ಅಣ್ಣಂದಿರು ಮತ್ತು ಇಬ್ಬರು ತಮ್ಮಂದಿರು ಬಹುಕಷ್ಟದಿಂದ ಪದವಿ ಶಿಕ್ಷಣ ಪೂರ್ಣಗೊಳಿಸಿದ್ದು ಸಹ ನರೇಂದ್ರ ಮೋದಿಗೆ ಮತ್ಸರ ಹುಟ್ಟಿಸಿತ್ತು. ಹಾಗಿರುವಾಗ ಈಗ ಕಿರಿ ಸಹೋದರ ಪ್ರಹ್ಲಾದ್ ಮೋದಿಯ ಮಗಳು ನಿಕುಂಜ್ ಬೆನ್ ತೀರಿಕೊಂಡಿದ್ದು ನರೇಂದ್ರ ಮೋದಿಗೆ ಯಾವ ನೋವೂ ಆಗುವುದು ಸಾಧ್ಯವಿಲ್ಲ... ಆದರೂ ಪೇಡ್ ಮೀಡಿಯಾ ಮಾತ್ರ ತನ್ನ ತಮ್ಮನ ಮಗಳು ತೀರಿಕೊಂಡಾಗ ಮೋದಿ ಹಾಗೆ ಅತ್ತರು ಹೀಗೆ ಶೋಕಿಸಿದರು ಎಂದೆಲ್ಲಾ ಸುಳ್ಳು ವರದಿ ಪ್ಲಾಂಟ್ ಮಾಡುತ್ತಿವೆ.



ಪ್ರಧಾನಿಯಾದ ಮೇಲೆ ಮೋದಿ ತನ್ನ ತಾಯಿಯನ್ನು ಎರಡು ದಿನದ ಮಟ್ಟಿಗೆ ಪ್ರಧಾನಿ ನಿವಾಸಕ್ಕೆ ಕರೆಸಿಕೊಂಡು ಆಕೆಯನ್ನು ವೀಲ್ ಚೇರಿನಲ್ಲಿ ಕೂಡಿಸಿ ತಾನೇ ನೂಕಿಕೊಂಡು ತೋಟದಲ್ಲಿ ತಿರುಗಾಡಿಸುವಂತೆ ಫೋಟೋಗೆ ಪೋಸ್ ಕೊಟ್ಟಿದ್ದು ಕೇವಲ ಮೀಡಿಯಾ ಪ್ರಚಾರಕ್ಕಾಗಿ ಮಾತ್ರವೇ ವಿನಃ ತಾಯಿಯ ಮೇಲಿನ ಪ್ರೀತಿಯಿಂದಲ್ಲ ಎಂದು ಎಲ್ಲರಿಗೂ ಆಗಲೇ ಮನದಟ್ಟಾಗಿತ್ತು. ಮೋದಿಯ ಮಾತೃವಾತ್ಸಲ್ಯದ ನಾಟಕ ಕೇವಲ ಅರ್ಧ ಗಂಟೆಯ ಫೋಟೋ ಸೆಷನ್ನಿಗಾಗಿ ಮಾತ್ರ ಸೀಮಿತವಿತ್ತು.

ಈ ಮೋದಿ ತನ್ನ ಪ್ರಧಾನಿ ಪದದ ದುರುಪಯೋಗ ಮಾಡಿ ಸಹಾಯ ಮಾಡುವುದು ಕೇವಲ ಅಂಬಾನಿ, ಅದಾನಿಯಂತಹ ಗುಜ್ಜು ಉದ್ಯಮಿಗಳಿಗೆ ಮಾತ್ರ. ಯಾಕೆಂದರೆ ಚುನಾವಣೆಯ ಸಮಯದಲ್ಲಿ ಮೋದಿಗೆ ಚುನಾವಣೆ ಖರ್ಚಿಗೆ ಬಿಲಿಯನ್‌ಗಟ್ಟಲೆ ಕಪ್ಪು ಹಣ ಕೊಡುವುದು ಇದೇ ಗುಜ್ಜು ಉದ್ಯಮಿಗಳೇ ಹೊರತು ಅವರ ಒಡಹುಟ್ಟಿದವರಲ್ಲವಲ್ಲ. ಅದಕ್ಕಾಗಿ ಮೋದಿಗೆ ಅಂಬಾನಿ ಅದಾನಿಗಳೇ ನಿಜವಾದ ಸಹೋದರರು. ಅವರಿಗೆ ಮಾತ್ರ ಐವತ್ತು ಸಾವಿರ ಕೋಟಿಯ ಓಎನ್‌ಜಿಸಿ ಗ್ಯಾಸ್ ಕದಿಯಲು ಮೋದಿ ಅನುವು ಮಾಡಿಕೊಟ್ಟಿರುವುದು. ಮೋದಿ ಪಾದುಕೆ ಭಕ್ತರೇ ಗಮನಿಸಿ, ಇತರ ನೇತಾರರು ತಮ್ಮ ಸಂಬಂಧಿಕರಿಗೆ ಹಣದ ಸಹಾಯ ಮಾಡಿದ್ದಕ್ಕಿಂತ ಹೆಚ್ಚು ಹೇಯ ಮತ್ತು ದೇಶದ್ರೋಹದ ಕೆಲಸವೆಂದರೆ ಮೋದಿ ದೇಶದ ಸಂಪತ್ತು ಹೀಗೆ ಕೊಳ್ಳೆ ಹೊಡೆದು ಅಂಬಾನಿಯಂತಹ ಕಳ್ಳ ಉದ್ಯಮಿಗಳಿಗೆ ಧಾರೆಯೆರೆಯುತ್ತಿರುವುದು.

- ಜಿ. ರವಿಕಿರಣ,

ಹಾಡೋನಹಳ್ಳಿ ದುರ ದೇವರ ಸೂಚನೆಯಲ್ಲವ


ಶಿವಮೊಗ್ಗದ ಹಾಡೋನಹಳ್ಳಿ ಗ್ರಾಮದ ವಿಗ್ರಹ ವಿಸರ್ಜನೆಯ ವೇಳೆ 12 ಯುವಕ ಮುಳುಗಿ ಸತ್ತರು. ಎಲ್ಲರೂ 20 ವರ್ಷ ಬ ಹಾಗೂ ಎಲ್ಲರೂ ಒಂದೇ ಗ್ರಾಮದವರು ಈ ಅಪಘಾತಗಳೆಲ್ಲಾ ದೇವರೇ ಕೊ ಸಂಕೇತಗಳೆಂದು ನಾವು ಪರಿಗಣಿಸಬೇಕು ಜನರು ಹೀಗೆ ಬೀದಿಯಲ್ಲಿ ಭಕ್ತಿಯ ಪ್ರದರ್ಶನ ಮಾಡುವುದು ತನಗೆ ಇಷ್ಟವಿ ದೇವರೇ ಕೊಡುತ್ತಿರುವ ಇಂತಹ ಅನೇಕ ಸ ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಮುಂಬೈಯಲ್ಲಂತೂ ಪ್ರತಿವರ್ಷ ಕನಿ ಜನರು ಗಣೇಶ ವಿಸರ್ಜನೆಯ ವೇಳೆ ಅಲೆಗಳಲ್ಲಿ ಸಿಕ್ಕಿ ಸಾಯುತ್ತಾರೆ. ಹಾಗೆ ಜನ್ಮಾಷ್ಟಮಿಯಂದು ಮೊಸರು ಕುಡಿಕೆ ಮಾನವ ಪಿರಾಮಿಡ್ ನಿಂದ ಬಿದ್ದು ಒಬ್ಬರಾದರೂ ಸಾಯುತ್ತಾರೆ. ಹಾಗಿರುವಾ ಹೆಸರಲ್ಲಿ ಬೀದಿ ನಾಟಕ ಆಡುವುದು ದೇವರಿಗೇ ಇಷ್ಟವಿಲ್ಲ ಎಂಬ ಇಂತಹ ಸ ನಾವು ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ?

ವಿಚಿತ್ರವೆಂದರೆ ವೈದಿಕ ಧರ್ಮ ಉ ಉತ್ತರ ಭಾರತದಲ್ಲೆಲ್ಲಿಯೂ ಗಣಪತಿಯ ಕೃಷ್ಣನ ಹೆಸರಲ್ಲಿ ಇಂತಹ ಭಕ್ತಿಯ ಬೀದಿನ ಇದೆಲ್ಲಾ ಇರುವುದು ಮಹಾರಾಷ್ಟ್ರ, ಗುಜರ ದಕ್ಷಿಣ ಭಾರತದಲ್ಲಿ ಮಾತ್ರ.

ನಮ್ಮ ದೈವ ಭಕ್ತಿ ಏನಿದ್ದರೂ ನ ಅಥವಾ ದೇವಾಲಯಕ್ಕೆ ಸೀಮಿತವಾ ದೇವರಿಗೆ ಇಷ್ಟ. ಈಗ ದಿನದಿಂದ ದಿನ ಧರ್ಮದ ಹೆಸರಲ್ಲಿ ಬೀದಿ ನಾಟಕ ಹೆಚ್ಚುತ್ತಿ ಹಿಂದೂಗಳು ಮಾತ್ರವಲ್ಲ ಇತರ ಧ ಸ್ಪರ್ಧೆ ಒಡ್ಡುತ್ತಿದ್ದಾರೆ. ಹಣವಂತರು ತ ಮದದಿಂದ ಮತ್ತು ಯುವಕರು ತಮ್ಮ ಮದದಿಂದ ದೇವರ ಹೆಸರಿನಲ್ಲಿ ನಡೆಸುತ್ತಾರೆ. ಇದನ್ನೆಲ್ಲ ಮಾಡುವುದು ಎಂಬುದು ಶುದ್ಧ ಸುಳ್ಳು. ಅವರಲ್ಲಿ ಭಕ್ತಿ ಇದ್ದರೆ ಅವರು ಕುಡಿದು ಪಾನಮತ್ತರಾಗು

ಸಾರ್ವಜನಿಕ ಗಣೇಶೋತ್ಸವದ ಮೂ ಮತ್ತು ಪುಣೆ ನಗರಗಳು. ಕೇವಲ ಹೋರಾಟಕ್ಕೆ ಜನಬೆಂಬಲ ಗಳಿಸಲು ತಿಲಕ ಶುರು ಮಾಡಿದ್ದರಿಂದ 1947 ರಲ್ಲಿ ದೇಶ ಸಿಕ್ಕ ನಂತರ ಸಾರ್ವಜನಿಕ ಗಣೇಶೋತ್ಸವ ಆದರೆ ನಿಲ್ಲುವ ಬದಲು ಅದು ಇನ್ನೂ ವಿಕೃತಗೊಂಡಿದೆ. ಮುಂಬೈಯಲ್ಲಿ ಒಂದೇ ಮೂರ್ತಿಗೆ ರೂ.300 ಕೋಟಿಯ ಚಿನ್ನ ಹೇರಿದರೆ ಗುಜರಾತಿನ ಸೂರತ್‌ನಲ್ಲಿ ಕೇ ಹರಳುಗಳಿಂದ ಮಾಡಿರುವ ಗಣಪತಿ ರೂ. 600 ಕೋಟಿ ಬೆಲೆ ಬಾಳುತ್ತದಂ ಶತಮೂರ್ಖತನ ಜಗತ್ತಿನಲ್ಲಿ ಬೇರೆಲ್ಲಿ ಇದೆಯೇ? ಈ ಬೌದ್ಧಿಕ ದಿವಾಳಿತನಕ್ಕೆ ಭಕ್ತಿ



ಮಹಾ ಮೂರ್ಖತನವಲ್ಲದೇ ಬೇರೇನೂ

ದೇವರಿಗೆ ಒಂದು ವೇಳೆ ನಿಜವಾ ವಜ್ರದ ಮೇಲೆ ಆಸೆ ಇದ್ದಿದ್ದೇ ಆಗಿದ್ದರೆ ಜಗತ್ತಿನಲ್ಲೆಲ್ಲಾ ಉಕ್ಕಿನ ಅದಿರಿನ ಬದ ಅದಿರಿನ ಗಣಿಯನ್ನೇ ಸೃಷ್ಟಿಸುತ್ತಿದ್ದ ಹಾಗು ಗಣಿಯ ಬದಲು ವಜ್ರದ ಗಣಿಯನ್ನೇ ಅಲ್ಪ ಮಾನವನಂತೆ ದೇವರಿಗೂ ಚಿ ಸಂಪತ್ತಿನ ಲೋಭವಿದೆ ಎಂದು ಭಾವಿಸ



ಮಾನವರಷ್ಟೇ ಅಲ್ಪಮತಿ ಹಾಗೂ ಲೋಭಿ ಎರಿಗಣಿಸಿದಂತೆ ಆಗುತ್ತದೆ. ಕಾವಿಧಾರಿಗಳೆಲ್ಲಾ ಸ್ವತಃ ಚಿನ್ನ ವಜ್ರದ ಕಿರೀಟ ಧರಿಸಿ ತಮ್ಮ ಭಟ್ಟಂಗಿಗಳಿಂದ ವರ್ಧಂತಿಗಳನ್ನು ಆಳ್ಳುತ್ತಿರುವಾಗ ದೇವರಿಗೆ ಚಿನ್ನ ವಜ್ರಗಳ ಎಂದು ಸಾಮಾನ್ಯ ಜನರಿಗೆ ತಿಳಿ ಹೇಳಲು ಸ್ವಾಮೀಜಿಯೂ ಇಲ್ಲದಿರುವುದು ನಮ್ಮ ದೊಡ್ಡ ದುರಂತ.

– ರಾಮಕೃಷ್ಣ ಕುಲಾಲ್, ಬೆಂಗಳೂರು

ಜಾದಾಸ ಚೆಡ್ಡಿಗಳ ಇಬ್ಬಂದಿ ನೀತಿ

ಪಿಯ ಕಡಿಯಾಳಿಯಲ್ಲಿ ಮೊನ್ನೆ ನಡೆದ ತ್ಸವ ಸಮಾರಂಭದ ಕೊನೆಯಲ್ಲಿ ಯನ್ನು ನುಡಿಸಿದಾಗ ಅಲ್ಲಿ ಉಪಸ್ಥಿತರಿದ್ದ ವಾಜುಭಾಯಿ ವಾಲಾ ಸಹಿತ ಮೇಲಿದ್ದ ಎಲ್ಲಾ ಗಣ್ಯರು ಎದ್ದು ರಾಷ್ಟ್ರಗೀತೆಗೆ ಗೌರವ ಸಲ್ಲಿಸಿದರು. ಆದರೆ ಗಿ ಬಂದಿದ್ದ ಕನ್ಯಾಡಿಶ್ರೀ ಬ್ರಹ್ಮಾನಂದ ಮಾತ್ರ ವೇದಿಕೆಯಲ್ಲಿ ಕುಳಿತೇ ಇದ್ದರು. ನುಡಿಸುವಾಗ ಎದ್ದು ನಿಲ್ಲುವ ಶಿಷ್ಟಾಚಾರ ಡೆ ಇದೆಯೆಂದು ಗೊತ್ತಿಲ್ಲದ ಇವರೂ ಮಾರ್ಗದರ್ಶಕ ಸ್ವಾಮೀಜಿ ಆಗಬಲ್ಲರೇ? ಯಾಳಿ ಗಣೇಶೋತ್ಸವದ ಆಯೋಜಕರು ರಿವಾರದವರು. ಹೆಜ್ಜೆಹೆಜ್ಜೆಗೆ ದೇಶಭಕ್ತಿಯ ಟಕ ಆಡುವ ಸಂಘ ಪರಿವಾರದವರೂ ಚಾರದ ಬಗ್ಗೆ ಸ್ವಾಮೀಜಿಗಳಿಗೆ ಸೂಕ್ತವಾಗಿ



ವುದು ಆಶ್ಚರ್ಯ.

ವೇಳೆ ಯಾವುದಾದರೂ ಸಮಾರಂಭದಲ್ಲಿ ದ್ರಿ ಅಥವಾ ಮುಸ್ಲಿಮರ ಮೌಲವಿಗಳು ನುಡಿಸುವಾಗ ಎದ್ದು ನಿಲ್ಲದೇ ಕುಳಿತೇ ಇದ್ದರೆ ರಿವಾರದ ಗಾಂಜಾದಾಸ ಸದಸ್ಯರು ಅದೆಷ್ಟು ಸುತ್ತಿದ್ದರೋ ಏನೋ.. ಇದೇನೂ ಮೊದಲ ಲ್ಲ. ಕರಾವಳಿಯ ಎಲ್ಲಾ ಕಾವಿಧಾರಿಗಳೂ ಶಕ್ಕಿಂತ ದೊಡ್ಡವರೆಂದು ಭಾವಿಸುತ್ತಾರೆ. ತಿರುವ ತರುಣ ಉಡುಪಿ ಸ್ವಾಮೀಜಿಗಳು ಬಂಟ ಸ್ವಾಮೀಜಿಗಳ ಸಹಿತ ಕರಾವಳಿಯ ವಿಧಾರಿಗಳೂ ರಾಷ್ಟ್ರಗೀತೆ ನುಡಿಸುವಾಗ ುರಿದವರಂತೆ ಕುಳಿತೇ ಇರುತ್ತಾರೆ. ಆದರೆ ದ ಒಳನಾಡಿನ ಸ್ವಾಮಿಗಳು ಇಂತಹ ಾಡುವುದಿಲ್ಲ. ಅಲ್ಲಿಯವರೆಲ್ಲಾ ರಾಷ್ಟ್ರಗೀತೆ ಗ ತಪ್ಪದೇ ಎದ್ದು ನಿಲ್ಲುತ್ತಾರೆ.

ಂದು ವೈಚಿತ್ರ್ಯವೆಂದರೆ ಉಡುಪಿಯ ಈ ತ್ಸವಕ್ಕೆ ಉಡುಪಿಯ ಸಂಸದೆ ಶೋಭಾ ಹಾಜರಾಗದೇ ದ.ಕ. ಜಿಲ್ಲೆಯ ಸಂಸದ ಟೀಲ್ ಪ್ರಾಕ್ಸಿಯಾಗಿ ಬಂದದ್ದು. ಉಡುಪಿಯ ಸಂಸದೆ ಕರಂದ್ಲಾಜೆ ಯಾವಾಗಲೂ ರಪ್ಪನ ನೆರಳಿನಂತೆ ಶಿವಮೊಗ್ಗ- ು ಸುತ್ತುವುದನ್ನು ಉಡುಪಿಯ ಮತದಾರರು ಯಾಕೆ? ತನ್ನ ಸ್ವಕ್ಷೇತ್ರ ಕಡೆಗಣಿಸಿ ಇತರರ ಯಡ್ಡಿ ಜತೆ ಅಂಟಿಕೊಂಡು ತಿರುಗಾಡಲು ು ಜನರು ಅವರನ್ನು ಸಂಸತ್ತಿಗೆ ಆಯ್ಕೆ ವುದೇ?

ನಲ್ಲಿ ನಡೆದ ಇತ್ತೀಚಿನ ಘಟನೆಗಳನ್ನು ಥೀಮ್ ಇರುವ ಸಾರ್ವಜನಿಕ ಗಣೇಶನನ್ನೇ ಕೂಡಿಸುವ ಪದ್ಧತಿ ಮಹಾರಾಷ್ಟ್ರ- ದಲ್ಲಿ ಹಲವಾರು ದಶಕಗಳಿಂದ ಇದೆ. ಈ ಡಿಶಾದಲ್ಲಿ ಹೆಂಡತಿಯ ಹೆಣ ಹೊತ್ತು 12 ಡೆದ ಹಳ್ಳಿಗನ ಥೀಮ್ ಇರುವ, ಅಥವಾ ಸತ್ತ ಎತ್ತಿನ ಚರ್ಮ ಸುಲಿಯುವ ಭೀಕರವಾಗಿ ಬಡಿಯುವ ಥೀಮ್ ಇರುವ ಸಂಘ ಗೂಂಡಾಗಳು ಪ್ರವೀಣ್ ಪೂಜಾರಿ ೀಶ್ ಪೂಜಾರಿಯನ್ನು ಹೊಡೆದು ಕೊಲ್ಲುವ ಉಳ್ಳ ಗಣಪತಿಗಳನ್ನು ಯಾರಾದರೂ ಸುದು ಎಂಬ ನನ್ನ ಊಹೆ ಯಾಕೋ ತುಂಬಾ ಬೇಜಾರಾಯಿತು.

– ಜಗದೀಶ್ ಗಾಂಭೀರ್, ಉಡುಪಿ

ಶೆಟ್ಟಿ ತಮ್ಮದೇ ಆಸ್ಪತ್ರೆ ಕಟ್ಟಿಸಲಿ



ಉಡುಪಿಯ ಜಿಲ್ಲಾ ಸರಕಾರಿ ಆಸ್ಪತ್ರೆಯನ್ನು ಖಾಸಗಿ ಯವರಿಗೆ ಒಪ್ಪಿಸಿ ಅದನ್ನು ಹೈಟೆಕ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಅಬುಧಾಬಿಯಲ್ಲಿ ನೆಲೆಸಿ ರುವ ಉಡುಪಿ ಮೂಲದ ಬಿ.ಆರ್.ಶೆಟ್ಟಿಯ ಉದ್ಯಮ ಗುಂಪಿಗೆ ಒಪ್ಪಿಸುವ ಕರ್ನಾಟಕ ಸರಕಾರದ ನಿರ್ಧಾರ ಉಡುಪಿಯ ಜನರಿಗೆ ಶಾಕ್ ಕೊಟ್ಟಿದೆ. ಅನೇಕ ಕುಂದುಕೊರತೆಗಳ ಹೊರತಾಗಿಯೂ ಈ ಸರಕಾರಿ ಆಸ್ಪತ್ರೆ ಉಡುಪಿಯ ಸುತ್ತಮುತ್ತಲಿನ ಬಡ ಜನರಿಗೆ ಬಹಳ ಉಪಯುಕ್ತವಾಗಿತ್ತು. ಸರಕಾರವೇ ಇದನ್ನು ಉನ್ನತೀಕರಿಸುವ ಬದಲು ವಿದೇಶದಲ್ಲಿ ನೆಲೆಸಿರುವ ಒಬ್ಬ ಲಾಭಬಡುಕ ಉದ್ಯಮಿಗೆ ಕೊಡುತ್ತಿರುವುದನ್ನು ನೋಡಿದರೆ ಸಿದ್ದರಾಮಯ್ಯ ಸರಕಾರ ನಿಜವಾಗಿ ಜನತೆಯ ಪರವಾಗಿದೆಯೋ ಅಥವಾ ಬಿಜೆಪಿ ಸರಕಾರದಂತೆ ದೊಡ್ಡ ಉದ್ಯಮಿಗಳ ಕೈಗೊಂಬೆಯಾಗಿದೆಯೋ ಎಂಬ ಸಂಶಯ ಮೂಡುತ್ತಿದೆ. ಈ ಆಸ್ಪತ್ರೆ ಖಾಸಗೀಕರಣವಾದರೆ ಸೂಪರ್ ಸ್ಪೆಷಾಲಿಟಿ ಎಂಬ ಹಣೆಪಟ್ಟಿಯೊಂದಿಗೆ ಉಡುಪಿಯ ಜನರನ್ನು ಭಯಂಕರವಾಗಿ ಸುಲಿಯುವುದು ಖಂಡಿತ.

ಈ ಸರಕಾರಿ ಆಸ್ಪತ್ರೆಯ ಖಾಸಗೀಕರಣದ ವಿರುದ್ಧ ಕೇವಲ ಜನ ಸಾಮಾನ್ಯರು ಮಾತ್ರ ಪ್ರತಿಭಟಿಸುತ್ತಿದ್ದಾರೆ. ಕ್ಷುಲ್ಲಕ ವಿಷಯಗಳಿಗೆಲ್ಲಾ ಬೀದಿಗಿಳಿದು ಪ್ರಹಸನ ಮಾಡುವ ಸಂಘ ಪರಿವಾರದವರು ಸುಮ್ಮನಿದ್ದಾರೆ. ವಿಶೇಷವೆಂದರೆ ಎಲ್ಲಾ ವಿಷಯಗಳ ಬಗ್ಗೆ ತನ್ನ ಭಾರಿ ಪರಿಣಿತ ಅಭಿಪ್ರಾಯವನ್ನು ಕೇಳದೆಯೇ ಕೊಡುವ ಉಡುಪಿಯ ಪೇಜಾವರ ಮಠಾಧೀಶರೂ ಸುಮ್ಮನಿದ್ದಾರೆ. ಎಲ್ಲವೂ ಆ ಅನಿವಾಸಿ ಬಿ.ಆರ್.ಶೆಟ್ಟಿಯ ಹಣದ ಮಹಿಮೆ ಇರಬಹುದೇನೋ.

ಒಬ್ಬ ಮುಸ್ಲಿಂ ಸಮಾಜಸೇವಕ ರಾವ್ ಬಹದ್ದೂರ್ ಹಾಜೀ ಅಬ್ದುಲ್ಲಾ ಸಾಹೇಬ್ ಎಂಬವರು ಸರಕಾರಕ್ಕೆ ಕೇವಲ ಸಾರ್ವಜನಿಕ ಆಸ್ಪತ್ರೆ ಕಟ್ಟಲೆಂದೇ ಒಂದು ಶತಮಾನದ ಹಿಂದೆ ದಾನ ಕೊಟ್ಟಿರುವ ಜಮೀನು ಇದು. ಹಾಗಾಗಿ ಅಲ್ಲಿ ಕಟ್ಟಿರುವ ಸರಕಾರಿ ಆಸ್ಪತ್ರೆಗೆ ಅಬ್ದುಲ್ಲಾ ಸಾಹೇಬರ ಹೆಸರನ್ನೇ ಇಡಲಾಗಿದೆ. ಇದು ಗರ್ಭಗುಡಿ ಸಂಸ್ಕೃತಿಯ ಸಂಘ ಪರಿವಾರದವರಿಗೆ ಅನೇಕ ವರ್ಷಗಳಿಂದ ಕಣ್ಣು ಕುಕ್ಕುತ್ತಿರುವುದರಿಂದ ಬಿಜೆಪಿ ಮತ್ತು ಸಂಘ ಪರಿವಾರವೂ ಬಿಆರ್ ಶೆಟ್ಟಿಯ ಬೆಂಬಲಕ್ಕೆ ನಿಂತಿವೆ.

ಬಿ.ಆರ್.ಶೆಟ್ಟಿ ಭಾರತದಲ್ಲಿ ಈವರೆಗೆ ನಿಜವಾಗಿ ಒಂದೇ ಒಂದು ರೂಪಾಯಿಯ ಸಮಾಜ ಸೇವೆ ಮಾಡಿಲ್ಲ. ಸ್ವತಃ ಅವರದೇ ಜಾತಿಯ ಬಂಟರ ಮಾತೃ ಸಂಘದ ಮಂಗಳೂರಿನ ಸಂಕೀರ್ಣವನ್ನು 120 ಕೋಟಿ ವೆಚ್ಚದಲ್ಲಿ ಆಧುನಿಕ ಹಾಲ್‌ಗಳ ಸಂಕೀರ್ಣವಾಗಿ ಪರಿವರ್ತಿಸುವ ಯೋಜನೆಯನ್ನು ಇದೇ ಶೆಟ್ಟಿ ಬಂಟರ ಸಂಘದ ಮುಂದೆ ಇಟ್ಟಿದ್ದರೂ, ಈ ಯೋಜನೆಯಲ್ಲಿ ಕೇವಲ ಶೆಟ್ಟಿಯ ಲಾಭದ ಉದ್ದೇಶ ಮಾತ್ರ ಇರುವುದನ್ನು ಮನಗಂಡ ಬಂಟರ ಮಾತೃ ಸಂಘದವರೇ ಶೆಟ್ಟಿಯ ಯೋಜನೆಯನ್ನು ತಳ್ಳಿ ಹಾಕಿದ್ದರು. ಕೆಲವು ಭಾರತೀಯ ಉದ್ಯಮಿಗಳು ಎಲ್ಲೆಡೆಯೂ ಕೇವಲ ತಮ್ಮ ಲಾಭ ಮತ್ತು ಸ್ವಾರ್ಥಸಾಧನೆಯ ಮೇಲೆ ಮಾತ್ರ ಕಣ್ಣಿಟ್ಟಿರುತ್ತಾರೆ. ಕರ್ನಾಟಕ ಸರಕಾರ ಇಂತಹ ಲಾಭಬಡುಕ ಉದ್ಯಮಿಗೆ ನೂರಾರು ಕೋಟಿ ರೂಪಾಯಿ ಬೆಲೆಬಾಳುವ ನಾಲ್ಕು ಎಕರೆ ವಿಸ್ತಾರವಿರುವ ಉಡುಪಿಯ ಸರಕಾರಿ ಆಸ್ತಿ ಧಾರೆ ಎರೆದು ಕೊಟ್ಟು ಬಡವರ ಹಿತಾಸಕ್ತಿಗೆ ಧಕ್ಕೆ ತರುತ್ತಿದೆ.

ರಾಯಚೂರಿನ ಸರಕಾರಿ ಆಸ್ಪತ್ರೆಯನ್ನು 10 ವರ್ಷದ ಮಟ್ಟಿಗೆ ಅಪೋಲೋ ಆಸ್ಪತ್ರೆಗೆ ಲೀಸ್‌ಗೆ ಕೊಟ್ಟ ನಂತರ ಅವರು ರಾಯಚೂರಿನಲ್ಲಿ ಹಬ್ಬಿಸಿದ ಗಬ್ಬು ನಾತ ಇಡೀ ಉತ್ತರ ಕರ್ನಾಟಕಕ್ಕೆ ಹರಡಿತ್ತು. ಅದರಿಂದ ರಾಯಚೂರಿನ ಜನತೆಗೆ ಹಾಗೂ ಸರಕಾರಕ್ಕೆ ಆಗಿರುವ ನಷ್ಟದ ಲೆಕ್ಕ ಹಚ್ಚುವುದೇ ಕಷ್ಟವಾಗಿತ್ತು. ಉಡುಪಿಯಲ್ಲೂ ಇದೇ ಪುನರಾವರ್ತನೆ ಆಗಲು ಬಿಡಬಾರದು.

ಬಿ.ಆರ್.ಶೆಟ್ಟಿಗೆ ತನ್ನ ತವರೂರಿನ ಬಡಜನರ ಸೇವೆ ಮಾಡಬೇಕೆಂಬ ಪ್ರಾಮಾಣಿಕ ಉದ್ದೇಶ ಇರುವುದೇ ಆಗಿದ್ದರೆ ಅವರೇ ಇನ್ನೊಂದೆಡೆ ಭೂಮಿ ಖರೀದಿಸಿ ತನ್ನ ಸ್ವಂತ ಆಸ್ಪತ್ರೆ ಕಟ್ಟಿಸಿ ಬೇಕಾದಷ್ಟು ಜನಸೇವೆ ಮಾಡಲಿ, ಯಾರ ಅಭ್ಯಂತರವೂ ಇರಲಾರದು.

– ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಎಸ್‌ಎಂಎಸ್ ಕಳುಹಿಸಬಹುದು.

‘ಸಿನಿಮಾ ರಂಗಕ್ಕೆ ಬಂದಿದ್ದೇ ಆಕಸ್ಮಿಕ’

- ರಾಧಿಕಾ ಚೇತನ್



ಈ ಹಿಂದೆ ಕಾರ್ಪೊರೇಟ್ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ‘ರಂಗಿತರಂಗ’ ಖ್ಯಾತಿಯ ರಾಧಿಕಾ ಚೇತನ್. ಆ ಕೆಲಸ ಬೇಸರವಾಗಿಯೇ ರಂಗಭೂಮಿಗೆ ಬಂದರು. ಮತ್ತೇನಾದರೂ ಕಲಿಯಬೇಕು ಎಂಬ ಆಸಕ್ತಿಯು ಅವರಿಗನಿಸಿದಾಗ ಕಥಕ್ ಕಲಿಯಬೇಕೆಂದು ಪ್ರೇರೇಪಿಸಿತು. ಆನಂತರ ಅವಕಾಶ ಸಿಕ್ಕಿದ್ದು ಸಿನಿಮಾ ರಂಗದಲ್ಲಿ. ಆ ಕುರಿತಾಗಿ ರಾಧಿಕಾ ಇಲ್ಲಿ ಮಾತಾಡಿದ್ದಾರೆ.



ಕೆನ್ನೆಗುಳಿ ಚೆಲುವೆ ರಾಧಿಕಾ ಚೇತನ್ ಸ್ಯಾಂಡಲ್‌ವುಡ್‌ನ ಹಾಟ್‌ಫೇವರಿಟ್. ಬಾಕ್ಸ್ ಆಫೀಸ್‌ನಲ್ಲಿ ಧೂಳ್ ಎಬ್ಬಿಸಿರುವ ಪ್ರಯೋಗಾತ್ಮಕ ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ಇವರು, ಸಿನಿಮಾ ರಂಗದ ಬಗ್ಗೆ ಕನಸನ್ನೂ ಕಂಡವರಲ್ಲವಂತೆ. ಕಿರುಚಿತ್ರದ ಮೂಲಕ ನಿರ್ದೇಶಕರಿಗೆ ಪರಿಚಯವಾಗಿ, ಆ ನಂತರ ‘ರಂಗಿತರಂಗ’ ಚಿತ್ರದಲ್ಲಿ ನಟಿಸಿ, ಈಗ ಬಿಜಿ ನಟಿಯಾಗಿದ್ದಾರೆ. ಕಿರುಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯ ಆಗಿದ್ದರ ನೆನಪಿಗೆ ಮತ್ತೊಂದು ಕಿರುಚಿತ್ರವನ್ನೂ ಒಪ್ಪಿಕೊಂಡಿದ್ದಾರೆ. ಈ ಎಲ್ಲದರ ಕುರಿತಾದ ಮಾತು ಕತೆ ಇಲ್ಲಿದೆ.

* ***ಸಿನಿಮಾ ರಂಗಕ್ಕೆ ಬರುವ ಮುಂಚೆ ಏನಾಗಿದ್ದೀರಿ?***

ಈ ವಿಷಯವನ್ನು ಹೇಳಿದರೆ ಯಾರೂ ನಂಬಲ್ಲ. ನಾನು ಸಿನಿಮಾ ರಂಗದ ಹಿನ್ನೆಲೆಯಿಂದ ಬಂದಿರಬೇಕು ಅಂದುಕೊಂಡಿದ್ದಾರೆ. ಆದರೆ, ನಾನು ಕಾರ್ಪೊರೇಟ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೆ. ಆ ಪ್ರಪಂಚದಲ್ಲಿ ಕಳೆದುಹೋಗಿದ್ದೆ.

* ***ಸಿನಿಮಾರಂಗಕ್ಕೆ ಪರಿಚಯ ಆಗಿದ್ದು ಹೇಗೆ? ನಿಮ್ಮನ್ನು ಇಲ್ಲಿಗೆ ಕರೆತಂದವರು ಯಾರು?***

ಕಾರ್ಪೊರೇಟ್ ಕಂಪೆನಿಯ ಕೆಲಸ ಬೋರ್ ಆಯಿತು. ಕಲಾ ಪ್ರಪಂಚದಲ್ಲಿ ಏನಾದರೂ ಸಾಧಿಸಬೇಕು ಅನ್ನುವ ಛಲ ಹುಟ್ಟಿತು. ಹೀಗಾಗಿ ರಂಗಭೂಮಿಗೆ ಬಂದೆ. ಒಂದಿಷ್ಟು ನಾಟಕಗಳನ್ನು ಮಾಡಿದೆ. ನಾಟಕ ತಂಡವೊಂದು ಕಿರುಚಿತ್ರ ಮಾಡಿತ್ತು. ನಿರ್ದೇಶಕ ಅನೂಪ್ ಭಂಡಾರಿ ಆ ಕಿರುಚಿತ್ರ ನೋಡಿಯೇ ನನ್ನನ್ನು ಆಯ್ಕೆ ಮಾಡಿಕೊಂಡಿದ್ದು.

* ***ಹಾಗಾದರೆ, ನೇರವಾಗಿ ನೀವು ಸಿನಿಮಾಗೆ ಆಯ್ಕೆ ಆದಿರಿ ಅಂತಾಯ್ತು?***

ಹಾಗೇನೂ ಇಲ್ಲ. ಸ್ಕ್ರೀನ್ ಟೆಸ್ಟ್ ಮಾಡಬೇಕು ಅಂತ ನಿರ್ದೇಶಕರು ಹೇಳಿದರು. ಅವರು ಆಗ ಯುಎಸ್‌ಎ ನಲ್ಲಿ ಇದ್ದರು. ನಾನು ಇದ್ದದ್ದು ಇಂಡಿಯಾದಲ್ಲಿ. ಹಿಗಿರುವಾಗ ಸ್ಕ್ರೀನ್ ಟೆಸ್ಟ್ ಹೇಗೆ ಸಾಧ್ಯ ಅಂತ ಕೇಳಿದೆ. ಸ್ಕೈಪ್‌ನಲ್ಲಿ ನನ್ನ ಸ್ಕ್ರೀನ್ ಟೆಸ್ಟ್ ಆಗಿದ್ದು. ಆನಂತರವೇ ನಾಯಕಿಯಾಗಿ ಆಯ್ಕೆಯಾದೆ.

* ***ನಿಮಗೆ ಕಥಕ್ ನೃತ್ಯ ಕೂಡ ಬರುತ್ತದೆಯಂತೆ?***


ಹೌದು. ನಾಟಕದ ಜತೆ ಮತ್ತೇನಾದರೂ ಕಲಿಯುವ ಹುಮ್ಮಸ್ಸಾಯಿತು. ಅಲ್ಲದೇ ನನಗೆ ಡಾನ್ಸ್ ಅಂದರೆ ಪ್ರಾಣ. ಹೀಗಾಗಿಯೇ ಕಥಕ್ ಕೂಡ ಕಲಿತೆ. ಸಿನಿಮಾರಂಗಕ್ಕೆ ಬರುವ ಮುಂಚೆಯೇ ನಾನು ಕಲಿತದ್ದು.

* ***ನೀವು ಪವನ್ ಕುಮಾರ್ ಅವರ ‘ಯೂಟರ್ನ್’ ಸಿನಿಮಾದಲ್ಲೂ ನಟಿಸಿದ್ದೀರಿ. ಈ ಅವಕಾಶ ಸಿಕ್ಕಿದ್ದು ಹೇಗೆ?***

‘ರಂಗಿತರಂಗ’ ದಾಖಲೆ ಬರೆಯಿತು. ಅಲ್ಲಿ ಕೆಲಸ ಮಾಡಿದ ಕಲಾವಿದರಿಗೂ ಮತ್ತು ತಂತ್ರಜ್ಞರಿಗೂ ಬೇಡಿಕೆ ಹೆಚ್ಚಾಯಿತು. ನನ್ನ ಪಾತ್ರವನ್ನು ನೋಡಿದ್ದ ನಿರ್ದೇಶಕ ಪವನ್ ಕುಮಾರ್ ಅವರು ‘ಯೂಟರ್ನ್’ ಸಿನಿಮಾದ ಬಗ್ಗೆ ಹೇಳಿದರು. ಹೊಸ ರೀತಿಯ ಪಾತ್ರ ಅದಾಗಿದ್ದರಿಂದ ಒಪ್ಪಿಕೊಂಡೆ. ಆ ಸಿನಿಮಾ ಕೂಡ ನನಗೆ ಹೆಸರು ತಂದುಕೊಟ್ಟಿತು.

* ***ಕಿರುಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಬಂದವರು ನೀವು. ಇಷ್ಟೊಂದು ಹೆಸರು ಮಾಡಿಯೂ ಮತ್ತೆ ಕಿರುಚಿತ್ರದಲ್ಲಿ ನಟಿಸುತ್ತಿದ್ದೀರಿ?***

ಸದ್ಯ ‘ನೆವರ್ ಎಂಡ್’ ಎಂಬ ಕಿರುಚಿತ್ರದಲ್ಲಿ ನಟಿಸಿದ್ದೇನೆ. ಅದರಲ್ಲಿ ನನ್ನದು ಸಿಬಿಐ ಆಫೀಸರ್ ಪಾತ್ರ. ಇದೊಂದು ಚಿಕ್ಕ ಸಿನಿಮಾ ಅಂತ ಯಾವತ್ತೂ ನನಗೆ ಅನಿಸಿಲ್ಲ. ಅಲ್ಲಿ ಕೆಲಸ ಮಾಡಿರುವ ಪ್ರತಿಯೊಬ್ಬರೂ, ಸಿನಿಮಾ ರಂಗದಲ್ಲಿ ಪಳಗಿದವರು. ಅಲ್ಲದೇ ಫಸ್ಟ್‌ಟೈಮ್ ಅದರಲ್ಲಿ ನಾನು ಸಿಬಿಐ ಆಫೀಸರ್ ಪಾತ್ರ ಮಾಡುತ್ತಿದ್ದೇನೆ. ಅಲ್ಲದೇ ನನ್ನನ್ನು ಸಿನಿಮಾ ರಂಗಕ್ಕೆ ಪರಿಚಯಿಸಿದ್ದೇ ಕಿರುಚಿತ್ರ. ಆ ಸೆಂಟಿಮೆಂಟ್ ಕೂಡ ನನ್ನಲ್ಲಿದೆ.



* ***‘ಬಿಬಿಕೆ’ ಎಂಬ ಸಿನಿಮಾದಲ್ಲೂ ತಾವು ನಟಿಸಿದ್ದೀರಿ. ಆ ಪಾತ್ರದ ಬಗ್ಗೆ ಹೇಳಿ?***

‘ಬಿಬಿಕೆ’ ಸಿನಿಮಾದಲ್ಲಿ ನನ್ನದು ಹೊಸ ರೀತಿಯ ಪಾತ್ರ. ಅದರ ಬಗ್ಗೆ ಹೇಳುವುದಕ್ಕಿಂತ ಸಿನಿಮಾದಲ್ಲೇ ನೋಡಿದರೆ ಚೆನ್ನ. ಬಹುತೇಕ ಶೂಟಿಂಗ್ ಮುಗಿದಿದೆ. ಶೀರ್ಷಿಕೆಯಿಂದಾಗಿಯೇ ಈ ಸಿನಿಮಾ ಕುತೂಹಲ ಮೂಡಿಸಿದೆ. ಈ ಚಿತ್ರ ಕೂಡ ಮತ್ತೆ ನನಗೆ ಹೆಸರು ತಂದುಕೊಡಲಿದೆ. ■

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P Lankesh, Kannada Weekly 28-09-2016 RNI No. karkan 200

ರವಿಮಾಮ ಈಗ ಫೈನಾನ್ಸಿಯರ್



ಮೊನ್ನೆಯಷ್ಟೇ ರಿಲೀಸ್ ಆಗಿರುವ 'ಮುಂಗಾರು ಮಳೆ-2' ಚಿತ್ರದಲ್ಲಿ ನಾಯಕನ ತಂದೆಯಾಗಿ ಕಾಣಿಸಿಕೊಂಡಿದ್ದ ರವಿಚಂದ್ರನ್, ಆ ಪಾತ್ರವನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದರು. ಈಗ ಅಂಥದ್ದೇ ಮತ್ತೊಂದು ಪಾತ್ರವನ್ನು ಒಪ್ಪಿಕೊಂಡಿದ್ದಾರೆ. ಚಿರಂಜೀವಿ ಸರ್ಜಾ ಮುಖ್ಯ ಪಾತ್ರ ವಹಿಸಿರುವ 'ಸೀಜರ್' ಸಿನಿಮಾದಲ್ಲಿ ರವಿಚಂದ್ರನ್ ಫೈನಾನ್ಸಿಯರ್ ಆಗಿ ನಟಿಸಿದ್ದಾರೆ. ಜತೆಗೆ ಪ್ರಕಾಶ್ ರೈ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ವಿನಯ್ ಕೃಷ್ಣ ಚಿತ್ರಕತೆ ಬರೆದು ನಿರ್ದೇಶನ ಮಾಡುತ್ತಿದ್ದು, ಸಿನಿಮಾದ ಕತೆಯೇ ವಿಶೇಷವಾಗಿದೆಯಂತೆ. ಕಾರುಗಳಿಗೆ ಸಾಲ ಕೊಡುವ ಫೈನಾನ್ಸಿಯರ್ ಕ್ಯಾರೆಕ್ಟರ್ ರವಿಚಂದ್ರನ್‌ಗೆ ಸಿಕ್ಕಿದ್ದರೆ, ಚಿರಂಜೀವಿ ಸರ್ಜಾರದ್ದು ವಸೂಲಿ ಮಾಡುವವನ ಪಾತ್ರ. ಅಂದರೆ, ಕೊಟ್ಟ ಸಾಲ ಮರಳಿ ಬಾರದೇ ಇದ್ದಾಗ, ಅಂತಹ ವಾಹನಗಳನ್ನು ಸೀಜ್ ಮಾಡುವುದು ಚಿರಂಜೀವಿ ಕಾಯಕ. ಸಾಲದಲ್ಲಿ ಪಡೆದ ವಾಹನಗಳನ್ನು ಸಮಾಜ ವಿರೋಧಿ ಕೃತ್ಯಗಳಿಗೆ ಬಳಸಿಕೊಳ್ಳುವಂತಹ ಪಾತ್ರದಲ್ಲಿ ಪ್ರಕಾಶ್ ರೈ ಮಿಂಚಲಿದ್ದಾರೆ. ಚಿತ್ರಕ್ಕೆ ಪಾರುಲ್ ಯಾದವ್ ನಾಯಕಿ. ಬೋಲ್ಡ್ ಆಗಿರುವ ಪಾತ್ರದಲ್ಲಿ ನಟಿಸಿದ್ದಾರೆ ಪಾರೂಲ್. ಗಾಯಕ ಚಂದನ್ ಶೆಟ್ಟಿ ಚಿತ್ರಕ್ಕೆ ಸಂಗೀತ ನೀಡಿದ್ದು, ಇವರದ್ದೇ ಸಾಹಿತ್ಯದಲ್ಲಿ ಹಾಡುಗಳು ಮೂಡಿಬಂದಿವೆ. ಅಂಜಿ ಅವರ ಸಿನಿಮಾಟೋಗ್ರಫಿ ಚಿತ್ರಕ್ಕಿದೆ.


ದಸರಾಗೆ ಇದೊಳ್ಳೆ ರಾಮಾಯಣ

ಪ್ರಕಾಶ್ ರೈ ಮತ್ತು ಪ್ರಿಯಾಮಣಿ ಮುಖ್ಯ ಭೂಮಿಕೆಯಲ್ಲಿರುವ 'ಇದೊಳ್ಳೆ ರಾಮಾಯಣ' ಚಿತ್ರದ ಶೂಟಿಂಗ್ ಬಹುತೇಕ ಮುಗಿದಿದ್ದು ಇದೇ ದಸರಾಗೆ ಚಿತ್ರವನ್ನು ರಿಲೀಸ್ ಮಾಡುವ ಪ್ಲಾನ್ ಮಾಡಿದ್ದಾರೆ ನಿರ್ದೇಶಕ ಕಂ ನಟ ಪ್ರಕಾಶ್ ರೈ.

ಇದು ಮಲೆಯಾಳಂ ಸಿನಿಮಾದ ರಿಮೇಕ್ ಚಿತ್ರವಾಗಿದ್ದರೂ, ಕನ್ನಡ ನೆಲದ ವಾಸನೆ ಇದೆಯಂತೆ. ಅಲ್ಲದೇ ಐವರು ರಾಷ್ಟ್ರ ಪ್ರಶಸ್ತಿ ಪಡೆದ ನಟ ಮತ್ತು ತಂತ್ರಜ್ಞರು ಚಿತ್ರಕ್ಕಾಗಿ ಕೆಲಸ ಮಾಡಿದ್ದಾರೆ. ಹೀಗಾಗಿ ಚಿತ್ರದ ಬಗ್ಗೆ ಈಗಾಗಲೇ ನಿರೀಕ್ಷೆ ಮೂಡಿದೆ. "ರಾಮಾಯಣ ಅಂದಾಕ್ಷಣ ಏನೆಲ್ಲ ನೆನಪಾಗುತ್ತವೆಯೋ, ಅವೆಲ್ಲವೂ ಸಿನಿಮಾದಲ್ಲಿವೆ. ಹೀಗಾಗಿ ಇಂಥದ್ದೊಂದು ಶೀರ್ಷಿಕೆ ಇಟ್ಟಿದ್ದೇನೆ. ನನ್ನದೇ ಆದ ರೀತಿಯಲ್ಲಿ ಚಿತ್ರ ಮಾಡಿದ್ದೇನೆ. ನನ್ನ ಈವರೆಗಿನ ಚಿತ್ರಗಳನ್ನು ಪ್ರೇಕ್ಷಕರು ಒಪ್ಪಿಕೊಂಡಿದ್ದಾರೆ. ಈ ಸಿನಿಮಾವನ್ನು ರಿಸೀವ್ ಮಾಡುತ್ತಾರೆ ಅನ್ನುವ ನಂಬಿಕೆ ನನ್ನದು" ಅಂತಾರೆ ಪ್ರಕಾಶ್ ರೈ.

ವಿಡಿಯೋ ಗೇಮ್‌ನಲ್ಲಿ ವಿಜಿ

ಅನೇಕ ಕಾರಣಗಳಿಂದಾಗಿ 'ಮಾಸ್ತಿಗುಡಿ' ಸಿನಿಮಾ ಕುತೂಹಲ ಮೂಡಿಸಿದೆ. ಬಹುತೇಕ ಚಿತ್ರವನ್ನು ಕಾಡಿನಲ್ಲೇ ಶೂಟ್ ಮಾಡಿರುವ ನಿರ್ದೇಶಕರು, ಈ ಬಾರಿ 3ಡಿ ದೃಶ್ಯಗಳುಳ್ಳ ವಿಡಿಯೋ ಗೇಮ್‌ನ್ನು ರೆಡಿ ಮಾಡಿದ್ದಾರೆ. ಏಳು ಹಂತಗಳಲ್ಲಿ ತಯಾರಾಗುತ್ತಿರುವ ಈ ಗೇಮ್‌ನಲ್ಲಿ ಸಿನಿಮಾದಷ್ಟೇ ರೋಚಕ ಹಂತಗಳು ಇರಲಿವೆಯಂತೆ. ಅಲ್ಲದೇ, ಕನ್ನಡ ಸಿನಿಮಾರಂಗದಲ್ಲಿ ಸಿನಿಮಾ ಆಧಾರಿತ 3ಡಿ ಗೇಮ್ ಆಪ್ ಇದೇ ಮೊದಲ ಬಾರಿಗೆ ಬರುತ್ತಿರುವುದರಿಂದ ಪ್ರೇಕ್ಷಕರು ಕೂಡ ಅಷ್ಟೇ ನಿರೀಕ್ಷೆಯಲ್ಲಿದ್ದಾರೆ.



ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಈ ಗೇಮ್ ಬಿಡುಗಡೆಯಾಗಲಿದ್ದು, ನಾಯಕ ದುನಿಯಾ ವಿಜಯ್, ರವಿಶಂಕರ್, ಅಮೂಲ್ಯ, ಕೀರ್ತಿ ಕರಬಂಧ ಮುಂತಾದ ಪಾತ್ರಗಳು ಇರಲಿವೆಯಂತೆ. ಹಂತಹಂತವಾಗಿ ಗೇಮ್‌ನ್ನು ರಿಲೀಸ್ ಮಾಡಲು ಪ್ಲಾನ್ ಮಾಡಲಾಗಿದ್ದು, ಎಲ್ಲ ಮೊಬೈಲ್ ನೆಟ್‌ವರ್ಕ್‌ಗಳಲ್ಲೂ ಈ ಗೇಮ್ ಸಿಗಲಿದೆ.

ಇದು ನಾಗಶೇಖರ್ ನಿರ್ದೇಶನದ ಚಿತ್ರ. ಸತ್ಯ ಹೆಗಡೆ ಸಿನಿಮಾಟೋಗ್ರಫಿಯಲ್ಲಿ ಚಿತ್ರ ಮೂಡಿಬಂದಿದ್ದು, ಸಾಧು ಕೋಕಿಲಾ ಸಂಗೀತ ನೀಡಿದ್ದಾರೆ. ದೇವರಾಜ್, ಸುಹಾಸಿನಿಯಂಥ ಹೆಸರಾಂತ ನಟರು ತಾರಾಗಣದಲ್ಲಿದ್ದಾರೆ.

ಬಿಗ್‌ಬಾಸ್‌ನಲ್ಲಿ ಯಾರುಂಟ

ಕನ್ನಡ ಕಲರ್ಸ್ ವಾಹಿನಿಯಲ್ಲಿ ಮತ್ತೊಂದು ಬಿಗ್‌ಬಾಸ್ ಸರಣಿ ಶುರುವಾಗಲಿದೆ. ಈ ಬಾರಿ ಬಿಗ್‌ಬಾಸ್ ಮನೆಯಲ್ಲಿ ಯಾರೆಲ್ಲ ಬಂಧಿ ಆಗಲಿದ್ದಾರೆ ಎಂಬ ಕುತೂಹಲ ಕೂಡ ಮೂಡಿದೆ. ಈಗಾಗಲೇ ವಾಹಿನಿಯು ರಿಯಾಲಿಟಿ ಶೋನ ಪ್ರೊಮೋ ಕೂಡ ಶೂಟ್ ಮಾಡಿದ್ದು, ಕಿಚ್ಚ ಸುದೀಪ್ ಸಖತ್ ಸ್ಟೈಲೀಶ್ ಆಗಿ ಕಂಡಿದ್ದಾರೆ. ಹೀಗಾಗಿ ಬಂಧಿ ಆಗಲಿರುವ ಸೆಲಿಬ್ರಿಟಿಗಳು ಕೂಡ ಅಷ್ಟೇ ಸ್ಟೈಲಿಶ್ ಆಗಿ ಇರಲಿದ್ದಾರೆ ಅನ್ನುವ ಮಾಹಿತಿಯೂ ಹೊರ ಬಿದ್ದಿದೆ.


ಬಲ್ಲ ಮೂಲಗಳ ಪ್ರಕಾರ ಲೂಸ್‌ಮಾದ ಯೋಗಿ, ಐಂದ್ರಿತಾ ರೇ, ನವೀನ್ ಕೃಷ್ಣ, ಶುಭಾ ಪೂಂಜಾ, ಶೀತಲ್ ಶೆಟ್ಟಿ, ಕಾರುಣ್ಯ ರಾಮ್, ರಚಿತಾ ... ಮತ್ತು ರಾಗಿಣಿ ಮುಂತಾದವರನ್ನು ಸಂಪರ್ಕಿಸಲಾಗಿದೆ. ... ಮತ್ತು ರಾಗಿಣಿಯ ಹೊರತಾಗಿ ಬಹುತೇಕರಿಗೆ ಬಿಗ್‌ಬಾ... ಕಾಣಿಸಿಕೊಳ್ಳುವ ಬಯಕೆ ಇದೆ ಎನ್ನಲಾಗುತ್ತಿದೆ.

ಸದ್ಯ ಕಿಚ್ಚ ಸುದೀಪ್ 'ಹೆಬ್ಬುಲಿ' ಸಿನಿಮಾದ ಶೂಟಿ... ಬಿಜಿ ಆಗಿದ್ದಾರೆ. ಹೀಗಾಗಿ ಮುಂದಿನ ತಿಂಗಳಿನಿಂದ ಬಿ... ಶುರುವಾಗಲಿದೆಯಂತೆ.



ಸಿಡಿಮಿಡಿಗೊಂಡ ಶಿವಣ್ಣ

ಕಾವೇರಿ ಹೋರಾಟದ ವಿಷಯದಲ್ಲಿ ಹೀರೋಗಳು ರಾಜಕಾರಣ ಮಾಡುತ್ತಿರುವುದಕ್ಕೆ ಶಿವರಾಜ್‌ಕುಮಾರ್ ಅಸಮಾಧಾನಗೊಂಡಿದ್ದಾರೆ. ಅದನ್ನು ಬಹಿರಂಗವಾಗಿಯೂ ತೋರಿಸಿದ್ದಾರೆ. ಮೊನ್ನೆಯಷ್ಟೇ ನಡೆದ ಹೋರಾಟದಲ್ಲಿ ಬಹುತೇಕ ಸ್ಟಾರ್ ನಟರು ಕೈಕೊಟ್ಟಿದ್ದರು. ಅಲ್ಲದೇ ನಾಯಕಿಯರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಬಂದಿದ್ದ ಕೆಲವು ಸ್ಟಾರ್ ನಟರು ತಮ್ಮ ಅಭಿಮಾನಿಗಳ ಜತೆ ಆಗಮಿಸಿದ್ದು, ಶಿವರಾಜ್‌ಕುಮಾರ್‌ಗೆ ಕೋಪ ತರಿಸಿತ್ತು. ಹೀಗಾಗಿ ಶಿವರಾಜ್‌ಕುಮಾರ್ ವೇದಿಕೆಯ ಮೇಲೆಯೇ ಮೂರನೇ ಕಣ್ಣು ತೆರೆದಿದ್ದರು. ಇಲ್ಲಿ ರಾಜಕೀಯ ಮಾಡೋದು ಬೇಡ ಅಂತಾನೇ ಪರೋಕ್ಷವಾಗಿ ಟಾಂಗ್ ಕೊಟ್ಟರು. ಸ್ಯಾಂಡಲ್‌ವುಡ್‌ಗೆ ಸದ್ಯ ಒಬ್ಬ ಮಾಸ್‌ಲೀಡರ್‌ನ ಅವಶ್ಯಕತೆ ಇದೆ. ಅಂಬರೀಷ್ ಅವರನ್ನು ನೆಚ್ಚಿಕೊಳ್ಳಲು ಯಾರೂ ತಯಾರಿಲ್ಲ. ಹೀಗಾಗಿ ಆ ಪಟ್ಟವನ್ನು ಶಿವರಾಜ್‌ಕುಮಾರ್‌ಗೆ ಕಟ್ಟಲು ನೋಡಲಾಗುತ್ತಿದೆ. ಇದು ಹಲವು ನಟರ ಅಸಮಾಧಾನಕ್ಕೂ ಕಾರಣವಾಗಿದೆ. ಇದೆಲ್ಲವನ್ನೂ ಅರಿತಿರುವ ಶಿವಣ್ಣ ಸಿಡಿಮಿಡಿಕೊಂಡಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No.9, E.A.T street, Basavanagudi, Bangalore-04, Phone: 2667642
Fax: 26604536, Email : lankesh70@rediffmail.com